ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 11 ಸೋಮವಾರ 2022

ಸಂಪುಟ: 43 | ಸಂಚಿಕೆ: 351 | ಪುಟಗಳು: 12

₹4

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

ಇಂದು ಪಾಕಿಸ್ತಾನ ಪ್ರಧಾನಿ ಆಯ್ಕೆ

ಇಸ್ಲಾಮಾಬಾದ್: ಪಾಕಿಸ್ತಾನ ಸಂಸತ್ ಕಲಾಪಗಳನ್ನು ಭಾನುವಾರ ನಸುಕಿನ ಜಾವ ಮುಂದೂಡಲಾಗಿದ್ದು, ಅವಿಶ್ವಾಸ ನಿರ್ಣಯದ ಮೂಲಕ ಪಾಕಿಸ್ತಾನ ಪ್ರಧಾನ ಮಂತ್ರಿ ಇಮ್ರಾನ್ ಖಾನ್ ಅವರನ್ನು ಹುದ್ದೆಯಿಂದ ತೆಗೆದುಹಾಕಿದ ನಂತರ ಹೊಸ ಪ್ರಧಾನಿ ಆಯ್ಕೆಗೆ ಸೋಮವಾರ ಮಧ್ಯಾಹ್ನ 2 ಗಂಟೆಗೆ ಮತ್ತೆ ಸದನ ಸೇರಲಿದೆ.

ನಿನ್ನೆ ಅವಿಶ್ವಾಸ ನಿರ್ಣಯದಿಂದ ಹಿಡಿದು ಇಂದಿನ ಮುಂಜಾನೆಯವರೆಗೆ ಸದನದ ಮುಂದಾಳತ್ವ ವಹಿಸಿದ್ದ ಮುಸ್ಲಿಂ ಲೀಗ್ ನವಾಜ್‌ನ ಅಯಾಜ್ ಸಾದಿಕ್ ಸೋಮವಾರ 11 ಗಂಟೆಗೆ ಸದನ ಕರೆದು ಹೊಸ ಪ್ರಧಾನಿಯ ಆಯ್ಕೆ ನಡೆಯಲಿದೆ. ಆದರೆ ಪಾಕಿಸ್ತಾನದ ರಾಷ್ಟ್ರೀಯ ಅಸೆಂಬ್ಲಿ ಹೇಳಿರುವ ಪ್ರಕಾರ ಏಪ್ರಿಲ್ 11ರಂದು ಮಧ್ಯಾಹ್ನ 2 ಗಂಟೆಗೆ ಸದನ ಸೇರಲಿದೆ. ರಾಷ್ಟ್ರೀಯ ಅಸೆಂಬ್ಲಿ ● 9ನೇ ಪುಟಕ್ಕೆ

ಸಬ್‌ಇನ್ಸ್‌ಪೆಕ್ಟರ್ ಹುದ್ದೆ ನೇಮಕಾತಿಯಲ್ಲಿ ಅಕ್ರಮ ಸಿಐಡಿ ತನಿಖೆಗೆ

ಬೆಂಗಳೂರು: ಇತ್ತೀಚೆಗೆ ನಡೆದ 545 ಸಬ್ ಇನ್ಸ್‌ಪೆಕ್ಟರ್ ನೇಮಕಾತಿಯಲ್ಲಿನ ಅಕ್ರಮ ಕುರಿತಂತೆ, ರಾಜ್ಯ ಸರ್ಕಾರ ಸಿಐಡಿ ತನಿಖೆಗೆ ಆದೇಶಿಸಿದೆ.

ಈ ಕುರಿತಂತೆ ಮಾಹಿತಿ ನೀಡಿದ ಗೃಹ ಸಚಿವ ಅರಗ ಜ್ಞಾನೇಂದ್ರ ಅವರು, ಪೊಲೀಸ್ ಇಲಾಖೆಗೆ 545 ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ಪರೀಕ್ಷೆ ನಡೆದಿತ್ತು, ತಾತ್ಕಾಲಿಕ ನೇರ ನೇಮಕಾತಿ ಪಟ್ಟಿ ಬಿಡುಗಡೆ ಆಗಿದೆ. ಇದರ ಬಗ್ಗೆ ಸಾರ್ವಜನಿಕರಲ್ಲಿ ಬಹಳಷ್ಟು ಅನುಮಾನ ಇತ್ತು. ಇದರಲ್ಲಿ ಸಾಕಷ್ಟು ಅಕ್ರಮ ನಡೆದಿದೆ ಎಂದು ಇತ್ತೀಚೆಗೆ ಸಾರ್ವಜನಿಕರಿಂದ ದಾಖಲೆ, ಮಾಹಿತಿ ಸಿಕ್ಕಿದೆ. ಈ ಹಿನ್ನಲೆಯಲ್ಲಿ ಸಿಐಡಿ ತನಿಖೆಗೆ ವಹಿಸಿದ್ದೇವೆ ಎಂದು ತಿಳಿಸಿದರು. ● 9ನೇ ಪುಟಕ್ಕೆ

ಮೈಸೂರು ಜಿಲ್ಲೆಯಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಆರಂಭವಾಗ ಬೇಕಾಗಿದ್ದ

ಬೂಸ್ಟರ್ ಡೋಸ್ ಅಭಿಯಾನಕ್ಕೆ ತೊಡಕು

- ಬೆಲೆ ಕಡಿತಗೊಳಿಸಿರುವುದರಿಂದ ಖಾಸಗಿ ಆಸ್ಪತ್ರೆಗಳು ಹಿಂದೇಟು
- ಜಿಲ್ಲೆಯಲ್ಲಿ 4,78,972 ಮಂದಿಗೆ ಬೂಸ್ಟರ್ ಡೋಸ್ ನೀಡುವ ಗುರಿ

ಮೈಸೂರು,ಏ.10(ಎಂಟಿವೈ)– ಎರಡು ಡೋಸ್ ಕೋವಿಡ್ ಲಸಿಕೆ ಪಡೆದ 18 ವರ್ಷದ ಮೇಲ್ಪಟ್ಟವರಿಗೆ ಇಂದಿನಿಂದ (ಭಾನುವಾರ) ಖಾಸಗಿ ಆಸ್ಪತ್ರೆಗಳಲ್ಲಿ ಆರಂಭವಾಗಬೇಕಾಗಿದ್ದ ಬೂಸ್ಟರ್ ಡೋಸ್ ನೀಡುವ ಅಭಿಯಾನಕ್ಕೆ ಬೆಲೆ ನಿಗದಿ ಸಮಸ್ಯೆ ಉಂಟಾಗಿದ್ದು, ಇದರಿಂದ ಮೈಸೂರಲ್ಲಿ ಇನ್ನು ಎರಡು ದಿನದವರೆಗೂ ಬೂಸ್ಟರ್ ಡೋಸ್ ನೀಡದಿರಲು ಖಾಸಗಿ ಆಸ್ಪತ್ರೆಗಳು ನಿರ್ಧರಿಸಿವೆ.



2ನೇ ಡೋಸ್ ಪಡೆದು 9 ತಿಂಗಳಾಗಿದ್ದ 18 ವರ್ಷದ ಮೇಲ್ಪಟ್ಟವರಿಗೆ ಇಂದಿನಿಂದ ಬೂಸ್ಟರ್ ಡೋಸ್ ನೀಡಲು ಕೇಂದ್ರ ಸರ್ಕಾರ ಸೂಚಿಸಿತ್ತು. ಆರಂಭಿಕ ಹಂತದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಬೂಸ್ಟರ್ ಡೋಸ್ ನೀಡಲು ನಿರ್ಧರಿಸಲಾಗಿತ್ತು. ಆದರೆ, ಸೀರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಮತ್ತು ಭಾರತ್ ಬಯೋಟೆಕ್ ಈ ಹಿಂದೆ ನಿಗದಿ ಮಾಡಿದ್ದ ದರದಲ್ಲಿ ಕಡಿತಗೊಳಿಸಿರುವುದೇ ಖಾಸಗಿ ಆಸ್ಪತ್ರೆಗಳಲ್ಲಿ ಅಭಿಯಾನ ಆರಂಭವಾಗುವುದು ತಡವಾಗುವ ಸಾಧ್ಯತೆ ಇದೆ.

ಜಿಲ್ಲೆಯ ಬೂಸ್ಟರ್ ಡೋಸ್ ಫಲಾನುಭವಿಗಳು

ಮೈಸೂರು ನಗರ–	1,99,034
ಮೈಸೂರು ತಾ–	41,237
ತಿ.ನರಸೀಪುರ–	40,087
ನಂಜನಗೂಡು–	53,547
ಹುಣಸೂರು–	39,302
ಹೆಚ್.ಡಿ.ಕೋಟೆ–	37,067
ಪಿರಿಯಾಪಟ್ಟಣ–	33,717
ಕೆ.ಆರ್.ನಗರ–	34,981
ಒಟ್ಟು–	4,78,972

ದರ ಕಡಿತ: ಖಾಸಗಿ ಆಸ್ಪತ್ರೆಗಳು ಕೋವಿಶೀಲ್ಡ್ ಲಸಿಕೆಗೆ 600 ರೂ., ಕೋವಾಕ್ಸಿನ್‌ಗೆ 1200 ರೂ. ನೀಡಿ ಖರೀದಿಸಿವೆ. ಆದರೆ ಸರ್ಕಾರ ಬೂಸ್ಟರ್ ಡೋಸ್‌ಗೆ 225 ರೂ. ಮಾತ್ರ ದರ ನಿಗಧಿ ಮಾಡಿರುವುದರಿಂದ ಖಾಸಗಿ ಆಸ್ಪತ್ರೆಗಳು ಇಂದಿನಿಂದ ಬೂಸ್ಟರ್ ಡೋಸ್ ನೀಡಲು ಹಿಂದೇಟು ಹಾಕಿವೆಯಲ್ಲದೆ, ಸರ್ಕಾರ ದರ ಪರಿಷ್ಕರಿಸುವಂತೆ ಮನವಿ ಮಾಡಿವೆ.

ಪೇಚಿಗೆ ಸಿಲುಕಿದ ಆಸ್ಪತ್ರೆಗಳು: ಸರ್ಕಾರಿ ಆಸ್ಪತ್ರೆಗಳಲ್ಲಿ 18 ವರ್ಷ ಮೇಲ್ಪಟ್ಟವರಿಗೆ ಇನ್ನೂ ಬೂಸ್ಟರ್ ಡೋಸ್ ನೀಡಲು ಇನ್ನೂ ಮುಂದಾಗಿಲ್ಲ. ಆದರೆ, ಖಾಸಗಿ ಆಸ್ಪತ್ರೆಗಳು ● 9ನೇ ಪುಟಕ್ಕೆ

ಖಾಸಗಿ ಲಸಿಕಾ ಕೇಂದ್ರಗಳಿಗೆ ಸೆರಮ್ ಇನ್ಸ್ಟಿಟ್ಯೂಟ್‌ನಿಂದ ಉಚಿತ ಕೋವಿಶೀಲ್ಡ್ ಲಸಿಕೆ

ನವದೆಹಲಿ, ಏ. 10– ಖಾಸಗಿ ಆಸ್ಪತ್ರೆಗಳಿಗೆ ಕೋವಿಶೀಲ್ಡ್ ಡೋಸ್ ಲಸಿಕೆಯ ದರವನ್ನು 225 ರೂಪಾಯಿಗಳಿಗೆ ಇಳಿಕೆ ಮಾಡಿದ ಬೆನ್ನಲ್ಲೇ ಸೆರಮ್ ಇನ್ಸ್ಟಿಟ್ಯೂಟ್ ಆಫ್ ಇಂಡಿಯಾ (ಎಸ್‌ಐಐ) ಬೆಲೆ ವ್ಯತ್ಯಾಸಕ್ಕೆ ಪರಿಹಾರ ನೀಡುವುದಾಗಿ ಹೇಳಿದೆ. ಖಾಸಗಿ ಕೇಂದ್ರಗಳಲ್ಲಿ ಕಾಲಮಿತಿ ಮುಗಿದಿರದ ಸರಕುಗಳಿಗೆ ಬದಲಾಗಿ ಉಚಿತವಾಗಿ ಹೊಸ ಸರಕುಗಳನ್ನು ನೀಡುವುದಾಗಿ ಸಂಸ್ಥೆ ಘೋಷಿಸಿದೆ.

ಸರ್ಕಾರದೊಂದಿಗೆ ಚರ್ಚಿಸಿದ ಬಳಿಕ ಖಾಸಗಿ ಆಸ್ಪತ್ರೆಗಳಿಗೆ ಕೋವಿಡ್ ಡೋಸ್ ಲಸಿಕೆಗಳಿಗೆ ರೂಪಾಯಿ 225 ನ್ನು ನಿಗದಿಪಡಿಸುವುದಾಗಿ ಸೆರಮ್ ಇನ್ಸ್ಟಿಟ್ಯೂಟ್ ಹಾಗೂ ಭಾರತ್ ಬಯೋಟೆಕ್ ಸಂಸ್ಥೆಗಳು ಶನಿವಾರ ಹೇಳಿದ್ದವು. ಈಗಾಗಲೇ ಉಳಿದಿರುವ ಸರಕುಗಳಿಗೆ ಉಂಟಾಗುವ ಬೆಲೆ ವ್ಯತ್ಯಾಸಕ್ಕೆ ಪರಿಹಾರ ನೀಡುವುದಾಗಿ ಭಾರತ್ ಬಯೋಟೆಕ್ ಸಹ ಹೇಳಿಕೆ ನೀಡಿತ್ತು.

ಕೋವಿಡ್ ಹೋಗಿಲ್ಲ, ರೂಪ ಬದಲಿಸಿ, ಮತ್ತೆ ಮರುಕಳಿಸುತ್ತಿದೆ

ಪ್ರಧಾನಿ ನರೇಂದ್ರ ಮೋದಿ ಎಚ್ಚರಿಕೆ



ಅಹಮದಾಬಾದ್,ಏ.10–ಕೊರೊನಾ ವೈರಸ್ ಹೋಗಿಲ್ಲ. ರೂಪ ಬದಲಾಯಿಸುತ್ತಾ ಮತ್ತೆ ಮರುಕಳಿಸುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಸಾಂಕ್ರಾಮಿಕ ರೋಗದ ವಿರುದ್ಧದ ಹೋರಾಟವನ್ನು ಕೈಬಿಡಬೇಡಿ ಎಂದು ಎಚ್ಚರಿಸಿದ್ದಾರೆ.

'ಬಹುರುಪಿಯಾ' (ರೂಪವನ್ನು ಬದಲಾಯಿಸುವ) ಕೋವಿಡ್–19 ಯಾವಾಗ ಪುನರುಜ್ಜೀವನಗೊಳ್ಳುತ್ತದೆ ಎಂದು ಯಾರಿಗೂ ತಿಳಿದಿಲ್ಲ, ಅದರ ಹರಡುವಿಕೆಯನ್ನು ನಿಯಂತ್ರಿಸಲು ಸುಮಾರು 185 ಕೋಟಿ ಡೋಸ್ ಲಸಿಕೆಗಳನ್ನು ನೀಡುವುದು ಸಾರ್ವಜನಿಕ ಬೆಂಬಲದಿಂದಾಗಿ ಸಾಧ್ಯವಾಯಿತು ಎಂದು ನರೇಂದ್ರ ಮೋದಿ ಹೇಳಿದರು.

ಗುಜರಾತಿನ ಜುನಾಗಢ್ ಜಿಲ್ಲೆಯಲ್ಲಿ ಮಾ ಉಮಿಯಾ ಧಾಮ್ ಕಾರ್ಯಕ್ರಮವನ್ನು ವಿಡಿಯೋ ಕಾನ್ಫರೆನ್ಸ್ ಮೂಲಕ ಉದ್ದೇಶಿಸಿ ಮಾತನಾಡಿದ ಮೋದಿ, ರಾಸಾಯನಿಕ ಗೊಬ್ಬರಗಳ ಹಾವಳಿಯಿಂದ ಭೂಮಿ ತಾಯಿಯನ್ನು ಉಳಿಸುವ ಉದ್ದೇಶದಿಂದ ನೈಸರ್ಗಿಕ ಕೃಷಿಯತ್ತ ಮುಖಮಾಡುವಂತೆ ಮಾ ಉಮಿಯಾ ಭಕ್ತರನ್ನು ಒತ್ತಾಯಿಸಿದರು. ಕೊರೊನಾ ಒಂದು ದೊಡ್ಡ ಬಿಕ್ಕಟ್ಟು, ಮತ್ತು ಬಿಕ್ಕಟ್ಟು ಮುಗಿದಿದೆ ಎಂದು ನಾನು ಹೇಳುತ್ತಿಲ್ಲ. ಇದು ವಿರಾಮ ತೆಗೆದುಕೊಂಡಿರಬಹುದು. ಆದರೆ ಅದು ಯಾವಾಗ ಮರುಕಳಿಸುತ್ತದೆ ಎಂದು ನಮಗೆ ತಿಳಿದಿಲ್ಲ.

ಇದು 'ಬಹುರೂಪಿ' ಸಾಂಕ್ರಾಮಿಕವಾಗಿದೆ. ಇದನ್ನು ನಿಲ್ಲಿಸಲು, ಸುಮಾರು 185 ಕೋಟಿ ಡೋಸ್‌ಗಳನ್ನು ನೀಡಲಾಗಿದ್ದು, ಇದು ಜಗತ್ತನ್ನು ಅಚ್ಚರಿಗೊಳಿಸಿದೆ. ನಿಮ್ಮ ಬೆಂಬಲದಿಂದ ಇದು ಸಾಧ್ಯವಾಗಿದೆ ಎಂದು ಮೋದಿ ಹೇಳಿದರು.

ಭೂಮಿ ತಾಯಿಯನ್ನು ಉಳಿಸುವ ಅಗತ್ಯವಿದೆ. ಹೀಗಾಗಿ ಗುಜರಾತ್‌ನ ಪ್ರತಿಯೊಂದು ಹಳ್ಳಿಯ ರೈತರು ನೈಸರ್ಗಿಕ ಕೃಷಿಗೆ ಮುಂದಾಗಬೇಕು ಎಂದರು. ಭಾರತದ ಸ್ವಾತಂತ್ರ್ಯದ 75ನೇ ವರ್ಷದಲ್ಲಿ ಆಯೋಜಿಸಲಾಗುತ್ತಿರುವ ● 9ನೇ ಪುಟಕ್ಕೆ

ಸಂವಿಧಾನದ 370ನೇ ವಿಧಿ ರದ್ಧತಿ ನಂತರ 2,100 ಪಂಡಿತರು ಕಾಶ್ಮೀರಕ್ಕೆ ವಾಪಸ್

ಜಮ್ಮು–ಕಾಶ್ಮೀರ,ಏ.10–ಉಗ್ರರ ಬೆದರಿಕೆಯ ಹೊರತಾಗಿಯೂ, ಕಾಶ್ಮೀರದಿಂದ ವಲಸೆ ಹೋಗಿದ್ದ ಕಾಶ್ಮೀರಿ ಮಾತನಾಡುವ ಹಿಂದೂ ಪಂಡಿತರು ಸಂವಿಧಾನದ 370ನೇ ವಿಧಿ ರದ್ದತಿ ನಂತರ ಅಪಾರ ಪ್ರಮಾಣದಲ್ಲಿ ಕಣಿವೆ ಪ್ರದೇಶಕ್ಕೆ ಮರಳುತ್ತಿದ್ದಾರೆ. ನಾಲ್ವರು ಕಾಶ್ಮೀರಿ ಪಂಡಿತರ ಕೊಲೆ ಸೇರಿದಂತೆ ಅಲ್ಪಸಂಖ್ಯಾತ ಸಮುದಾಯಗಳ ಸದಸ್ಯರು, ವಲಸೆ ಕಾರ್ಮಿಕರ ಮೇಲೆ ಉಗ್ರರ ಹಲ್ಲೆಯ ಹೊರತಾಗಿಯೂ ಸುಮಾರು 2,100 ಪಂಡಿತರು ಕಾಶ್ಮೀರಕ್ಕೆ ಹಿಂತಿರುಗಿದ್ದಾರೆ.

ಕಾಶ್ಮೀರದಲ್ಲಿ ರಕ್ತದೋಕುಳಿ ಸಂಭವಿಸಿದಾಗ ಸುಮಾರು 55,000 ಪಂಡಿತ ಕುಟುಂಬಗಳು 1990ರಲ್ಲಿ ತಮ್ಮ ಪುರಾತನ ಮನೆಗಳನ್ನು ತೊರೆದು ಜಮ್ಮು ಮತ್ತಿತರ ● 9ನೇ ಪುಟಕ್ಕೆ

ಚಂದ್ರು ಹತ್ಯೆ: ತನಿಖೆ ಸಿಐಡಿಗೆ

ಬೆಂಗಳೂರು,ಏ.10–ಸಾಕಷ್ಟು ವಿವಾದಕ್ಕೆ ಕಾರಣವಾಗಿರುವ ಚಂದ್ರು ಹತ್ಯೆ ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಇಲ್ಲಿ ಯಾರ ಹೇಳಿಕೆಯೂ ಮುಖ್ಯವಲ್ಲ, ಸತ್ಯ ಹೊರಬರಬೇಕು ಅಷ್ಟೇ. ಯಾರು ವಾಗ್ದಾಳಿ ಮಾಡ್ತಾರೋ, ಯಾರು ಹೇಳಿಕೆ ಕೊಡ್ತಾರೋ ಅದು ಮುಖ್ಯವಾಗುವುದಿಲ್ಲ. ಘಟನೆಯ ಸತ್ಯಾಂಶ ಜನರಿಗೆ ಗೊತ್ತಾಗಬೇಕಿದೆ. ಈ ಹಿನ್ನೆಲೆ ನಿನ್ನೆ ನಾನು ಪೊಲೀಸ್ ಕಮಿಷನರ್ ಮತ್ತು ಡಿಜಿಯವರ ಬಳಿ ಮಾತನಾಡಿದ್ದೇನೆ. ಈ ಪ್ರಕರಣವನ್ನು ಸಿಐಡಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ ಎಂದು ಹೇಳಿದರು.

ಚಂದ್ರು ಹತ್ಯೆ ಪ್ರಕರಣದ ಬಗ್ಗೆ ನಿಷ್ಪಕ್ಷಪಾತವಾಗಿ ತನಿಖೆಯಾಗಿ ಸತ್ಯ ಹೊರಗಡೆ ಬರಬೇಕು. 3ನೇ ಪಾರ್ಟಿಯಿಂದಲೇ ತನಿಖೆಯಾಗಲಿ, ಒಟ್ಟಾರೆ ಸತ್ಯ ಹೊರಗಡೆ ● 9ನೇ ಪುಟಕ್ಕೆ

ಏಷ್ಯಾದಲ್ಲೇ ಅತಿ ಎತ್ತರದ 161 ಅಡಿ ಆಂಜನೇಯ ಮೂರ್ತಿ ಉದ್ಘಾಟಿಸಿದ ಸಿಎಂ ಬೊಮ್ಮಾಯಿ

ತುಮಕೂರು, ಏ.10–ಕುಣಿಗಲ್ ತಾಲೂಕಿನ ಬಿದನಗೆರೆಯಲ್ಲಿ ಬಸವೇಶ್ವರ ಮಠದಿಂದ ನಿರ್ಮಿಸಿರುವ 161 ಅಡಿ ಎತ್ತರದ ಪಂಚಮುಖಿ ಆಂಜನೇಯಸ್ವಾಮಿ ಮೂರ್ತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಿದರು. ಇದು ಇಡೀ ಏಷ್ಯಾದಲ್ಲಿಯೇ ಅತಿ ಎತ್ತರದ ಪಂಚಮುಖಿ ಆಂಜನೇಯ ಮೂರ್ತಿಯಾಗಿದೆ.

ನಂತರ ಮಾತನಾಡಿದ ಅವರು, ಶ್ರೀ ರಾಮನವಮಿ ದಿನ ಈ ಪವಿತ್ರ ಕಾರ್ಯಕ್ರಮ ನಡೆದಿದೆ. ವಿಶ್ವದಲ್ಲೇ ಅತಿ ಎತ್ತರದ ಪಂಚಮುಖಿ ಆಂಜನೇಯ ಮೂರ್ತಿ ಇದಾಗಿದೆ. ಪಂಚಮುಖಿ ಬಹಳ ಅಪರೂಪ. ರಾಮಾಯಣದ ವಿಶೇಷ ಸಂದರ್ಭದಲ್ಲಿ ಹನುಮನ ಅವತಾರ ಇದಾಗಿದೆ. ಲೋಕ ಕಲ್ಯಾಣಕ್ಕಾಗಿ ಹನುಮ ಈ ಅವತಾರ ಎತ್ತಿದ್ದ ಎನ್ನುವ ಪ್ರತೀತಿ ಇದೆ ಎಂದರು.

ಇಬ್ಬರು ಸ್ವಾಮೀಜಿಗಳು ಈ ಅದ್ಭುತ ಮೂರ್ತಿಗೆ ಜೀವ ತುಂಬುವ ಕೆಲಸ ಮಾಡಿದ್ದಾರೆ. ಇದು ಇಡೀ ವಿಶ್ವದಲ್ಲೇ ಅಪರೂಪದ ಮೂರ್ತಿಯಾಗಿದೆ. ಈ ಕ್ಷೇತ್ರದ ಮಹಿಮೆ ಜಗತ್ತಿಗೆ ಹರಡಲಿದೆ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಹೇಳಿದರು.



ಚಾಮುಂಡಿಬೆಟ್ಟಕ್ಕೆ ರೋಪ್ ವೇ ಅನಗತ್ಯ

- ಚಾ.ನಗರ ಸಂಸದ ವಿ.ಶ್ರೀನಿವಾಸ ಪ್ರಸಾದ್ ಪುನರುಚ್ಚಾರ
- ಯೋಜನೆ ಬೆಟ್ಟಕ್ಕೆ ಕಂಟಕ ಎಂಬುದನ್ನು ಸಿಎಂಗೆ ಪತ್ರ

ಮೈಸೂರು,ಏ.10(ಎಸ್‌ಬಿಡಿ)– ಮೈಸೂರಿನ ಚಾಮುಂಡಿಬೆಟ್ಟಕ್ಕೆ ರೋಪ್ ವೇ ಅನಗತ್ಯ. ಈ ಬಗ್ಗೆ ಜಿಲ್ಲಾ ಉಸ್ತುವಾರಿ ಸಚಿವರು ಮುಖ್ಯಮಂತ್ರಿಗಳಿಗೆ ವಸ್ತುಸ್ಥಿತಿ ತಿಳಿಸಬೇಕೆಂದು ಸಂಸದ ವಿ.ಶ್ರೀನಿವಾಸ ಪ್ರಸಾದ್ ಪುನರುಚ್ಚರಿಸಿದ್ದಾರೆ.

ಮೈಸೂರಿನ ತಮ್ಮ ನಿವಾದಲ್ಲಿ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸಂಪರ್ಕವಿಲ್ಲದ ಸ್ಥಳಗಳಲ್ಲಿ ಪ್ರವಾಸಿಗರು ಅಥವಾ ಭಕ್ತರ ಅನುಕೂಲಕ್ಕಾಗಿ ರೋಪ್ ವೇ ನಿರ್ಮಿಸುವುದು ಸರಿ. ಆದರೆ ಚಾಮುಂಡಿಬೆಟ್ಟಕ್ಕೆ ಮೂರ್‍ನಾಲ್ಕು ಸಂಪರ್ಕ ರಸ್ತೆಗಳಿವೆ. ಬೆಟ್ಟದಲ್ಲಿ ಉಳಿದುಕೊಳ್ಳುವ ಅವಶ್ಯತೆಯೂ ಇಲ್ಲ. ಕೇವಲ ಅರ್ಧ ಗಂಟೆಯಲ್ಲಿ ಮೈಸೂರು ನಗರಕ್ಕೆ ಬರಬಹುದು. ನಗರದ ಮಧ್ಯಭಾಗದಲ್ಲಿರುವ ಚಾಮುಂಡಿ ಬೆಟ್ಟ ಪ್ರಕೃತಿಯ ಸುಂದರವಾದ ಕೊಡುಗೆ. ಇಲ್ಲಿ ರೋಪ್ ವೇ ನಿರ್ಮಾಣ ಅನಗತ್ಯ ಎಂದು ಹೇಳಿದರು.

ನಾನು ಕಂದಾಯ ಸಚಿವನಾಗಿದ್ದಾಗ ದೇವಿಕೆರೆ ಭಾಗದ 8 ಎಕರೆ ಪ್ರದೇಶದಲ್ಲಿ ಮೂಲಸೌಕರ್ಯ ಇನ್ನಿತರ ಕಾರ್ಯಗಳನ್ನು ಕೈಗೊಳ್ಳಲು ನಿರ್ಧರಿಸಲಾಗಿತ್ತು. ಕೆಲಸ ಪ್ರಾರಂಭವಾದಾಗ ಮೂರ್‍ನಾಲ್ಕು ಕಡೆಗಳಲ್ಲಿ ಭೂಕುಸಿತವಾಗಿದ್ದರಿಂದ ತಕ್ಷಣ ಕಾಮಗಾರಿ ಸ್ಥಗಿತಗೊಳಿಸಲು ಸೂಚಿಸಿದೆ. ಅಲ್ಲದೆ ಅರಣ್ಯ ಹಾಗೂ ಪರಿಸರ ಇಲಾಖೆ ಸೇರಿದಂತೆ ಸಂಬಂಧಪಟ್ಟ ಅಧಿಕಾರಿಗಳ ಸಭೆ ಕರೆದು ಚರ್ಚಿಸಿದಾಗ ಪರಿಸರ ಇಲಾಖೆ ಅನುಮತಿ ಪಡೆಯದಿರುವುದು ತಿಳಿಯಿತು. ಹಾಗಾಗಿ ಕಾಮಗಾರಿಗಳಿಂದ ಚಾಮುಂಡಿಬೆಟ್ಟಕ್ಕೆ ಯಾವುದೇ ತೊಂದರೆಯಿಲ್ಲ ಎನ್ನುವುದನ್ನು ಪರಿಶೀಲನೆಯಲ್ಲಿ ಖಚಿತಪಡಿಸಿಕೊಂಡ ಪರಿಸರ ಇಲಾಖೆ ಅನುಮತಿ ನೀಡಿದ ಬಳಿಕವೇ ಮುಂದುವರೆಯಲು ನಿರ್ಧರಿಸಿದ್ದೆವು. ಹಾಗಾಗಿ ರೋಪ್ ವೇ ನಿರ್ಮಾಣಕ್ಕಾಗಿ ಪ್ರಕೃತಿದತ್ತ ಸುಂದರ ಬೆಟ್ಟಕ್ಕೆ ಹಾನಿ ಮಾಡುವುದು ಸರಿಯಲ್ಲ ಎಂದು ಪ್ರತಿಪಾದಿಸಿದರು.



> "ಕರ್ನಾಟಕದಲ್ಲಿ ಬಿಜೆಪಿ ಸಂಘಟನಾತ್ಮಕವಾಗಿ ಅತ್ಯಂತ ಶಕ್ತಿಯುತವಾಗಿದೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಉತ್ತಮವಾಗಿ ಆಡಳಿತ ನಡೆಸುತ್ತಿದ್ದಾರೆ. ಅವರಿಗೆ ವ್ಯವದಾನ, ಗಾಂಭೀರ್ಯತೆ ಇದೆ. ಯಾವ ಸಂದರ್ಭದಲ್ಲೂ ತಾಳ್ಮೆ ಕಳೆದುಕೊಳ್ಳದೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಮುನ್ನಡೆಯುತ್ತಿದ್ದಾರೆ.
> –ವಿ.ಶ್ರೀನಿವಾಸ ಪ್ರಸಾದ್

ಯದುವಂಶದ ರಾಜರು ತಮ್ಮ ಕುಲದೇವತೆ ಚಾಮುಂಡೇಶ್ವರಿ ದೇವತೆಗೆ ದೇವಾಲಯ ಕಟ್ಟಿಸಿದ್ದಾರೆ. ವಿಜಯದಶಮಿ ಹಾಗೂ ವಿಶೇಷ ಸಂದರ್ಭಗಳಲ್ಲಿ ರಥೋತ್ಸವ ನಡೆಯುತ್ತದೆ. ಬೆಟ್ಟದಲ್ಲಿರುವ ರಾಜೇಂದ್ರ ವಿಲಾಸ ಅರಮನೆಯನ್ನು ಹೋಟೆಲ್ ಆಗಿ ಅಭಿವೃದ್ಧಿಪಡಿಸುವುದಾಗಿ ಪ್ರಮೋದಾದೇವಿ ಒಡೆಯರ್ ● 10ನೇ ಪುಟಕ್ಕೆ

ಮೈಸೂರು ಅರಮನೆ ಆವರಣದಲ್ಲಿ 'ಯೋಗೋತ್ಸವ'ದ ಪೂರ್ವಭಾವಿ ತಯಾರಿ: 500 ಯೋಗಪಟುಗಳು ಭಾಗಿ



ಮೈಸೂರು, ಏ.10(ಆರ್‌ಕೆಬಿ)– ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಜೂ.21ರಂದು ಆಯೋಜಿಸಲು ಉದ್ದೇಶಿರುವ ಬೃಹತ್ ಯೋಗೋತ್ಸವದ ಪೂರ್ವಭಾವಿಯಾಗಿ ಸುಮಾರು 500ಕ್ಕೂ ಹೆಚ್ಚು ಯೋಗಪಟುಗಳು ಭಾನುವಾರ ಮೈಸೂರು ಅರಮನೆ ಆವರಣದಲ್ಲಿ ಯೋಗ ಪ್ರದರ್ಶಿಸಿದರು.

ಆಯುಷ್ ಮಂತ್ರಾಲಯ, ಮೊರಾರ್ಜಿ ದೇಸಾಯಿ ಯೋಗ ಸಂಸ್ಥೆ, ಎಸ್‌ಕೆಆರ್‌ಎಸ್‌ಪಿಎಂ ಶ್ರೀ ವೇದವ್ಯಾಸ ಯೋಗ ಪ್ರತಿಷ್ಠಾನ, ಜಿಎಸ್‌ಎಸ್ ವಿದ್ಯಾಪೀಠ, ಯೋಗ ಫೆಡರೇಷನ್ ಆಫ್ ಮೈಸೂರು ಜಂಟಿಯಾಗಿ ಯೋಗೋತ್ಸವದ ಪೂರ್ವಭಾವಿ ಕಾರ್ಯಕ್ರಮ ಆಯೋಜಿಸಿತ್ತು. ಬೆಳಗ್ಗೆ 6 ಗಂಟೆಯಿಂದ 8 ಗಂಟೆವರೆಗೆ ನಡೆದ ಯೋಗ ಪ್ರದರ್ಶನದಲ್ಲಿ ಚಾಲನಾ ಕ್ರಿಯೆ, ಹಿಮಾಲಯ ಯೋಗಿಕ್ ವ್ಯಾಯಾಮ, ಸೂರ್ಯ ನಮಸ್ಕಾರ, ಯೋಗಾಸನಗಳು, ಶವಾಸನ ಮತ್ತು ಧ್ಯಾನ, ಪ್ರಾಣಾಯಾಮ, ಸಂಕಲ್ಪ, ವಿಶೇಷ ನೌಲಿ ಕ್ರಿಯೆ ನಡೆಯಿತು.

ವೇದವ್ಯಾಸ ಯೋಗ ಪ್ರತಿಷ್ಠಾನದ ಡಾ.ಕೆ.ರಾಘವೇಂದ್ರ ಪೈ ಮತ್ತು ಡಾ.ಪಿ.ಎನ್.ಗಣೇಶ್‌ಕುಮಾರ್ ಶಂಖನಾದದೊಂದಿಗೆ ಪ್ರದರ್ಶನಕ್ಕೆ ಆರಂಭಗೊಂಡಿತು. ಜಿಎಸ್‌ಎಸ್ ಯೋಗ ಸಂಸ್ಥೆಯ ಪವನ ಕೃಷ್ಣ, ವೈಎಸ್‌ಎಫ್‌ನ ಡಾ.ಪಿ.ಎನ್.ಗಣೇಶ್‌ಕುಮಾರ್, ಬಾಬಾ ರಾಮದೇವ್ ಪತಂಜಲಿ ಯೋಗ ಸಮಿತಿಯ ಕಲಾವತಿ, ಯೋಗ ಒಕ್ಕೂಟದ ದೇವರಾಜು, ಆಯುಷ್ ಇಲಾಖೆಯ ಡಾ.ವಿಶ್ವ ತಿಲಕ್ ಇನ್ನಿತರರು ಭಾಗವಹಿಸಿದ್ದರು. ಇದೇ ವೇಳೆ ರೈಲ್ವೆ ಉದ್ಯೋಗಿ ಬೆಂಗಳೂರಿನ ಡಾ.ಹಠ ಯೋಗಿ ಚಂದ್ರ ಆಚಾರ್ಯ ಅವರು ಪ್ರದರ್ಶಿಸಿದ ವಿಶೇಷ ನೌಲಿ ಕ್ರಿಯೆ ಎಲ್ಲರ ಗಮನ ಸೆಳೆಯಿತು.

ಜೂ.21ರಂದು 1.5 ಲಕ್ಷ ಯೋಗಪಟುಗಳಿಂದ ವಿಶ್ವ ಯೋಗ ದಾಖಲೆಗೆ ಸಿದ್ಧತೆ ಪ್ರಧಾನಿ ಮೋದಿಗೆ ಆಹ್ವಾನ: ಸಂಸದ ಪ್ರತಾಪ್‌ಸಿಂಹ



ಅರಮನೆ ಆವರಣದಲ್ಲಿ ಪೂರ್ವಭಾವಿ ಯೋಗಾಭ್ಯಾಸ ಕಾರ್ಯಕ್ರಮಕ್ಕೆ ಸಂಸದ ಪ್ರತಾಪ್‌ಸಿಂಹ ಚಾಲನೆ ನೀಡಿದರು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಮೈಸೂರು, ಏ.10(ಆರ್‌ಕೆಬಿ)– ರಾಮನವಮಿ ಹಬ್ಬದ ದಿನವಾದ ಭಾನುವಾರದಂದು ಯೋಗೋತ್ಸವದ ಪೂರ್ವಭಾವಿ ಕಾರ್ಯಕ್ರಮಕ್ಕೆ ಮೈಸೂರು–ಕೊಡಗು ಸಂಸದ ಪ್ರತಾಪ್‌ಸಿಂಹ ಶ್ರೀರಾಮಚಂದ್ರನ ಭಕ್ತಿ ಗೀತೆಯ ಹಿನ್ನೆಲೆಯಲ್ಲಿ ದೀಪ ಬೆಳಗಿಸಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ಜೂ.21ರಂದು ನಡೆಯುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ಮೈಸೂರಿನಲ್ಲಿ 1.5 ಲಕ್ಷಕ್ಕೂ ಹೆಚ್ಚು ಜನರನ್ನು ಸಂಘಟಿಸಿ ವಿಶ್ವ ದಾಖಲೆ ನಿರ್ಮಿಸಲು ಯೋಜಿಸಲಾಗಿದೆ. ಇದಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರನ್ನು ಆಹ್ವಾನಿಸಲಾಗಿದೆ. ಈ ಹಿಂದೆಯೂ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯಲ್ಲಿ ಪಾಲ್ಗೊಳ್ಳುವಂತೆ ಪ್ರಧಾನಿಯವರಿಗೆ ಮನವಿ ಮಾಡಿದ್ದನ್ನು ಪ್ರಸ್ತಾಪಿಸಿದ ಅವರು, ಪ್ರಧಾನಿ ಭೇಟಿಗೆ ಆಯ್ಕೆಯಾಗಿರುವ ಸ್ಥಳಗಳಲ್ಲಿ ಮೈಸೂರು ಮತ್ತು ಲಡಾಖ್ ಸೇರಿದೆ. ಈ ಪೈಕಿ ಮೋದಿಯವರು ಈ ಬಾರಿ ಮೈಸೂರನ್ನೇ ಆಯ್ಕೆ ಮಾಡುತ್ತಾರೆಂಬ ವಿಶ್ವಾಸವಿದೆ ಎಂದರು.

ಯೋಗ ಪ್ರಚಾರಕ್ಕಾಗಿ ಹಿಂದಿನ ಮೈಸೂರು ಅರಸರ ಕೊಡುಗೆಯನ್ನು ಸ್ಮರಿಸಿದ ಅವರು, ಯೋಗದ ತವರೂರಾಗಿರುವ ಮೈಸೂರು ಈ ಬಾರಿಯ ಜೂ.21ರ ಅಂತಾರಾಷ್ಟ್ರೀಯ ಯೋಗ ದಿನದಂದು ವಿಶ್ವ ದಾಖಲೆ ನಿರ್ಮಿಸಲು ಎಲ್ಲಾ ಸಿದ್ಧತೆಗಳನ್ನು ಕೈಗೊಳ್ಳಲಾಗುತ್ತಿದೆ. 1.5 ಲಕ್ಷ ಯೋಗ ಪಟುಗಳನ್ನು ಒಂದೆಡೆ ಕಲೆಹಾಕಿ ಯೋಗ ಪ್ರದರ್ಶಿಸಿ, ದಾಖಲೆ ನಿರ್ಮಿಸಲು ಎಲ್ಲರೂ ಒಟ್ಟಾಗಿ ಶ್ರಮಿಸೋಣ ಎಂದು ತಿಳಿಸಿದರು. ● 9ನೇ ಪುಟಕ್ಕೆ

ನಾಡೋಜ ಪ್ರಶಸ್ತಿ ಪುರಸ್ಕೃತ ಪ್ರೊ.ಭಾಷ್ಯಂ ಸ್ವಾಮೀಜಿಗೆ ಬ್ರಾಹ್ಮಣ ಸಂಘದಿಂದ ಸನ್ಮಾನ



ಮೈಸೂರು, ಏ.10– ಹಂಪಿ ಕನ್ನಡ ವಿಶ್ವ ವಿದ್ಯಾನಿಲಯದ ನಾಡೋಜ ಪ್ರಶಸ್ತಿಗೆ ಭಾಜನರಾದ ಪ್ರೊ.ಭಾಷ್ಯಂ ಸ್ವಾಮೀಜಿ ಅವರನ್ನು ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ವತಿಯಿಂದ ಅಭಿನಂದಿಸಲಾಯಿತು. ಮೈಸೂರಿನ ವಿಜಯ ನಗರದ ಯೋಗಾನರಸಿಂಹ ಸ್ವಾಮಿ ದೇವಸ್ಥಾನ ಸಂಸ್ಥಾಪಕ ಹಾಗೂ ಖ್ಯಾತ ಧಾರ್ಮಿಕ ಮುಖಂಡ ಡಾ.ಭಾಷ್ಯಂ ಸ್ವಾಮೀಜಿ ಅವರಿಗೆ ಅಗ್ರಹಾರದ ಅವರ ನಿವಾಸದಲ್ಲಿ ಬ್ರಾಹ್ಮಣ ವೇದಿಕೆ ಹಾಗೂ ಶಿಷ್ಯ ವೃಂದದಿಂದ ಅಭಿನಂದಿಸಲಾಯಿತು.

ಈ ಸಂದರ್ಭದಲ್ಲಿ ಯೋಗಾನರಸಿಂಹಸ್ವಾಮಿ ದೇವಸ್ಥಾನದ ವ್ಯವಸ್ಥಾಪಕ ಎನ್.ಶ್ರೀನಿವಾಸ ಚಕ್ರವರ್ತಿ, ನಗರಪಾಲಿಕೆ ಮಾಜಿ ಸದಸ್ಯ ಎಂ.ಡಿ.ಪಾರ್ಥಸಾರಥಿ, ಯೋಗಾನರಸಿಂಹ (ಮುರಳಿ), ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿ ಉಪಾಧ್ಯಕ್ಷ ಪ್ರಶಾಂತ್ ತಾತಾಚಾರ್, ಮೈಸೂರು ಜಿಲ್ಲಾ ಬ್ರಾಹ್ಮಣ ಯುವ ವೇದಿಕೆ ಪ್ರಧಾನ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಪದಾಧಿಕಾರಿಗಳಾದ ಅಜಯ್ ಶಾಸ್ತ್ರಿ, ಕೆ.ಎಂ.ನಿಶಾಂತ್, ಟಿ.ಎಸ್.ಅರುಣ್, ಬಾಲಾಜಿ, ಹರೀಶ್, ಮಂಜುನಾಥ್, ಪ್ರಶಾಂತ್ ಇನ್ನಿತರರು ಉಪಸ್ಥಿತರಿದ್ದರು.

ಕೇಂದ್ರದಿಂದ ಹಿಂದಿ ಭಾಷೆ ಹೇರಿಕೆ ಆರೋಪ

ಕನ್ನಡಪರ ಹೋರಾಟಗಾರ ವಾಟಾಳ್ ಪ್ರತಿಭಟನೆ

ಮೈಸೂರು,ಏ.10(ಪಿಎಂ)– ಸಂಪರ್ಕ ಭಾಷೆಯಾಗಿ ಇಂಗ್ಲಿಷ್ ಬದಲು ಹಿಂದಿ ಭಾಷೆ ಬಳಸಬೇಕು ಎಂಬ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿಕೆ ಬೆನ್ನಲ್ಲೇ ಕೇಂದ್ರ ಸರ್ಕಾರ ಹಿಂದಿ ಹೇರಿಕೆ ಮೂಲಕ ಪ್ರಾದೇಶಿಕ ಭಾಷೆಗಳನ್ನು ತುಳಿಯಲು ಮುಂದಾಗಿದೆ ಎಂದು ಆರೋಪಿಸಿ ಕನ್ನಡಪರ ಹೋರಾಟಗಾರ, ಕನ್ನಡ ಚಳವಳಿ ವಾಟಾಳ್ ಪಕ್ಷದ ಅಧ್ಯಕ್ಷ ವಾಟಾಳ್ ನಾಗರಾಜ್ ಭಾನುವಾರ ಮೈಸೂರಿನಲ್ಲಿ ಪ್ರತಿಭಟನೆ ನಡೆಸಿದರು.

ಮೈಸೂರಿನ ಜಯಚಾಮರಾಜ ಒಡೆಯರ್ ವೃತ್ತದಲ್ಲಿ ಬೆಂಬಲಿಗರೊಂದಿಗೆ ಪ್ರತಿಭಟನೆ ನಡೆಸಿ, ಕೇಂದ್ರ ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಹಿಂದಿ ಭಾಷೆಯನ್ನು ನಮ್ಮ ಮೇಲೆ ಹೇರಿ ದಬ್ಬಾಳಿಕೆ ನಡೆಸಲು ಹೊರಟಿದ್ದಾರೆ. ಪ್ರಾದೇಶಿಕ ಭಾಷೆಗಳನ್ನು ತುಳಿಯುವ ಹುನ್ನಾರ ನಡೆಯುತ್ತಿದೆ. ಹಿಂದಿ ಸಂಪರ್ಕ ಭಾಷೆ ಆಗಬೇಕೆಂಬ ಕೇಂದ್ರ ಗೃಹಮಂತ್ರಿಗಳ ಹೇಳಿಕೆಯನ್ನು ಖಂಡಿಸುತ್ತೇನೆ ಎಂದು ಕಿಡಿಕಾರಿದರು.

ಹಿಂದಿಯಿಂದ ಕನ್ನಡ ಮತ್ತು ಕರ್ನಾಟಕಕ್ಕೆ ಅಪಾಯ ವಿದೆ. ಕನ್ನಡ ಭಾಷೆ ಮೂಲೆಗುಂಪು ಆಗಲಿದೆ. ಹಿಂದಿ ವಿರುದ್ಧ ರಾಜ್ಯಾದ್ಯಂತ ಭಾರೀ ಹೋರಾಟ ಅನಿವಾರ್ಯ



ವಾಗಿದೆ. ರಾಜ್ಯ ಸರ್ಕಾರ ಹಿಂದಿಯನ್ನು ತಿರಸ್ಕರಿಸಬೇಕು. ಸಂಸದರು, ಶಾಸಕರು, ಮಂತ್ರಿಗಳು ಹಿಂದಿ ವಿರೋಧಿಸಬೇಕು. ಕೇಂದ್ರ ಮಂತ್ರಿಗಳು ರಾಜ್ಯಕ್ಕೆ ಬಂದಾಗ, ಹಿಂದಿಯಲ್ಲಿ ಮಾತನಾಡಬಾರದು. ಮಾತನಾಡಿದರೆ, ಅದು ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಲಿದೆ ಎಂದು ಹೇಳಿದರು.

ಬ್ಯಾಂಕ್, ರೈಲ್ವೆ, ಅಂಚೆ ಕಚೇರಿಗಳಲ್ಲಿ ಹಿಂದಿಗೆ ಆದ್ಯತೆ ನೀಡುವುದನ್ನು ಕೈಬಿಡಬೇಕು. ಹಿಂದಿ ನಾಮಫಲಕ ಕಿತ್ತು ಹಾಕುವ ಹಾಗೂ ಮಸಿ ಬಳಿಯುವ ಚಳವಳಿ ಮಾಡುತ್ತೇವೆ. ಒಂದು ದೇಶ–ಒಂದು ಭಾಷೆ ಎಂಬುದು ಸರಿಯಲ್ಲ. ಇದರಿಂದ ಕನ್ನಡ ಸೇರಿದಂತೆ ಪ್ರಾದೇಶಿಕ ಭಾಷೆಗಳು ಮೂಲೆಗುಂಪು ಆಗಲಿವೆ. ಈಗಾಗಲೇ ಕರ್ನಾಟಕದಲ್ಲಿ ಅನ್ಯಭಾಷಿಗರ ದಬ್ಬಾಳಿಕೆ ಜಾಸ್ತಿಯಾಗಿದೆ ಎಂದು ಕಿಡಿಕಾರಿದರು.

ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಹಿಂದಿ ಬಗ್ಗೆ ತಮ್ಮ ನಿಲುವು ಹೇಳಬೇಕು. ಸಾಹಿತ್ಯ ಪರಿಷತ್, ಹಿಂದಿ ವಿರುದ್ಧ ಬೀದಿಗಿಳಿದು ಹೋರಾಟ ಮಾಡಬೇಕು. ಪದವಿ ಹಂತದಲ್ಲಿ ಭಾಷೆಯಾಗಿ ಕನ್ನಡ ಕಲಿಕೆ ಕಡ್ಡಾಯಗೊಳಿಸಿದ್ದ ರಾಜ್ಯ ಸರ್ಕಾರದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ. ರಾಜ್ಯ ಸರ್ಕಾರ ಈ ಬಗ್ಗೆ ಕೂಡಲೇ ತುರ್ತು ಶಾಸನಸಭೆ ಕರೆಯಬೇಕು. ಆ ಮೂಲಕ ಕನ್ನಡಪರ ನಿಲುವಿನ ಬಗ್ಗೆ ಸಮಗ್ರ ಚರ್ಚೆ ಆಗಬೇಕು ಎಂದು ಒತ್ತಾಯಿಸಿದರು.

ರಾಜ್ಯದಲ್ಲಿ ಕೋಮು ಸೌಹಾರ್ದತೆಯನ್ನು ಹಾಳು ಮಾಡುವ ಪ್ರಯತ್ನ ನಡೆಯುತ್ತಿದೆ. ಇದಕ್ಕೆ ಪೂರಕವಾಗಿ ಕೆಲ ರಾಜಕೀಯ ನಾಯಕರ ಹೇಳಿಕೆಗಳು ಅಶಾಂತಿಗೆ ಕಾರಣವಾಗುತ್ತಿವೆ. ಹಿಂದುಯೇತರರ ಅಂಗಡಿಗಳಲ್ಲಿ ದಾಂಧಲೆ ನಡೆಸಿರುವುದು ಸರಿಯಲ್ಲ. ಮುಖ್ಯಮಂತ್ರಿಗಳು ಕೂಡಲೇ ಈ ಬಗ್ಗೆ ಗಮನಹರಿಸಬೇಕು. ಜೊತೆಗೆ ಎಲ್ಲಾ ಜಾತ್ಯತೀತ ಶಕ್ತಿಗಳು ಒಂದಾಗಬೇಕಿದೆ ಎಂದರು. ಬೆಂಬಲಿಗರಾದ ಮೂಗೂರು ನಂಜುಂಡಸ್ವಾಮಿ, ತಾಯೂರು ವಿಠಲಮೂರ್ತಿ, ಪಾರ್ಥಸಾರಥಿ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆ

ಬಿಜೆಪಿ ಅಭ್ಯರ್ಥಿಗೆ ಜೀವಧಾರ ಪದವೀಧರರ ಬೆಂಬಲ



ಮೈಸೂರು, ಏ. 10– ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಜೀವಧಾರ ಪದವೀಧರ ಘಟಕದ ಪದಾಧಿಕಾರಿಗಳ ಸಭೆಯಲ್ಲಿ ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಮೈವಿ. ರವಿಶಂಕರ್ ಅವರಿಗೆ ಬೆಂಬಲ ವ್ಯಕ್ತಪಡಿಸಲಾಯಿತು.

ಇದೇ ಸಂದರ್ಭದಲ್ಲಿ ಬಿಜೆಪಿ ಅಭ್ಯರ್ಥಿ ಮೈವಿ.ರವಿಶಂಕರ್ ಮಾತನಾಡಿ ಮೈಸೂರು, ಚಾಮರಾಜನಗರ ಹಾಸನ ಮಂಡ್ಯ ವ್ಯಾಪ್ತಿಯಲ್ಲಿ ವಾಸವಿರುವ ಪದವೀಧರರು ಈ ಬಾರಿ ಹೆಚ್ಚಿನ ಸಂಖ್ಯೆಯಲ್ಲಿ ನೋಂದಣಿಯಾಗುತ್ತಿರುವುದು ಶಿಕ್ಷಣದ ಪ್ರಗತಿಯ ಬೆಳವಣಿಗೆಯಾಗಿದೆ, ದೇಶದಲ್ಲಿ ಪದವೀಧರರು ಹೆಚ್ಚಾದರೆ ಪ್ರಜ್ಞಾವಂತ ಸಮಾಜ ನಿರ್ಮಾಣವಾಗುತ್ತದೆ ಎಂದರು.

ಪ್ರಧಾನಿ ಮೋದಿ ಅವರು ಭಾರತದಲ್ಲಿ ಡಿಜಿಟಲ್ ಇಂಡಿಯಾ ಮೂಲಕ ಆಡಳಿತ ವ್ಯವಸ್ಥೆ ಬಲಿಷ್ಠಗೊಳಿಸಿದ್ದಾರೆ. ಬ್ಯಾಂಕಿಂಗ್ ಸಹಕಾರಿ ಕ್ಷೇತ್ರ, ಕೃಷಿ, ಶಿಕ್ಷಣ, ಉದ್ಯೋಗ ವೈದ್ಯಕೀಯ ಸೇವೆ, ಕಾರ್ಪೋರೇಟ್ ವಲಯ ಸೇರಿದಂತೆ ಸರ್ಕಾರದ ಯಾವುದೇ ಸೇವೆ ಮತ್ತು ಮಾಹಿತಿ ಪಡೆಯುವಲ್ಲಿ ತಂತ್ರಜ್ಞಾನ ಡಿಜಿಟಲ್ ಇಂಡಿಯಾ ಉಪಯುಕ್ತ ಸಹಕಾರಿಯಾಗಿದೆ ಎಂದರು.

ನಂತರ ಜೀವಧಾರ ರಕ್ತನಿಧಿ ಕೇಂದ್ರ ನಿರ್ದೇಶಕ ಗಿರೀಶ್ ಮಾತನಾಡಿ, ಕಳೆದ 2 ವರ್ಷಗಳಿಂದ ಜೀವಧಾರ ಪದವೀಧರ ಘಟಕ ಕೋವಿಡ್ ಸಂದರ್ಭದಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ ಸರ್ಕಾರದಿಂದ ಸಹಾಯಧನ ಕೊಡಿಸುವಲ್ಲಿ ಹಲವಾರು ಕಾರ್ಯಚಟುವಟಿಕೆಗಳನ್ನು ನಡೆಸಿಕೊಂಡು ಬಂದಿದೆ. ನಾಲ್ಕು ಜಿಲ್ಲೆಯ ನೂರಾರು ಪದಾಧಿಕಾರಿಗಳು ಮೈವಿ.ರವಿಶಂಕರ್ ಅವರ ಗೆಲುವಿಗೆ ಶ್ರಮಿಸಲಿದ್ದಾರೆ ಎಂದರು. ಬಿಜೆಪಿ ವಕ್ತಾರ ಮಾ.ವೋಹನ್, ಜೀವಧಾರ ಪದವೀಧರ ಘಟಕದ ಕಾರ್ಯದರ್ಶಿ ವರಲಕ್ಷ್ಮಿ, ಅಜಯ್ ಮಾತನಾಡಿದರು. ಈ ವೇಳೆ ರಾಕೇಶ್ ಭಟ್, ಮುಳ್ಳೂರು ಗುರುಪ್ರಸಾದ್, ಕೃಷ್ಣೇಗೌಡ, ಪ್ರಕಾಶ್‌ಗೌಡ, ವಕೀಲರಾದ ಬಾಲಕೃಷ್ಣ, ಗುರು, ಭಾಗ್ಯರಾಜ್ ಭೋಜ, ಅರುಣ್ ಟಿಎಸ್, ಪ್ರದ್ಯುಮ್ನ, ಕಾಳಪ್ಪ, ವಿಕಾಸ್, ತೇಜಸ್, ಪ್ರದೀಪ್, ಚಿದಂಬರಂ, ಗಗನ್, ಅಶ್ವಿನ್, ಸುಮಂತ್ ಶಾಸ್ತ್ರಿ, ಅಭಿಲಾಶ್, ಸಂತೋಷ್ ಇದ್ದರು.

ಮುಸ್ಲಿಂ ವ್ಯಾಪಾರಿಗಳ ಕಲ್ಲಂಗಡಿ ನಾಶ: ಕುಮಾರಸ್ವಾಮಿ ಆಕ್ರೋಶ

ಬೆಂಗಳೂರು: ಹಿಂದೂಪರ ಸಂಘಟನೆ ಕಾರ್ಯಕರ್ತರಿಂದ ಮುಸ್ಲಿಂ ವ್ಯಾಪಾರಿಗಳ ಕಲ್ಲಂಗಡಿ ನಾಶ ಮಾಡಿದ ವಿಚಾರಕ್ಕೆ ಸಂಬಂಧಿಸಿದಂತೆ ತೀವ್ರ ಕಿಡಿಕಾರಿರುವ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಅವರು, ಭಯೋತ್ಪಾದಕರಿಗೂ, ಇವರಿಗೂ ವ್ಯತ್ಯಾಸವಿಲ್ಲ ಎಂದು ಹೇಳಿದ್ದಾರೆ. ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಧಾರವಾಡ ಜಿಲ್ಲೆಯ ನುಗ್ಗೇಕೇರಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದ ಮುಂಭಾಗದಲ್ಲಿ ರಾಮ ಭಕ್ತರ ಸೋಗಿನಲ್ಲಿ ಬಂದಿದ್ದ ದುಷ್ಕರ್ಮಿಗಳು ಮುಸ್ಲಿಮರ ಅಂಗಡಿಗಳನ್ನು ನಾಶಪಡಿಸಿ, ಮಾರಾಟಕ್ಕೆ ಇಟ್ಟಿದ್ದ ಕಲ್ಲಂಗಡಿ ಹಣ್ಣುಗಳನ್ನು ಹಾಳು ಮಾಡಿರುವುದು ಹೇಯ, ಪರಮ ಕಿರಾತಕ ಕೃತ್ಯ. ಕಾಶ್ಮೀರದಲ್ಲಿ ರಕ್ತದೋಕುಳಿ ಹರಿಸುವ ಭಯೋತ್ಪಾದಕರಿಗೂ, ಶಾಂತಿ–ಸೌಹಾರ್ದತೆಗೆ ಕಿಚ್ಚಿಡುತ್ತಿರುವ ಈ ಕಿರಾತಕರಿಗೂ ವ್ಯತ್ಯಾಸವೇ ಇಲ್ಲ.



ತಿನ್ನುವ ಅನ್ನಕ್ಕೆ ಮಣ್ಣುಹಾಕಿ ಬದುಕಿಗೆ ಬೆಂಕಿ ಇಡುವ ಇಂಥ ಪ್ರವೃತ್ತಿ ಅನಾಗರಿಕ, ಅಸಹ್ಯ

ಕರ್ನಾಟಕವನ್ನು ಈ ದುಷ್ಟರು, ಶಿಲಾಯುಗದತ್ತ ಹಿಮ್ಮೆಟ್ಟಿಸುತ್ತಿದ್ದಾರೆ ಎನ್ನುವುದರಲ್ಲಿ ಅನುಮಾನವೇ ಇಲ್ಲ. ಈ ರಕ್ಕಸರು ಕಲ್ಲಂಗಡಿಯನ್ನು ರಸ್ತೆಗೆಸೆದು ನಾಶ ಮಾಡಿದ ಪರಿಯನ್ನು ಗಮನಿಸಿದರೆ ಸಾಕು. ಇವರ ರಾಕ್ಷಸ ಪ್ರವೃತ್ತಿ ಉಗ್ರರಿಗಿಂತ ಕಮ್ಮಿಯೇನಲ್ಲ. ಅನ್ನವನ್ನೇ ಹಾಳುಗೆಡವಿದ ಈ ನೀಚರಿಗೆ ತಕ್ಕ ಪಾಠ ಕಲಿಸಲೇಬೇಕು ಎಂದಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು,ಏ.10–ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಡಿ 20222–23ನೇ ಸಾಲಿಗೆ ಪರಿಶಿಷ್ಟ ಪಂಗಡಕ್ಕೆ ಸೇರಿದ ಎಲ್ಲಾ ಸಮುದಾಯದ ಮಹಿಳಾ ಮತ್ತು ಪುರುಷ ಅರ್ಹ ಅಭ್ಯರ್ಥಿಗಳಿಗೆ ಉಚಿತವಾಗಿ ಲಘು(ಕಾರು/ಜೀಪು) ಹಾಗೂ ಭಾರೀ ವಾಹನ (ಬಸ್ಸು) ಚಾಲನ ತರಬೇತಿ ಜೊತೆಗೆ ವಾಹನ ಚಾಲನಾ ಪರವಾನಗಿ ನೀಡುವ ಕಾರ್ಯಕ್ರಮವನ್ನು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಸಹಯೋಗದೊಂದಿಗೆ ನೀಡುವ ಸಲುವಾಗಿ ಆಸಕ್ತ ಫಲಾಪೇಕ್ಷಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಲಘು ವಾಹನ ಚಾಲನಾ ತರಬೇತಿಗಾಗಿ ಆಸಕ್ತರು 18 ವರ್ಷ ವಯೋಮಿತಿ ಹೊಂದಿದ್ದು, ಜನ್ಮ ದಿನಾಂಕದ ಜನನ ಪ್ರಮಾಣಪತ್ರ ಅಥವಾ ಎಸ್.ಎಸ್.ಎಲ್.ಸಿ ಅಂಕಪಟ್ಟಿ ಅಥವಾ ಶಾಲಾ ವರ್ಗಾವಣಾ ಪ್ರಮಾಣಪತ್ರ ಅಥವಾ ನೋಟರಿಯಿಂದ ಪ್ರಮಾಣಪತ್ರ ಹಾಗೂ ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ಪಾಸ್‌ಪೋರ್ಟ್ ಅಳತೆಯ 5 ಭಾವ ಚಿತ್ರ ಸಲ್ಲಿಸಬಹುದು. ಭಾರೀ ವಾಹನ ಚಾಲನ ತರಬೇತಿಗೆ ಅರ್ಜಿ ಸಲ್ಲಿಸುವವರು 20 ವರ್ಷ ವಯೋಮಿತಿ ಹೊಂದಿದ್ದು, ಲಘು ವಾಹನ ಚಾಲನಾ ಅನುಜ್ಞಾನಪತ್ರ ಪಡೆದು 1 ವರ್ಷ ಪೂರೈಸಿರಬೇಕು. ಏ.20ರೊಳಗಾಗಿ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ನಿಗಮದ ವೆಬ್‌ಸೈಟ್: www. karnataka.gov.in/kmvstdcl ಮೂಲಕ ಮಾಹಿತಿ ಪಡೆಯಬಹುದು ಅಥವಾ ದೂ.ಸಂಖ್ಯೆ: 0821–2430022 ಅನ್ನು ಸಂಪರ್ಕಿಸಬಹುದು.

ರಾಜೀನಾಮೆ ನೀಡಿ ಕುರ್ಚಿಯ ಮಾನ ಕಾಪಾಡಿ

ಮುಖ್ಯಮಂತ್ರಿ ಬೊಮ್ಮಾಯಿ ವಿರುದ್ಧ ಮಾಜಿ ಸಿಎಂ ಸಿದ್ದರಾಮಯ್ಯ ಕಿಡಿ



ಬೆಂಗಳೂರು, ಏ. 10– ಧಾರವಾಡ ಜಿಲ್ಲೆಯ ಇತಿಹಾಸ ಪ್ರಸಿದ್ಧ ಅಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಕಿಡಿಗೇಡಿಗಳು ಮುಸ್ಲಿಮರ ಅಂಗಡಿಗಳ ಮೇಲೆ ದಾಳಿ ನಡೆಸಿ ಅಪಾರ ಪ್ರಮಾಣದ ಕಲ್ಲಂಗಡಿಯನ್ನು ರಸ್ತೆಗೆಸೆದು ಹಾಳು ಮಾಡಿರುವ ಘಟನೆ ಬಗ್ಗೆ ಮಾಜಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಹೇಳಿಕೆ ನೀಡಿದ್ದಾರೆ. ಮುಖ್ಯಮಂತ್ರಿಗಳು ರಾಜೀನಾಮೆ ನೀಡಿ ಕುರ್ಚಿಯ ಮಾನ ಕಾಪಾಡಿ ಎಂದು ಆಗ್ರಹ ಮಾಡಿದ್ದಾರೆ.

ರಾಜ್ಯದ ಮುಖ್ಯಮಂತ್ರಿಯಾಗಿ ಬಸವರಾಜ ಬೊಮ್ಮಾಯಿಯವರು ಇನ್ನೂ ಅಧಿಕಾರದಲ್ಲಿದ್ದರೆ ತಕ್ಷಣ ಧಾರವಾಡದ ಮುಸ್ಲಿಮ್ ವರ್ತಕರ ಮೇಲೆ ದೌರ್ಜನ್ಯವೆಸಗಿದ್ದ ಶ್ರೀರಾಮ ಸೇನೆಯ ಪುಂಡರನ್ನು ಒದ್ದು ಒಳಗೆ ಹಾಕಲು ಪೊಲೀಸರಿಗೆ ಆದೇಶ ನೀಡಬೇಕು, ಸಾಧ್ಯವಿಲ್ಲ ಎಂದಾದರೆ ರಾಜೀನಾಮೆ ನೀಡಿ ಕುರ್ಚಿಯ ಮಾನ ಕಾಪಾಡಿ ಎಂದು ಸಿದ್ದರಾಮಯ್ಯ ಹೇಳಿದ್ದಾರೆ.

"ಭಾರತೀಯ ಜನತಾ ಪಕ್ಷ ಹೇಳಿಕೊಂಡು ಬರುತ್ತಿರುವ 'ರಾಮ ರಾಜ್ಯ'ದ ಒಂದು ಚಿತ್ರವನ್ನು ರಾಮ ನವಮಿಯ ಹಿನ್ನೆಲೆಯಲ್ಲಿ ಧಾರವಾಡದ ಶ್ರೀರಾಮಸೇನೆಯ ಗೂಂಡಾಗಳು ಜಗತ್ತಿನ ಮುಂದೆ ಇಟ್ಟಿದ್ದಾರೆ. ಇಂತಹ ಗೂಂಡಾಗಳಿಗೆ ರಾಮನ ಹೆಸರು ಹೇಳುವ ಯಾವ ಯೋಗ್ಯತೆ ಇದೆ? ಎಂದು ಅವರು ಪ್ರಶ್ನೆ ಮಾಡಿದ್ದಾರೆ.

ಧಾರವಾಡದಲ್ಲಿ ನಡೆದ ಹಲ್ಲೆ ಕೇವಲ ಮುಸ್ಲಿಮ್ ವ್ಯಾಪಾರಿಗಳ ಮೇಲೆ ನಡೆದದ್ದಲ್ಲ, ಅದು ಅವರು ಮಾರಾಟ ನಡೆಸುತ್ತಿದ್ದ ಕಲ್ಲಂಗಡಿ ಬೆಳೆಯುವ ರೈತರ ಮೇಲೆ ಕೂಡಾ ನಡೆದಿರುವ ದೌರ್ಜನ್ಯವೂ ಆಗಿದೆ. ಈ ಗೂಂಡಾಗಳನ್ನು ಹೀಗೆ ಸ್ವತಂತ್ರವಾಗಿ ಬಿಟ್ಟರೆ ಇವರು ಎಲ್ಲರ ಮನೆ ಬಾಗಿಲು ತಟ್ಟಲಿದ್ದಾರೆ ಎಂದು ಎಚ್ಚರಿಕೆ ನೀಡಿದ್ದಾರೆ. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಜನರ ಗಮನವನ್ನು ಬೇರೆಡೆ ಸೆಳೆದು, ತಮ್ಮ ವೈಫಲ್ಯವನ್ನು ಮುಚ್ಚಿಹಾಕಲು ಸರ್ಕಾರವನ್ನೇ ಸಂಘ ಪರಿವಾರಕ್ಕೆ ಔಟ್ ಸೋರ್ಸ್ ಮಾಡಿ ಅಲ್ಲಿನ ಪುಂಡರನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಂಡ ಹಾಗೆ ಕಾಣುತ್ತಿದೆ. ರಾಜ್ಯದ ಇತಿಹಾಸದಲ್ಲಿ ಇದೊಂದು ಶಾಶ್ವತ ಕಳಂಕ ಎಂದಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ತಮ್ಮ ಸಂಪುಟ ಇಲ್ಲವೇ ಪಕ್ಷದ ಮೇಲೆ ಯಾವುದೇ ನಿಯಂತ್ರಣವಿಲ್ಲ. ಸರ್ಕಾರವನ್ನು ಸಂಘಪರಿವಾರಕ್ಕೆ ಅಡವಿಟ್ಟರೆ ತಮ್ಮ ಕುರ್ಚಿ ಉಳಿಸಿಕೊಳ್ಳಬಹುದು ಎಂದು ಮುಖ್ಯಮಂತ್ರಿಗಳು ಕನಸು ಕಾಣುತ್ತಿದ್ದಾರೆ. ಈ ಪುಂಡಾಟಿಕೆ ಅವರ ಕುರ್ಚಿಯನ್ನೂ ಕಿತ್ತುಕೊಳ್ಳಲಿದೆ ಎನ್ನುವುದು ಅವರಿಗೆ ತಿಳಿದಿಲ್ಲ ಎಂದು ಸಿದ್ದರಾಮಯ್ಯ ಹೇಳಿದರು.

ರಾಜಕೀಯ ದುರುದ್ದೇಶದಿಂದ ಮುಸ್ಲಿಮರನ್ನು ಗುರಿಯಾಗಿಟ್ಟುಕೊಂಡು ಬಿಜೆಪಿ ಮತ್ತು ಸಂಘ ಪರಿವಾರ ನಡೆಸುತ್ತಿರುವ ಪುಂಡಾಟಿಕಗಳಿಗಳಿಂದಾಗಿ ಹೊರರಾಜ್ಯ ಮತ್ತು ಹೊರದೇಶಗಳ ಎದುರು ಕೂಡುಬಾಳ್ವೆಗೆ ಹೆಸರಾದ ಶಾಂತಿ ಮತ್ತು ಸೌಹಾರ್ದ ಪ್ರಿಯ ಕನ್ನಡಿಗರು ತಲೆತಗ್ಗಿಸುವಂತಾಗಿದೆ. ಇದನ್ನು ಕನ್ನಡಿಗರು ಎಂದೂ ಕ್ಷಮಿಸುವುದಿಲ್ಲ ಎಂದಿದ್ದಾರೆ.

ಇದು ಮುಖ್ಯಮಂತ್ರಿಗಳೇ ಮಾಡಿರುವ ಪಾಪದ ಫಲ. ಬೀದಿ ಗೂಂಡಾಗಳ ಪುಂಡಾಟಿಕೆಯನ್ನು ಕ್ರಿಯೆಗೆ ಪ್ರತಿಕ್ರಿಯೆ ಎಂದು ಸಮರ್ಥಿಸಿಕೊಂಡ ನಂತರವೇ ಕೊಲೆ, ಹಿಂಸಾಚಾರ, ಗಲಾಟೆ, ದೌರ್ಜನ್ಯಗಳ ಹೊಸ ಸರಣಿ ರಾಜ್ಯದಲ್ಲಿ ಪ್ರಾರಂಭವಾಗಿದ್ದು, ಇದರಿಂದ ಕಾನೂನು ವ್ಯವಸ್ಥೆಯೇ ಕುಸಿದುಬಿದ್ದು ನಾಗರಿಕ ಯುದ್ದಕ್ಕೆ ದಾರಿಮಾಡಿಕೊಟ್ಟಿದೆ ಎಂದು ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಸಂಘ ಪರಿವಾರದ ಜೊತೆಗಿನ ಸಹಯೋಗದಿಂದ ಬಿಜೆಪಿ ಸರ್ಕಾರ ರಾಜ್ಯದಲ್ಲಿ ಹರಡುತ್ತಿರುವ ಕೋಮುದ್ವೇಷದ ವಾತಾವರಣದಿಂದ ರಾಜ್ಯದ ಉದ್ಯಮಿಗಳು ಬೇಸತ್ತುಹೋಗಿ ಹೊರ ರಾಜ್ಯದ ಕಡೆ ಮುಖಮಾಡುತ್ತಿದ್ದಾರೆ. ಕಿರಣ್ ಮಜುಮದಾರ್‌ಶಾ ಅವರಂತಹ ಖ್ಯಾತನಾಮರು ಕೂಡಾ ಇದಕ್ಕೆ ಪ್ರತಿರೋಧ ವ್ಯಕ್ತಪಡಿಸಿರುವುದ ಕಳವಳಕಾರಿ ಬೆಳವಣಿಗೆ ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದ್ದಾರೆ.

ರಾಜ್ಯ ಬೇಡದ ಕೂಸು, ಅಳುವ ಕೂಸುಗಳನ್ನು ನೋಡಿಯಾಗಿದೆ. ಈಗಿನದ್ದು ಆಡುವ ಗೊಂಬೆಯ ಸರ್ಕಾರ. ಆ ಕೂಸುಗಳಿಗೆ ಜೀವವಾದರೂ ಇತ್ತು, ಈಗಿನದ್ದು ಸಂಪೂರ್ಣ ನಿರ್ಜೀವ ಆಟದ ಗೊಂಬೆ. ಮುಖ್ಯಮಂತ್ರಿಗಳು ಸಂಘ ಪರಿವಾರದ ಪುಂಡರ ಕೈಯಲ್ಲಿನ ಆಟಿಕೆಯ ಗೊಂಬೆಯಂತಾಗಿದ್ದಾರೆ ಎಂದು ಸಿದ್ದರಾಮಯ್ಯ ಟೀಕೆ ಮಾಡಿದ್ದಾರೆ.

ಜೆಡಬ್ಲ್ಯುಜಿಸಿ ನೂತನ ಆಡಳಿತ ಸಮಿತಿ ಪದಾಧಿಕಾರಿಗಳು



ಬಿ.ಎಂ.ನಾಗೇಶ್ ಹೆಚ್.ಎಸ್.ಅರುಣ್‌ಕುಮಾರ್ ಮೋಹನ್‌ಕುಮಾರ್ ಕೀರ್ತಿಕುಮಾರ್ ಸಿ.ಎಸ್.ರವಿಶಂಕರ್



ಸುಧೀರ್‌ಭಟ್ ಎಂ.ಎ.ಬೋಪಣ್ಣ ಪರಮೇಶ್ವರ್ ಬಿ.ಎಸ್. ಕೃಷ್ಣ ಹೆಚ್.ಸಿ.ಸುಬ್ರಮಣ್ಯ ಯಶವಂತ್

ಮೈಸೂರು,ಏ.10–ಮೈಸೂರು ನಜರ್‌ಬಾದ್‌ನಲ್ಲಿರುವ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನ ನೂತನ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಬಿ.ಎಂ.ನಾಗೇಶ್ 674 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ. ಕ್ಯಾಪ್ಟನ್ (ಉಪಾಧ್ಯಕ್ಷರಾಗಿ) ಹೆಚ್.ಎಸ್.ಅರುಣ್‌ಕುಮಾರ್ –790, ಗೌರವ ಕಾರ್ಯದರ್ಶಿಯಾಗಿ ಮೋಹನ್ ಕುಮಾರ್–534, ಖಜಾಂಚಿಯಾಗಿ ಕೀರ್ತಿಕುಮಾರ್ ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಕಾರ್ಯಕಾರಿ ಸಮಿತಿ ಸದಸ್ಯರು (ಪ್ಲೇಯಿಂಗ್ ಕ್ಯಾಟಗರಿ–3 ಸ್ಥಾನಗಳಿಗೆ): ಸುಧೀರ್ ಭಟ್ ಕೆ.ಎಸ್.–855, ಎಂ.ಎ.ಬೋಪಣ್ಣ–723, ಪರಮೇಶ್ವರ್–639 ಆಯ್ಕೆಯಾಗಿದ್ದಾರೆ. ಓಪನ್ ಕ್ಯಾಟಗರಿ –3 ಸ್ಥಾನಗಳಿಗೆ: ಕೃಷ್ಣ ಬಿ.ಎಸ್.–591, ಯಶವಂತ್ ಬಿ.ಎಸ್.–468 ಹಾಗೂ ಹೆಚ್.ಸಿ.ಸುಬ್ರಹ್ಮಣ್ಯ –445 ಮತಗಳನ್ನು ಪಡೆದು ಆಯ್ಕೆಯಾಗಿದ್ದಾರೆ.

ದರ ಏರಿಕೆ ವಿರೋಧಿಸಿ ಇಂದು ಲಾರಿ ಮಾಲೀಕರಿಂದ ಪ್ರತಿಭಟನೆ

ಮೈಸೂರು, ಏ.10(ಆರ್‌ಕೆಬಿ)– ಕೇಂದ್ರ ಸರ್ಕಾರದ ಬೆಲೆ ಏರಿಕೆ ವಿರೋಧಿಸಿ ಮೈಸೂರು ಜಿಲ್ಲಾ ಲಾರಿ ಮಾಲೀಕರ ಒಕ್ಕೂಟದ ವತಿಯಿಂದ ಏ.11ರಂದು ಬೆಳಗ್ಗೆ 11 ಗಂಟೆಗೆ ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಲಾಗುವುದು ಎಂದು ಒಕ್ಕೂಟದ ಅಧ್ಯಕ್ಷ ಜಿ.ಕೋದಂಡರಾಮ್ ತಿಳಿಸಿದ್ದಾರೆ.


ರಾಜ್ಯ ಮತ್ತು ಕೇಂದ್ರ ಸರ್ಕಾರ ದಿನನಿತ್ಯ ಡೀಸೆಲ್ ದರವನ್ನು ನಿರಂತರವಾಗಿ ಏರಿಸುತ್ತಿದೆ. ಟೋಲ್ ದರವನ್ನು ಏರಿಸಿದೆ. 15 ವರ್ಷದ ಹಳೆ ವಾಹನದ ಎಫ್‌ಸಿ ಚಲನ್ 15 ಪಟ್ಟು ಹೆಚ್ಚಾಗಿದೆ. ಚೆಕ್‌ಪೋಸ್ಟ್‌ಗಳಲ್ಲಿ ಕಿರುಕುಳ ಈ ಎಲ್ಲದರಿಂದ ವಾಹನ ಮಾಲೀಕರು ತೊಂದರೆಗೆ ಸಿಲುಕಿದ್ದಾರೆ. ಸರ್ಕಾರದ ಈ ಬೆಲೆ ಏರಿಕೆಯನ್ನು ವಿರೋಧಿಸಿ ಪ್ರತಿಭಟನೆ ನಡೆಸಲಾಗುತ್ತಿದೆ. ಸರ್ಕಾರ ಕೂಡಲೇ ಏರಿಸಿರುವ ಬೆಲೆಗಳನ್ನು ಇಳಿಸಬೇಕು ಎಂದು ಪ್ರತಿಭಟನೆ ಮೂಲಕ ಆಗ್ರಹಿಸಲಾಗುವುದು ಎಂದರು.

ಸಾಮಾಜಿಕ ಉದ್ಯಮಿ ಪ್ರಶಸ್ತಿಗೆ ಅರ್ಜಿ ಆಹ್ವಾನ

ಮೈಸೂರು,ಏ.10–ಜುಬಿಲಂಟ್ ಭಾರ್ತಿಯಾ ಫೌಂಡೇಶನ್ ಮತ್ತು ವರ್ಲ್ಡ್ ಎಕನಾಮಿಕ್ ಫೋರಮ್‌ನ ಸಹೋದರಿ ಸಂಸ್ಥೆಯಾದ ಶ್ವಾಬ್ ಫೌಂಡೇಶನ್ ಫಾರ್ ಸೋಶಿಯಲ್ ಎಂಟರ್‌ಪ್ರೆನ್ಯೂರ್‌ಶಿಪ್‌ಗಳು ಪ್ರತಿಷ್ಠಿತ ವಾರ್ಷಿಕ ಪ್ರಶಸ್ತಿ – ವರ್ಷದ ಸಾಮಾಜಿಕ ಉದ್ಯಮಿ ಭಾರತ 2022–ರ 13ನೇ ಆವೃತ್ತಿಗೆ ಅರ್ಜಿಗಳನ್ನು ಆಹ್ವಾನಿಸಿವೆ.

ವರ್ಷದ ಸಾಮಾಜಿಕ ಉದ್ಯಮಿ (SEOY) ಭಾರತ – ಪ್ರಶಸ್ತಿಗಾಗಿ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಏ.20. ಅಭ್ಯರ್ಥಿಗಳು www.jubilant bhartia foundation.com ನಲ್ಲಿ ಲಭ್ಯವಿರುವ ಅರ್ಜಿ ನಮೂನೆಯನ್ನು ಸಲ್ಲಿಸುವ ಮೂಲಕ ಅಥವಾ ಭರ್ತಿ ಮಾಡಿದ ಫಾರ್ಮ್ ಅನ್ನು jbf.seoy@jubl.comಗೆ ಇಮೇಲ್ ಮಾಡುವ ಮುಖಾಂತರ ಭಾಗವಹಿಸಬಹುದು. 'ವರ್ಷದ ಸಾಮಾಜಿಕ ಉದ್ಯಮಿ ಭಾರತ ಪ್ರಶಸ್ತಿ 2022' ವಿಜೇತರನ್ನು ಸೆಪ್ಟೆಂಬರ್ 2022ರಲ್ಲಿ ಘೋಷಿಸಲಾಗುವುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

11.04.2022 ಸೋಮವಾರ, ಮಳೆ ನಕ್ಷತ್ರ: ರೇವತಿ 31.03.2022 ರಿಂದ 13.04.2022
ಶ್ರೀ ಶುಭಕೃತುನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಶುಕ್ಲ ಪಕ್ಷ
ತಿಥಿ: ದಶಮಿ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

■ **ಶಾರದಾ ವಿಲಾಸ ಕಾಲೇಜು:** ವಿಶ್ವ ಆರೋಗ್ಯ ದಿನಾಚರಣೆ, ಉದ್ಘಾಟನೆ: ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಅಧ್ಯಕ್ಷ ಡಾ.ಬಿ.ಎಂ.ಸುಬ್ರಾಯ, ಮುಖ್ಯ ಅತಿಥಿಗಳು: ಜಯದೇವ ಹೃದ್ರೋಗ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಅಧ್ಯಕ್ಷತೆ: ಶಾರದಾ ವಿಲಾಸ ಕಾಲೇಜು ಪ್ರಾಂಶುಪಾಲ ಡಾ. ಹನುಮಂತಾಚಾರ್ ಜೋಶಿ, ಸ್ಥಳ: ಪ್ರೊ.ಚಿನ್ನಸ್ವಾಮಿ ಶೆಟ್ಟಿ ಸಭಾಂಗಣ, ಸಮಯ: ಬೆಳಗ್ಗೆ 11ಕ್ಕೆ

■ **ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು:** ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸ್ನೇಹ ಸಿಂಚನ ಟ್ರಸ್ಟ್ ಸಹಯೋಗದಲ್ಲಿ ಯುಗಾದಿ ಮುಂಗಾರು ಕವಿಗೋಷ್ಠಿ, ಉದ್ಘಾಟನೆ: ಹಿರಿಯ ಸಾಹಿತಿ ಸಿ.ಪಿ.ಕೃಷ್ಣಕುಮಾರ್, ಅಧ್ಯಕ್ಷತೆ: ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮುಖ್ಯ ಅತಿಥಿ: ಸಿರಿಗನ್ನಡ ವೇದಿಕೆ ರಾಜ್ಯಾಧ್ಯಕ್ಷೆ ಶ್ರೀಮತಿ ಎ.ಹೇಮಗಂಗಾ, ಕವಿಗೋಷ್ಠಿಯ ನಿರ್ವಹಣೆ: ಹಿರಿಯ ಸಾಹಿತಿ ಶ್ರೀಮತಿ ಕೆರೋಡಿ ಎಂ.ಲೋಲಾಕ್ಷಿ. ಸ್ಥಳ: ಜಿಲ್ಲಾ ಕನ್ನಡ ಸಾಹಿತ್ಯ ಭವನ ವಿಜಯನಗರ, ಸಮಯ: ಸಂಜೆ 5ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು :** ಮೂರು ಪುಸ್ತಕಗಳ ಬಿಡುಗಡೆ ಸಮಾರಂಭ, ಪುಸ್ತಕಗಳ ಬಿಡುಗಡೆ: ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ. ಎಂ.ಜಿ. ಮಂಜುನಾಥ, ಡಾ.ಕೆ.ಸೌಭಾಗ್ಯವತಿ ಅವರ ಬಯಲು ತಾಯಿ ಹಾಗೂ ಆರದಿರಲಿ ಬದುಕು–ಬೆಳಕು ಕೃತಿ ಕುರಿತು ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಡಾ.ಕೆ.ಅಕ್ಕಮಹಾದೇವಿ ಅವರ ಬಿಡಿ ಹೂಗಳ ಕುರಿತು ಮೈಸೂರು ಲಲಿತ ಕಲೆಗಳ ಕಾಲೇಜು ಸಹ ಪ್ರಾಧ್ಯಾಪಕಿ ಡಾ. ಕೋಕಿಲ ಮಾತನಾಡುವರು, ಅಧ್ಯಕ್ಷತೆ ಮೈಸೂರು ವಿವಿ ಸಂಜೆ ಕಾಲೇಜು ಪ್ರಾಂಶುಪಾಲ ಪ್ರೊ. ಹೆಚ್.ಸಿ.ದೇವರಾಜೇಗೌಡ, ಮುಖ್ಯ ಅತಿಥಿ: ಸಾಹಿತ್ಯ ಸಹೃದಯಿ ಕೆಂಡಗಣ್ಣ ಸ್ವಾಮಿ ಸ್ಥಳ: ವಿಶ್ವವಿದ್ಯಾನಿಲಯ ಸಂಜೆ ಕಾಲೇಜು, ಸಮಯ: ಸಂಜೆ 6 ಗಂಟೆಗೆ.

■ **ಶರಣ ಸಾಹಿತ್ಯ ಪರಿಷತ್ :** ಶರಣ ಸಾಹಿತ್ಯ ಪರಿಷತ್ ಮೈಸೂರು ಜಿಲ್ಲಾ ಘಟಕ, ವೀರಶೈವ ಲಿಂಗಾಯತ ಮಹಾ ಸಭಾ, ಜಾಗತಿಕ ಲಿಂಗಾಯತ ಮಹಾ ಸಭಾ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಶಿವ ಸಂಚಾರ ನಾಟಕೋತ್ಸವ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಮೈಸೂರು ಹೊಸಮಠ ಚಿದಾನಂದ ಸ್ವಾಮೀಜಿ, ಉದ್ಘಾಟನೆ: ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ಅಧ್ಯಕ್ಷತೆ: ಹಿರಿಯ ರಂಗಕರ್ಮಿ ಗಂಗಾಧರ ಸ್ವಾಮಿ. ಸಮಯ: ಸಂಜೆ 6ಕ್ಕೆ, ಶಿವ ಸಂಚಾರ ನಾಟಕೋತ್ಸವ, ನಾಟಕ ಒಕ್ಕಲಿಗ ಮುದ್ದಣ್ಣ, ರಚನೆ ಚಂದ್ರಶೇಖರ ತಾಳ್ಯ, ನಿರ್ದೇಶನ ಛಾಯಾ ಭಾರ್ಗವಿ, ಸಂಗೀತ ಜಗದೀಶ ಆರ್. ಸ್ಥಳ: ಹೊಸ ಮಠ ಶಿಕ್ಷಣ ಸಂಸ್ಥೆಗಳ ಆವರಣ, ಸಮಯ: ಸಂಜೆ6.30ಕ್ಕೆ

ವಿವಿಧೆಡೆ ಶ್ರೀ ರಾಮನವಮಿ



■ **ಗಾನವಿಶಾರದ ಶ್ರೀಬಿಡಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರ :** 106ನೇ ವಾರ್ಷಿಕ ಪಾರಂಪರಿಕ ರಾಮನವಮಿ ಸಂಗೀತೋತ್ಸವ, ಶ್ರೀ ಲಾಲ್‌ಗುಡಿ ಜಿಜೆಆರ್ ಕೃಷ್ಣನ್ ಮತ್ತು ಶ್ರೀಮತಿ ಲಾಲ್‌ಗುಡಿ ವಿಜಯಲಕ್ಷ್ಮಿ ಅವರ ದ್ವಂದ್ವ ಪಿಟೀಲುವಾದನ, ವಿದ್ವಾನ್ ಬಿ.ಸಿ. ಮಂಜುನಾಥ್(ಮೃದಂಗ), ವಿದ್ವಾನ್‌ವ್ಯಾಸ ವಿಠ್ಠಲ(ಖಂಜಿರ)ಸ್ಥಳ: ಶ್ರೀ ಪ್ರಸನ್ನ ಸೀತಾರಾಮ ಮಂದಿರ, ಸಂಜೆ 5.30ಕ್ಕೆ

■ **ಶ್ರೀ ಮಹಾಜನ ಸಭಾ, ಕೃಷ್ಣಮೂರ್ತಿಪುರಂ ಶ್ರೀ ರಾಮಮಂದಿರ :** 93ನೇ ವರ್ಷದ ಶ್ರೀರಾಮೋತ್ಸವದ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿಶೇಷ ಪೂಜೆ, ವೈಖಾನಸಾಗಮ ಪ್ರವೀಣ ಡಾ. ಎಂ.ರಾಜೀವ್ ನೇತೃತ್ವದಲ್ಲಿ ಶ್ರೀ ಸೀತಾ ಕಲ್ಯಾಣೋತ್ಸವ ಸಂಜೆ 6ಕ್ಕೆ ವಿದ್ವಾನ್ ಮೈಸೂರು ಚಂದನ್ ಕುಮಾರ್ ಮತ್ತು ವೃಂದದವರಿಂದ ವೇಣುವಾದನ ಸ್ಥಳ: ಶ್ರೀರಾಮಮಂದಿರ, ಕೃಷ್ಣಮೂರ್ತಿಪುರಂ.

■ **ಶ್ರೀ ರಾಮಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್, ಮೈಸೂರು ಉತ್ತರ:** ಶ್ರೀರಾಮನವಮಿ ಸಂಗೀತ ಕಾರ್ಯಕ್ರಮ, ಸಂಜೆ 5.15ಕ್ಕೆ ವಿದುಷಿ ಪೂರ್ವಿ ಜೆ. ಅವರಿಂದ ಹಿಂದೂಸ್ಥಾನಿ ಗಾಯನ, ನಿರಂಜನ್ – ಹಾರ್ಮೋನಿಯಂ, ಪರಮೇಶ್ವರ ಹಗ್ಡೆ–ತಬಲ, ಸಂಜೆ 6.15ಕ್ಕೆ ವಿದ್ವಾನ್ ಸೂರ್ಯಪ್ರಕಾಶ್ ಅವರಿಂದ ಗಾಯನ, ವೈಭವ್ ರಮಣಿ–ಪಿಟೀಲು, ಆನೂರು ಅನಂತಕೃಷ್ಣ ಶರ್ಮ–ಮೃದಂಗ, ಶರತ್ ಕೌಶಿಕ್–ಘಟಂ, ಸ್ಥಳ : ಶ್ರೀ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪ, ವಿ.ವಿ. ಮೊಹಲ್ಲಾ, ಮೈಸೂರು.

■ **ಶ್ರೀ ಶಂಕರ ಜಯಂತಿ ಸಭಾ :** ಶ್ರೀರಾಮನವಮಿ ಕಾರ್ಯಕ್ರಮಗಳು, ಸಂಜೆ 5 ರಿಂದ ಶ್ರೀ ಹರಿವಾಯು ಭಜನಾ ಮಂಡಳಿ ಅವರಿಂದ ಭಕ್ತಿಗೀತೆ, ಸಂಜೆ 6 ರಿಂದ ಕರ್ನಾಟಕ ಕಲಾಶ್ರೀ ವಿದುಷಿ ಶ್ರೀಮತಿ ಎಂ. ಸರಸ್ವತಿ ಹಾಗೂ ವಿದುಷಿ ಶ್ರೀಮತಿ ರಾಜಶ್ರೀ ಜೋಸ್ಯರ್ ಶ್ರೀಕಾಂತ್ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಸ್ಥಳ: ಸಮುದಾಯ ಭವನ, ತೆಂಗಿನತೋಪು, ಸರಸ್ವತಿಪುರಂ.

■ **ಶ್ರೀ ಜಾನಕೀ ರಾಮ ಮಂದಿರ :** ಶ್ರೀ ರಾಮನವಮಿ ಕಾರ್ಯಕ್ರಮ, ಸಂಜೆ 6 ಗಂಟೆಗೆ ಸ್ಕಂದ ಭಜನಾ ಮಂಡಳಿಯಿಂದ ಭಜನೆ ಸ್ಥಳ: ಮಂದಿರದ ಆವರಣ, ಗೊಲ್ಲಗೇರಿ, ಚಾಮರಾಜ ಮೊಹಲ್ಲಾ.

■ **ಶ್ರೀ ರಾಮಾಭ್ಯುದಯ ಸಭಾ ಪಬ್ಲಿಕ್ ಚಾರಿಟಬಲ್ ಟ್ರಸ್ಟ್ :** ಶ್ರೀ ರಾಮೋತ್ಸವ ಕಾರ್ಯಕ್ರಮ, ಸಂದೀಪ್ ನಾರಾಯಣ್ ಅವರಿಂದ ಶಾಸ್ತ್ರೀಯ ಸಂಗೀತ, ಹೆಚ್.ಎಸ್. ಭಾಸ್ಕರ್(ಪಿಟೀಲು), ಜಯಚಂದ್ರರಾವ್ ಕೆ.ಯು.(ಮೃದಂಗ), ಜಿ.ಎಸ್. ರಾಮಾನುಜ(ಘಟಂ)ಸ್ಥಳ: ಶ್ರೀಮತಿ ಆಲಮ್ಮನವರ ಛತ್ರ, ಕುಂಚಿಟಿಗರ ಸಂಘ, ಶ್ರೀರಾಮಪೇಟೆ, ಸಂಜೆ 6.30 ರಿಂದ.

■ **ಶ್ರೀ ರಾಮ ಸೇವಾ ಮಂಡಲಿ :** ಶ್ರೀ ರಾಮೋತ್ಸವ ಕಾರ್ಯಕ್ರಮ, ಬೆಳಗ್ಗೆ 10.30ಕ್ಕೆ ವೇದಾದ್ರಿ ಭಜನಾ ಮಂಡಳಿಯಿಂದ ಭಜನೆ, ಸಂಜೆ 6.30 ರಿಂದ ಚಿನ್ಮಯ ಮಿಷನ್‌ನ ಸ್ವಾಮಿ ದತ್ತಪಾದಾನಂದ ಅವರಿಂದ ಪುರಜನ ಗೀತೆ (ತುಳಸಿ ರಾಮಾಯಣ ಆಧಾರಿತ) ಕುರಿತು ಉಪನ್ಯಾಸ, ಸಂಜೆ 7.45 ರಿಂದ ಚಿ. ಆರ್.ಪಿ.ಕೌಶಿಕ್ ಮತ್ತು ವೃಂದದವರಿಂದ ಗಾಯನ ಸ್ಥಳ: ಶ್ರೀ ಶಂಕರನಾರಾಯಣಸ್ವಾಮಿ ದೇವಸ್ಥಾನ, ಚಾಮುಂಡಿಪುರಂ.

■ **ಶ್ರೀ ರಾಮ ಮಂದಿರ, ಜಯನಗರ :** ಶ್ರೀ ರಾಮೋತ್ಸವ ಬೆಳಗ್ಗೆ 7ರಿಂದ 11ರ ವರೆಗೆ ಶ್ರೀ ಮಹಾಲಕ್ಷ್ಮೀ ಸಮೇತ ಸತ್ಯನಾರಾಯಣ ಹೋಮ, ಸಂಜೆ 6.30ಕ್ಕೆ ಕೆ.ಪಿ.ಪ್ರಣವ್ ಅವರಿಂದ ವೇಣುವಾದನ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ–ಗಣಪಾಲ್ ಜಾನಿ ಕೆ., 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಅಮೃತ ಸ್ವಾತಂತ್ರ್ಯ ಮಾಲಿಕೆಯಲ್ಲಿ "ಸಂಗ್ರಾಮದ ಸ್ಮೃತಿಗಳು" ಮೈಸೂರು ಸಂಸ್ಥಾನದ ಹೋರಾಟದ ನೆನಪುಗಳ ಮಾಲೆ: ಪ್ರಸ್ತುತಿ: ದಿವಾಕರ ಹೆಗಡೆ, 6.40 ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಕಾರ್ಯಕ್ರಮ, ಗಾಯನ– ಎಂ. ರಾಘವೇಂದ್ರ, ಎಂ.ಎ. ಶೋಭಾ, ವ್ಯಾಖ್ಯಾನ: ಕೆ.ಎಲ್. ಪದ್ಮಿನಿ ಹೆಗಡೆ, 7.15 ತ್ಯಾಜ್ಯ ನಿಭಾಯಿಸುವ ರೀತಿ "ಮನೆ ಬಾಗಿಲಿಗೆ ಸಮಗ್ರ ಮಾಹಿತಿ" ಪ್ರಾಯೋಜಿತ ಕಾರ್ಯಕ್ರಮ, 7.45 ನಿತ್ಯ ವಿಜ್ಞಾನ: ಪ್ರಾಯೋಜಿತ ಕಾರ್ಯಕ್ರಮ, 9.05 'ಯಕ್ಷ ಸಂಪದ' ಯಕ್ಷಗಾನದ ಬಡಗು ತಿಟ್ಟಿನ ಮಟ್ಟುಗಳ ರೇಡಿಯೋ ಪ್ರಾತ್ಯಕ್ಷಿಕೆ: ಕರ್ನಾಟಕ ಯಕ್ಷಗಾನ ಅಕಾಡೆಮಿ ಪ್ರಾಯೋಜಿತ ಕಾರ್ಯಕ್ರಮ ನಿರ್ಮಾಣ ಮತ್ತು ಪ್ರಸ್ತುತಿ: ದಿವಾಕರ ಹೆಗಡೆ, 9.35 ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಸಂದರ್ಭದಲ್ಲಿ ದೈನಂದಿನ ವಿಶೇಷ ಕಾರ್ಯಕ್ರಮ ಸರಣಿ "ಸ್ವಾತಂತ್ರ್ಯ ಚಳವಳಿಯ ಪಯಣ" ಆಕಾಶವಾಣಿಯೊಂದಿಗೆ, 10.00 ಲಯ ಸಂಭ್ರಮ: ತಾಳ, ಲಯ, ರಸಾಸ್ವಾದ. ಪರಿಕಲ್ಪನೆ ಮತ್ತು ಪ್ರಸ್ತುತಿ: ಎಚ್.ಎಲ್. ಶಿವಶಂಕರಸ್ವಾಮಿ, ನಿರ್ಮಾಣ: ಎಲ್. ಸುಬ್ರಹ್ಮಣ್ಯಂ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ಭಕ್ತಿ ಗೀತೆಗಳು: ಸುಚೇತನ್ ರಂಗಸ್ವಾಮಿ, ಬೆಳ್ಳೂರು ಸಹೋದರಿಯರು, 12.45 ನಮ್ಮ ಆರೋಗ್ಯ: ಮಕ್ಕಳಲ್ಲಿ ಕಣ್ಣಿನ ಪೊರೆ ಅಥವಾ ಕ್ಯಾಟರಾಕ್ಟ್ ಸಮಸ್ಯೆ ಮತ್ತು ಪರಿಹಾರ ಕುರಿತು ಡಾ. ಕೆ.ವಿ. ರವಿಶಂಕರ್ ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು–ಶಾಂತಾ ಜಯತೀರ್ಥ, 3.00 ಎಂ.ಎಲ್. ವಸಂತಕುಮಾರ್ ಹಾಡುಗಾರಿಕೆ, 4.00 ಮಹಿಳಾ ರಂಗ: ಡಾಕ್ಟರ್ ಸಮಯ ವಿಷಯ: ಕೋವಿಡ್ ನಂತರದ ನಿತ್ರಾಣ ಹಾಗೂ ಮೈ–ಕೈ ನೋವುಗಳು, ಭಾಗವಹಿಸುತ್ತಾರೆ: ಡಾ. ಕಾರ್ತಿಕ್ ಉಡುಪ, ಪ್ರಸ್ತುತಿ ಕೆ.ಬಿ.ಮೀನಾ, 4.30 ಝೇಂಕಾರ ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, 6.50 ಕೃಷಿ ರಂಗ 'ಕಿಸಾನ್ ವಾಣಿ' ಮಿಶ್ರ ಕೃಷಿಯಲ್ಲಿನ ಅನುಭವ ಕುರಿತು ಪ್ರಗತಿಪರ ಕೃಷಿಕ ಅಂಕಪ್ಪ ಅವರೊಡನೆ ಸಂದರ್ಶನ, 9.30 ಅಮೃತ ಸ್ವಾತಂತ್ರ್ಯ ಮಾಲಿಕೆಯ ವಿಶೇಷ ಕಾರ್ಯಕ್ರಮ, 10.30 ಸವಿನೆನಪು.

ಮೈಸೂರು ಮಿತ್ರ

ಮೈಸೂರಿನ ದೇವಾಲಯಗಳಲ್ಲಿ ಮೊಳಗಿದ ಶ್ರೀರಾಮ ನಾಮ ಜಪ, ಭಜನೆ, ಮಂತ್ರೋದ್ಘೋಷ, ಹೋಮ, ಹವನ

● 2 ವರ್ಷಗಳ ಕೋವಿಡ್ ನಂತರ ದೇವಾಲಯಗಳಲ್ಲಿ ಭಕ್ತರ ದಂಡು ● ಅಲ್ಲಲ್ಲಿ ಪಾನಕ, ಮಜ್ಜಿಗೆ, ಕೋಸಂಬರಿ ಪ್ರಸಾದ ವಿತರಣೆ





ಮೈಸೂರು ಜಯನಗರದ 16ನೇ ಕ್ರಾಸ್‌ನಲ್ಲಿರುವ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ತಾರಕ ಹೋಮ ನಡೆಯಿತು.

ಮೈಸೂರು, ಏ.10(ಆರ್‌ಕೆಬಿ)– ಎರಡು ವರ್ಷಗಳ ಕಾಲ ಕಾಡಿದ ಕೋವಿಡ್ ನಂತರ ಮೈಸೂರಿನ ಶ್ರೀರಾಮ ಮಂದಿರಗಳು ಮತ್ತು ಶ್ರೀ ಆಂಜನೇಯಸ್ವಾಮಿ ದೇವಾಲಯಗಳಲ್ಲಿ ಭಾನುವಾರ ಶ್ರೀರಾಮ ನವಮಿಯನ್ನು ಶ್ರದ್ಧಾಭಕ್ತಿಯಿಂದ ವೈಭವದಿಂದ ಆಚರಿಸಲಾಯಿತು. ದೇವಾಲಯಗಳಲ್ಲಿ ಶ್ರೀರಾಮ ನಾಮ ಜಪ, ತಪ, ಭಜನೆ, ಮಂತ್ರೋದ್ಘೋಷ, ಶ್ರೀರಾಮತಾರಕ ಹೋಮ, ವಿಶೇಷ ಪೂಜೆಗಳು ನಡೆದವು. ನಗರದ ವಿವಿಧೆಡೆ ಶ್ರೀರಾಮ ಭಕ್ತರು ಪಾನಕ, ಮಜ್ಜಿಗೆ, ಕೋಸಂಬರಿ, ಬಾತ್ ವಿತರಿಸಿಸಲಾಯಿತು.

ಜಯನಗರದ 16ನೇ ಕ್ರಾಸ್‌ನಲ್ಲಿರುವ ಶ್ರೀರಾಮ ಮಂದಿರದ 56ನೇ ವರ್ಷದ ರಾಮನವಮಿ ಆಚರಣೆಯಲ್ಲಿ ಶ್ರೀರಾಮ ತಾರಕ ಹೋಮ ನಡೆಯಿತು. ಕೃಷ್ಣಮೂರ್ತಿಪುರಂನಲ್ಲಿರುವ ಮಹಾಜನ ಸಭಾ ಶ್ರೀರಾಮ ಮಂದಿರದಲ್ಲಿ ಅಧ್ಯಕ್ಷ ಇಳೈ ಆಳ್ವಾರ್ ಸ್ವಾಮೀಜಿ ನೇತೃತ್ವದಲ್ಲಿ 93ನೇ ವರ್ಷದ ರಾಮನವಮಿಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು.

ನಾರಾಯಣಶಾಸ್ತ್ರಿ ರಸ್ತೆಯ ಗಾನವಿಶಾರದ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮಮಂದಿರ, ಶ್ರೀರಾಂಪೇಟೆಯ ಶ್ರೀ ಕಾಶಿಮಠ ಶ್ರೀರಾಮಮಂದಿರ, ಇರ್ವಿನ್ ರಸ್ತೆ ಪಂಚಮುಖಿ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ, ಮಂಡಿ ಮೊಹಲ್ಲಾದ ಕಬೀರ್ ರಸ್ತೆಯಲ್ಲಿರುವ ಭಾವಸಾರ ಕ್ಷತ್ರಿಯ ಶ್ರೀರಾಮಮಂದಿರ, ವಿ.ವಿ.ಮೊಹಲ್ಲಾ ಪ್ರಸನ್ನ ಪಾರ್ವತಿ ಕಲ್ಯಾಣ ಮಂಟಪದಲ್ಲಿ ಶ್ರೀರಾಮ ಸೇವಾ ಮಂಡಳಿ ಚಾರಿಟಬಲ್ ಟ್ರಸ್ಟ್, ರಾಮಕೃಷ್ಣನಗರ ಗಣಪತಿ ದೇವಸ್ಥಾನದಲ್ಲಿ ಗಣಪತಿ ಸೇವಾ ಮಂಡಳಿ ಟ್ರಸ್ಟ್‌ನಿಂದ ಶ್ರೀರಾಮ ಪಟ್ಟಾಭಿಷೇಕ, ಚಾಮರಾಜ ಮೊಹಲ್ಲಾ ಗೊಲ್ಲಗೇರಿ ಜಾನಕೀ ರಾಮ ಮಂದಿರದಲ್ಲಿ ಭಜನೆ, ವಿಷ್ಣು ಸಹಸ್ರ ನಾಮ ಪಾರಾಯಣ, ರಾಮಕೃಷ್ಣನಗರ ಇ ಅಂಡ್ ಎಫ್ ಬ್ಲಾಕ್ ಶ್ರೀ ಶಿರಡಿ ಸಾಯಿ ಶಕ್ತಿ ದೇವಾಲಯದಲ್ಲಿ ಕಾಕಡಾರತಿ, ಸರಸ್ವತಿಪುರಂ ತೆಂಗಿನತೋಪು ಸಮುದಾಯ ಭವನದಲ್ಲಿ ಶ್ರೀ ಶಂಕರ ಜಯಂತಿ ಸಭಾ ವತಿಯಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ಚಾಮುಂಡಿಪುರಂ ಶಂಕರನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ಶ್ರೀರಾಮ ಭಜನೆ, ಚಿನ್ಮಯಿ ಮಿಷನ್‌ನ ಸ್ವಾಮಿ ದತ್ತಪಾದಾನಂದ ಅವರಿಂದ ಪುರಜನ ಗೀತೆ (ತುಳಸಿ ರಾಮಾಯಣ ಆಧಾರಿತ) ಉಪನ್ಯಾಸ ಇತ್ಯಾದಿ ಕಾರ್ಯಕ್ರಮಗಳು ನಡೆದವು.

ಶ್ರೀ ರಾಮನ ದರ್ಶನಕ್ಕಾಗಿ ಬೆಳಗ್ಗೆಯಿಂದಲೇ ಭಕ್ತರ ದಂಡು ರಾಮಮಂದಿರಗಳು ಮತ್ತು ಆಂಜನೇಯಸ್ವಾಮಿ ದೇವಾಲಯಗಳ ಮುಂದೆ ಶ್ರದ್ಧಾಭಕ್ತಿ ಯಿಂದ ಸೇರಿದ್ದರು. ಹೋಮ ಹವನಾದಿ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರು. ರಾಮನವಮಿ ಪ್ರಯುಕ್ತ ವಿವಿಧ ಶ್ರೀರಾಮ ಸಂಘಟನೆಗಳು, ಭಕ್ತರು ಮೈಸೂರಿನ ವಿವಿಧೆಡೆ ಶಾಮಿಯಾನಗಳನ್ನು ಹಾಕಿ ಶ್ರೀರಾಮ ಪೂಜೆ ನೆರವೇರಿಸಿ, ಪಾನಕ, ಮಜ್ಜಿಗೆ, ಕೋಸಂಬರಿ ನೀಡಿ, ಬಿಸಿಲ ಬೇಗೆಯಿಂದ ಬಸವಳಿದಿದ್ದ ಜನರಿಗೆ ತಂಪು ಮಾಡಿದರು.



ಮೈಸೂರಿನ ಶಾರದಾದೇವಿನಗರ ವೃತ್ತದಲ್ಲಿ ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ಅಧ್ಯಕ್ಷ ಬಿ.ಎಂ.ರಘು ರಾಮನವಮಿ ಅಂಗವಾಗಿ ಶ್ರೀರಾಮಚಂದ್ರ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ, ಬಳಿಕ ಪಾನಕ, ಮಜ್ಜಿಗೆ ವಿತರಿಸಿದರು. ಮುಖಂಡರಾದ ಶಿವಕುಮಾರ್, ಚಂದ್ರಶೇಖರ್, ಮಧುಸೂದನ್, ಶಿವಣ್ಣ, ಪ್ರಕಾಶ್, ವೆಂಕಟೇಶ್, ಗಿರೀಶ್, ರೇಣುಕಾ, ನಂದೀಶ್ ಇನ್ನಿತರರನ್ನು ಚಿತ್ರದಲ್ಲಿ ಕಾಣಬಹುದು.



ಶ್ರೀರಾಮ ನವಮಿ ಅಂಗವಾಗಿ ಮಹಿಳಾ ಸೇವಾ ಪ್ರತಿಷ್ಠಾನ ಟ್ರಸ್ಟ್‌ನ ಸದಸ್ಯರು ಟ್ರಸ್ಟ್ ಅಧ್ಯಕ್ಷೆ ಸರಸ್ವತಿ ಅವರ ನೇತೃತ್ವದಲ್ಲಿ ಬೋಗಾದಿಯ ಎಸ್‌ಬಿಎಂ ಕಾಲೋನಿಯಲ್ಲಿರುವ ಟ್ರಸ್ಟ್‌ನ ಸದಸ್ಯೆ ಪುಷ್ಪಲತಾ ಅವರ ಮನೆಯಲ್ಲಿ ಶ್ರೀರಾಮ ಭಜನೆ ನಡೆಸಿದರು.

ಸ್ವಾಭಿಮಾನದ ಸಂಕೇತ ಶ್ರೀರಾಮ: ಶಾಸಕ ನಾಗೇಂದ್ರ



ಮೈಸೂರು, ಏ.10– ಶ್ರೀರಾಮ ಸ್ವಾಭಿಮಾನದ ಸಂಕೇತ. ಹಿಂದುಗಳ ಆರಾಧ್ಯ ದೈವ ಎಂದು ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ತಿಳಿಸಿದರು.

ಶ್ರೀರಾಮನವಮಿ ಪ್ರಯುಕ್ತ ಸದ್ವಿದ್ಯಾ ವೃತ್ತದಲ್ಲಿರುವ ವೀರಾಂಜನೇಯ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು ಬಳಿಕ ಸಾರ್ವಜನಿಕರಿಗೆ ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಿ ಮಾತನಾಡಿದರು.

ಶ್ರೇಷ್ಠ ವ್ಯಕ್ತಿತ್ವ ಹೊಂದಿದ್ದ ಶ್ರೀರಾಮ ಸಮಾಜಕ್ಕೆ ನೀಡಿದ ಕೊಡುಗೆ ಅಪಾರ, ಅವರ ಸ್ವಾಭಿಮಾನ ನಮ್ಮೆಲ್ಲರಲ್ಲೂ ಮೂಡಬೇಕು. ಅನೇಕತೆಯಲ್ಲಿ ಏಕತೆ ಹೊಂದಿರುವ ನಮ್ಮ ದೇಶದ ಸಂಸ್ಕೃತಿ ಇಡೀ ಜಗತ್ತಿಗೆ ಮಾದರಿಯಾಗಿದೆ. ಛತ್ರಪತಿ ಶಿವಾಜಿ ಮಹರಾಜ್, ಸೇರಿದಂತೆ ಅನೇಕ ಯುಗ ಪುರುಷರು ನಮ್ಮ ಪಾವನ ಭೂಮಿಯಲ್ಲಿ ಜನಿಸಿದ ಪರಿಣಾಮ ದೇಶದಲ್ಲಿ ಶಾಂತಿಯ ವಾತಾವರಣ ಇದೆ ಎಂದು ಹೇಳಿದರು.

ಬಿಜೆಪಿ ಫಲಾನುಭವಿ ಪ್ರಕೋಷ್ಠದ ಸಂಚಾಲಕ ಆರ್.ಪರಮೇಶ್, ನಗರ ಪಾಲಿಕೆ ಸದಸ್ಯ ಸತೀಶ್, ವಿಘ್ನೇಶ್ವರ ಭಟ್, ಶ್ರೀನಿವಾಸ್, ಕಾಂತಿಲಾಲ್ ಜೈನ್, ಟಿ.ಎಸ್.ಅರುಣ್, ಲಕ್ಷ್ಮಿ, ರಮೇಶ್, ಶ್ರೀನಿವಾಸ್, ಲೋಹಿತ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಕುವೆಂಪು 'ರಾಮಾಯಣ ದರ್ಶನಂ' ಕೃತಿ ಮನೆ ಮನೆಗೆ ಹಂಚಿ ರಾಮನವಮಿ ಆಚರಣೆ



ಮೈಸೂರು,ಏ.10–ರಾಷ್ಟ್ರಕವಿ ಕುವೆಂಪು ಅವರ 'ರಾಮಾಯಣ ದರ್ಶನಂ' ಮಹಾಕಾವ್ಯ ಕೃತಿಯನ್ನು ಮನೆ ಮನೆಗೆ ಹಂಚುವ ಮೂಲಕ ಜಾನಪದ ವಿದ್ವಾಂಸ ಡಾ.ರಾಮೇಗೌಡ (ರಾಗೌ) ರಾಮ ನವಮಿಗೆ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ವತಿಯಿಂದ ಕುವೆಂಪು ಅವರ ರಾಮಾಯಣ ದರ್ಶನಂ ಕೃತಿಯನ್ನು ನೀಡುವ ಮೂಲಕ ರಾಮನವಮಿ ಆಚರಿಸುತ್ತಿರುವ ಶ್ಲಾಘನೀಯ ಕಾರ್ಯ. ಕುವೆಂಪು ಅವರು ಮೂಲ ರಾಮಾಯಣವಾದ ಶ್ರೀ ವಾಲ್ಮೀಕಿ ರಾಮಾಯಣಕ್ಕೆ ಯಾವುದೇ ಲೋಪವಾಗದಂತೆ ಕತೆಯ ದೃಷ್ಟಿಯಿಂದ ಮೂಲ ರಾಮಾಯಣ ಮತ್ತು ಕುವೆಂಪು ರಾಮಾಯಣ ಒಂದೇ ಆಗಿದೆ ಎಂದು ಯೋಚನೆ ಮಾಡಲಾಗುತ್ತದೆ. ಆದರೆ ಕೆಲವು ಪಾತ್ರಗಳನ್ನು ವಿನ್ಯಾಸ ಮಾಡಿದ್ದಾರೆ. ಪ್ರಜಾಸತ್ತಾತ್ಮಕ ನಿಲುವುಗಳ ದೃಷ್ಟಿಯಿಂದ ನೋಡಿದಾಗ ತುಳಿತಕ್ಕೊಳಗಾದ ಹಾಗೂ ವಂಚಿತರಾಗಿರುವಂತಹ ಪಾತ್ರಗಳನ್ನು ವಿನ್ಯಾಸ ಮಾಡಿ ಹೊಸ ಆವಿಷ್ಕಾರವನ್ನು ಕುವೆಂಪು ಕೊಟ್ಟಿದ್ದಾರೆ ಎಂದರು. ಉದಾಹರಣೆಗೆ ಊರ್ಮಿಳೆ, ಮಂಥರೆಯ ಪಾತ್ರ ಹಾಗೇ ಕೊನೆ ಕೊನೆಯಲ್ಲಿ ರಾಮಾಯಣ ಕತೆಯಾಗಿ ಉಳಿಯದೆ ದರ್ಶನವಾಗಿ ಮಾರ್ಪಾಡಾಗುತ್ತದೆ. ರಾಮ ಮತ್ತು ರಾವಣ ಇಬ್ಬರೂ ಚೈತನ್ಯ ಮೂಲದ ಬೇರೆ ಬೇರೆ ಶಕ್ತಿಗಳು. ಸಮನ್ವಯ ಸರ್ವೋದಯ ಪೂರ್ಣ ದೃಷ್ಟಿಗಳಾದ ಪರಮ ಹಂಸ, ವಿವೇಕಾನಂದ, ಗಾಂಧಿ ಇವರುಗಳ ದೃಷ್ಟಿ ಕೋನವಾಗಿ ರಾಮಾಯಣ ದರ್ಶನಂ ಮಾರ್ಪಾಡಾಗಿ ಹೋಗುತ್ತದೆ ಎಂದರು. ಪಾಲಿಕೆ ಸದಸ್ಯ ಎಸ್‌ಬಿಎಂ ಮಂಜು, ದಿ ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ರವಿ ರಾಜಕೀಯ, ಮಂಚಪ್ಪ, ನಮ್ಮೂರು ನಮ್ಮೋರು ಸಮಾಜ ಸೇವಾ ಟ್ರಸ್ಟ್ ಉಪಾಧ್ಯಕ್ಷ ಕುಮಾರಗೌಡ, ಪತ್ರಿಕಾ ವಿತರಕರ ಸಂಘದ ಕಾರ್ಯದರ್ಶಿ ಎ.ರವಿ, ದಂತ ವೈದ್ಯ ಲೋಕೇಶ್, ಉದ್ಯಮಿ ಅರುಣ್ ಇದ್ದರು.



ಮೈಸೂರಿನ ಅಗ್ರಹಾರ ತ್ಯಾಗರಾಜ ರಸ್ತೆಯ ಶ್ರೀ ಚಿಕ್ಕಾಂಜನೇಯಸ್ವಾಮಿ ದೇವಸ್ಥಾನ ಸಮಿತಿ ವತಿಯಿಂದ ಶ್ರೀ ರಾಮನವಮಿಯನ್ನು ಅದ್ದೂರಿಯಾಗಿ ಆಚರಿಸಿ, ದೇವಾಲಯದ ಮುಂಭಾಗ ಭಕ್ತರಿಗೆ ಮಜ್ಜಿಗೆ, ಪಾನಕ ವಿತರಿಸಲಾಯಿತು. ಕಾರ್ಪೋರೇಟರ್ ಬಿ.ವಿ.ಮಂಜುನಾಥ್, ಮಾಜಿ ಕಾರ್ಪೋರೇಟರ್ ರಾಜಶೇಖರಮೂರ್ತಿ, ದೇವಸ್ಥಾನ ಸಮಿತಿಯವರು ಉಪಸ್ಥಿತರಿದ್ದರು.



ಶ್ರೀರಾಮನವಮಿ ಪ್ರಯುಕ್ತ ಮೈಸೂರಿನ 23ನೇ ವಾರ್ಡ್ ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಸೀತಾರಾಮ ಮಂದಿರದಲ್ಲಿ ಭಾನುವಾರ ಮುಡಾ ಸದಸ್ಯ ನವೀನ್ ಕುಮಾರ್ ವಿಶೇಷ ಪೂಜೆ ಸಲ್ಲಿಸಿ, ಸಾರ್ವಜನಿಕರಿಗೆ ರಾಮಾಯಣ ದರ್ಶನಂ ಪುಸ್ತಕ ವಿತರಿಸಿದರು. ಈ ಸಂದರ್ಭದಲ್ಲಿ ವಿಘ್ನೇಶ್ವರ ಭಟ್, ಲಕ್ಷ್ಮೀ, ಶ್ರೀನಿವಾಸ್, ಕಾಂತಿಲಾಲ್, ಪುರೋಹಿತರಾದ ಮಂಜು ಭಟ್, ವಿಘ್ನೇಶ್ವರ, ದತ್ತಾತ್ರೇಯ ಭಟ್ ಮತ್ತಿತರರಿದ್ದರು.



ಮೈಸೂರಿನ ಚಾಮುಂಡಿಪುರಂ ವೃತ್ತದಲ್ಲಿ ಶ್ರೀರಾಮನವಮಿ ಆಚರಿಸಿ, ಮಜ್ಜಿಗೆ, ಪಾನಕ ವಿತರಿಸಲಾಯಿತು. ಮುಡಾ ಅಧ್ಯಕ್ಷ ಹೆಚ್.ವಿ.ರಾಜೀವ್, ನಗರ ಪಾಲಿಕೆ ಸದಸ್ಯ ಮ.ವಿ.ರಾಂಪ್ರಸಾದ್ ಮತ್ತಿತರರು ಭಾಗಿಯಾಗಿದ್ದರು.



ಶ್ರೀರಾಮ ನವಮಿ ಅಂಗವಾಗಿ ಕರ್ನಾಟಕ ಪ್ರಜಾ ಪಾರ್ಟಿ (ರೈತ ಪರ್ವ) ಸಂಸ್ಥಾಪಕ ರಾಜ್ಯಾಧ್ಯಕ್ಷ ಡಾ.ಬಿ.ಶಿವಣ್ಣ ಕುಟುಂಬ ಸಮೇತರಾಗಿ ಜನತಾನಗರದಲ್ಲಿರುವ ಶ್ರೀರಾಮ ಮಂದಿರದಲ್ಲಿ ವಿಶೇಷ ಪೂಜೆ ಸಲ್ಲಿಸಿದರು. ಧರ್ಮ–ಧರ್ಮಗಳ ನಡುವೆ ನಡೆಯುತ್ತಿರುವ ಕೋಮು ಸಂಘರ್ಷಗಳ ದೂರವಾಗಿ ಶಾಂತಿ, ಸಹಬಾಳ್ವೆ ವೃದ್ಧಿಸಲಿ, ಉತ್ತಮ ಮಳೆ–ಬೆಳೆ ಆಗಿ ರೈತರು ಸಮೃದ್ಧಿ ಸಾಧಿಸಲಿ ಎಂದು ಪ್ರಾರ್ಥಿಸಿದರು.



ಮೈಸೂರಿನ ಮಂಚೇಗೌಡನಕೊಪ್ಪಲು ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ಶ್ರೀ ರಾಮನವಮಿ ಆಚರಿಸಲಾಯಿತು.

ಜನರಿಗೆ ರಕ್ತದ ಮಹತ್ವ ತಿಳಿಸಲು ಆಂದೋಲನ ಅಗತ್ಯ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ



ಮೈಸೂರು, ಏ.10– ಶ್ರೀ ರಾಮನವಮಿ ಅಂಗವಾಗಿ ಬ್ಲಡ್ ಆಂಡ್ ಶೆಲ್ ಕ್ಲಬ್ ಹಾಗೂ ಜಿ.ಡಿ.ಹರೀಶ್‌ಗೌಡ ಫೌಂಡೇಶನ್ ಮತ್ತು ಯೂತ್ ಫಾರ್ ಸೇವಾ ಹಾಗೂ ಪ್ರಗತಿ ಪ್ರತಿಷ್ಠಾನ ವತಿಯಿಂದ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಜೀವಧಾರ ರಕ್ತನಿಧಿ ಕೇಂದ್ರದಲ್ಲಿ 60ಜನ ಸ್ವಯಂ ಪ್ರೇರಿತವಾಗಿ ರಕ್ತದಾನ ಮಾಡಿದರು.

ಶ್ರೀರಾಮನಿಗೆ ವಿಶೇಷ ಪೂಜೆ ಸಲ್ಲಿಸಿ ನಂತರ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ರಕ್ತದ ಪ್ರತಿ ಹನಿಗೂ ಜೀವ ಉಳಿಸುವ ಶಕ್ತಿಯಿದೆ. ಆದ್ದರಿಂದ ರಕ್ತದ ಮಹತ್ವ ಜನರಿಗೆ ತಿಳಿಸುವ ಕಾರ್ಯ ಆಂದೋಲನವಾಗಿ ರೂಪಿತವಾಗಬೇಕು. ಇದೊಂದು ಆಂದೋಲನವಾಗಿ ಬೆಳೆಸುವುದರಿಂದ ಸಾವಿರಾರು ಜನರಿಗೆ ಸದುಪಯೋಗ ಆಗಲಿದೆ. ಇದಕ್ಕೆ ನನ್ನ ಸಂಪೂರ್ಣ ಬೆಂಬಲ ಇರುತ್ತದೆ ಎಂದರು.

18ರಿಂದ 60 ವರ್ಷದವರೆಗೆ ಎಲ್ಲರೂ ರಕ್ತದಾನ ಮಾಡಬಹುದು. ರಕ್ತ ನೀಡುವುದರಿಂದ ಜ್ಞಾಪಕ ಶಕ್ತಿ ಹೆಚ್ಚುವ ಮೂಲಕ ದೇಹದಲ್ಲಿ ಹೊಸ ರಕ್ತದ ಉತ್ಪಾದನೆ ಆಗುತ್ತದೆ. ರಕ್ತದಾನ ಮಾಡಿದ 24 ಗಂಟೆಯಲ್ಲಿ ದೇಹದಲ್ಲಿ ಹೊಸ ರಕ್ತ ಉತ್ಪತ್ತಿ ಆಗುತ್ತದೆ. ಈ ನಿಟ್ಟಿನಲ್ಲಿ ಸಾರ್ವಜನಿಕರಿಗೆ ನಿಮ್ಮ ಸಂಘಟನೆಗಳ ಮೂಲಕ ಆಂದೋಲನವಾಗಿ ರೂಪಿತವಾಗಲಿ ಎಂದು ಶುಭ ಹಾರೈಸಿದರು. ಹಾಗೆಯೇ ಶ್ರೀರಾಮನವಮಿ ಶುಭಾಶಯ ಹೇಳಿದರು.

ವಿನಯ್ ಕಣಗಾಲ್, ವಿದ್ಯಾ, ಬ್ಲಡ್ ಆಂಡ್ ಶೆಲ್ ಕ್ಲಬ್‌ನ ದೇವೇಂದರ್, ತೇಜಸ್, ಜಿ.ಟಿ.ಹರೀಶ್‌ಗೌಡ ಫೌಂಡೇಶನ್ ಅಧ್ಯಕ್ಷ ಪ್ರಜ್ವಲ್ ರಾಮಣ್ಣ, ಸಂಚಾಲಕರಾದ ಅನಿಲ್, ಆನಂದ್, ನಾಗೇಂದ್ರ, ಪವನ್, ಸುರೇಶ್, ಶಾರದಾ, ಭಾರತಿ, ಗಿರೀಶ್, ಪ್ರಜ್ವಲ್, ವಿಕಾಸ್ ಹಾಗೂ ಇನ್ನಿತರರು ಹಾಜರಿದ್ದರು.



ಮೈಸೂರಿನ 19ನೇ ವಾರ್ಡ್ ಜಯಲಕ್ಷ್ಮಿಪುರಂ ಅರಳಿಕಟ್ಟೆ ಕನ್ನಡ ಯುವಕರ ಸಂಘದ ವತಿಯಿಂದ ಶ್ರೀರಾಮನವಮಿ ಆಚರಿಸಲಾಯಿತು. ಮದನ್, ಮಹದೇಶ್, ಪಡುವಾರಹಳ್ಳಿ ಪಾಪಣ್ಣ, ಸತೀಶ್, ಮಹದೇಶ್, ನಾಗರಾಜು, ಸುರೇಶ್, ಪ್ರವೀಣ್, ಕೃಷ್ಣ, ಶಿವು, ಭೀಮಣ್ಣ, ಭೈರ, ನಾರಾಯಣ, ಹರೀಶ್, ಮಂಜು ಮತ್ತಿತರರು ಉಪಸ್ಥಿತರಿದ್ದರು.




ಶ್ರೀ ರಾಮನವಮಿ ಹಬ್ಬದ ಪ್ರಯುಕ್ತ ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ಶ್ರೀ ಪಂಚಮುಖಿ ಆಂಜನೇಯ ದೇವಸ್ಥಾನದಲ್ಲಿ ಶ್ರೀರಾಮರಿಗೆ ವಿಶೇಷ ಅಲಂಕಾರ ಹಾಗೂ ಲೋಕ ಕಲ್ಯಾಣಾರ್ಥವಾಗಿ ಶ್ರೀ ರಾಮತಾರಕ ಹೋಮ ಹಾಗೂ ಶ್ರೀರಾಮ ಪಟ್ಟಾಭಿಷೇಕ, ಶನಿ ಗುರು ನವಗ್ರಹ ಶಾಂತಿ ಹೋಮವನ್ನು ದೇವಸ್ಥಾನದ ಪ್ರಧಾನ ಅರ್ಚಕರಾದ ವಿದ್ವಾನ್ ಎಸ್. ಕೃಷ್ಣಮೂರ್ತಿ ಹಾಗೂ ಅವರ ಶಿಷ್ಯವೃಂದದಿಂದ ನೆರವೇರಿಸಲಾಯಿತು. ಆನಂತರ ಭಕ್ತಾದಿಗಳಿಗೆ ಪಾನಕ, ಮಜ್ಜಿಗೆ ಕೋಸಂಬರಿ ವಿತರಿಸಲಾಯಿತು.



ಶ್ರೀರಾಮನವಮಿ ಅಂಗವಾಗಿ ಕುವೆಂಪುನಗರದ ಜ್ಞಾನಗಂಗಾ ಆಟೋ ಚಾಲಕರ ಸಂಘದವರು ಏರ್ಪಡಿಸಿದ್ದ ಪೂಜಾ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡ, ನಗರ ಪಾಲಿಕೆ ಮಾಜಿ ಸದಸ್ಯ ಎಂ.ಪ್ರದೀಪ್ ಕುಮಾರ್ ಮತ್ತಿತರರು ಭಾಗವಹಿಸಿದ್ದರು.



ಮೈಸೂರಿನ ಕೆಆರ್‌ಎಸ್ ರಸ್ತೆಯ ಗೋಕುಲ್ ಥಿಯೇಟರ್ ಎದುರಿನ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಭಾನುವಾರ ಶ್ರೀ ರಾಮನವಮಿ ಅಂಗವಾಗಿ ಚಾಮರಾಜ ಕ್ಷೇತ್ರದ ಶಾಸಕ ಎಲ್.ನಾಗೇಂದ್ರ ಸಾರ್ವಜನಿಕರಿಗೆ ಮಜ್ಜಿಗೆ, ಪಾನಕ ವಿತರಿಸಿದರು. ದೇವಸ್ಥಾನದ ವಿ.ಮಧು, ಶ್ರೀನಿವಾಸ್‌ಗೌಡ, ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪ್ರಸನ್ನ, ಶಿವಕುಮಾರ್ ವಿನೋದ್, ಸ್ವಾಮಿ, ಮಹದೇವು, ಪ್ರಕಾಶ್, ನಾಗನಾಯಕ, ಅಭಿ ಮತ್ತಿತರರಿದ್ದರು.



ಮೈಸೂರಿನ ಮಹದೇವಪುರ ಮುಖ್ಯ ರಸ್ತೆ, ಟೆಲಿಕಾಂ ಕಾಲೋನಿಯ ಶ್ರೀ ಚಾಮುಂಡೇಶ್ವರಿ ಆಟೋ ಚಾಲಕರಿಂದ ಶ್ರೀರಾಮ ನವಮಿ ಪ್ರಯುಕ್ತ ಮಜ್ಜಿಗೆ, ಪಾನಕ ವಿತರಣೆ ಮಾಡಲಾಯಿತು. ಚಿತ್ರದಲ್ಲಿ ಶಂಕರಣ್ಣ, ನವೀನ, ಶಿವಣ್ಣ, ಸಿಕಂದರ್, ಆನಂದ, ಗಿರಿ, ದಿನಕರ, ಎಂ.ಕೆ. ಕಿರಣ್ ಇನ್ನಿತರರನ್ನು ಕಾಣಬಹುದು

ನಕ್ಕರೆ ಅದೇ ಸ್ವರ್ಗ

ಭಿಕ್ಷುಕಿ : ಅಣ್ಣಾ.. ಮೂರು ದಿನದಿಂದ ಊಟ ಮಾಡಿಲ್ಲ..
ಒಂದು ರೂಪಾಯಿ ಕೊಡಿ..
ಗುಂಡ : ಮೂರು ದಿನಂದಿಂದ ಊಟ ಮಾಡಿಲ್ಲಾಂತಿಯಾ..
ಒಂದು ರೂಪಾಯಿನಲ್ಲಿ ಏನು ಮಾಡ್ತೀಯ
ಭಿಕ್ಷುಕಿ : ಎಷ್ಟು ಕೆಜಿ ಕಮ್ಮಿ ಆಗಿದ್ದೀನಿಂತಾ ನೋಡ್ತೀನಿ..

ಮೈಸೂರು ಮಿತ್ರ

ಸೋಮವಾರ, 11 ಏಪ್ರಿಲ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

ನೀವು ವಾಸಿಸುತ್ತಿರುವ ದೇಶಕ್ಕೆ ಹಾಗೂ ಸಮಾಜಕ್ಕೆ ಎಂದಿಗೂ ದ್ರೋಹ ಮಾಡಬೇಡಿ
– ಡಾ. ಬಿ.ಆರ್. ಅಂಬೇಡ್ಕರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಸತ್ಯಕ್ಕೆ ಸಾವಿಲ್ಲ, ಸುಳ್ಳಿಗೆ ಸುಖವಿಲ್ಲ.

ನಿಮ್ಮ ಪತ್ರಗಳು

ಸರ್ಕಾರಿ ಸ್ವಾಮ್ಯದ ರಂಗಮಂದಿರ ಬಾಡಿಗೆ ಹೆಚ್ಚಳ ಹಿಂಪಡೆಯಲಿ

ಮಾನ್ಯರೆ,

ಸರ್ಕಾರದ ಸ್ವಾಮ್ಯದಲ್ಲಿರುವ ರಂಗಮಂದಿರಗಳ ಬಾಡಿಗೆ ದರವನ್ನು ಏಕಾಏಕಿ ಹೆಚ್ಚಿಸುವ ತಿರ್ಮಾನವನ್ನು ಸರ್ಕಾರ ತೆಗೆದುಕೊಂಡಿರುವುದು ಸರಿಯಲ್ಲ.

ಕಳೆದ ಎರಡು ವರ್ಷಗಳಿಂದ ಕೊರೋನದಿಂದ ಕಂಗಾಲಾಗಿದ್ದ ರಂಗ ತಂಡಗಳು ಇದೀಗ ಮತ್ತೆ ರಂಗ ಚಟುವಟಿಕೆ ಆರಂಭಿಸುತ್ತಿರುವ ಸಮಯದಲ್ಲಿ ರಂಗಮಂದಿರಗಳ ಬಾಡಿಗೆ ಹೆಚ್ಚಳ ಮಾಡಿದರೆ ಹೇಗೆ. ಒಂದು ನಾಟಕ ತಯಾರಿ ಮಾಡಿ ರಂಗದ ಮೇಲೆ ತರಬೇಕಾದರೆ ಕೊನೆಯ ಪಕ್ಷ ಐವತ್ತು ಸಾವಿರ ರೂಪಾಯಿಗಳ ಅಗತ್ಯವಿದೆ. ಇದನ್ನು ಕ್ರೋಡೀಕರಿಸುವುದು ಅಷ್ಟು ಸುಲಭದ ಮಾತಲ್ಲ. ರಂಗಮಂದಿರದ ಬಾಡಿಗೆ ಹಣವೂ ದುಪ್ಪಟ್ಟು ಆದರೆ ಹೇಗೆ ಎಂದು ತಂಡಗಳು ಯೋಚಿಸುತ್ತಾ ಕುಳಿತಿವೆ. ಸರ್ಕಾರ ಕೂಡಲೇ ಬಾಡಿಗೆ ಹೆಚ್ಚಿಸದೆ ಈಗ ಇರುವ ಬಾಡಿಗೆಯನ್ನೇ ಮುಂದುವರಿಸಬೇಕಾಗಿ ವಿನಂತಿಸುತ್ತೇನೆ. ರಂಗಕರ್ಮಿಗಳ ಮುಷ್ಕರ, ಇತರ ಹೋರಾಟಕ್ಕೆ ಅವಕಾಶವನ್ನು ಕೊಡದೆ ಯಥಾಪ್ರಕಾರವನ್ನು ಸರ್ಕಾರ ಕಾಪಾಡಲಿ.

– ರಾಜಶೇಖರ ಕದಂಬ, ಅಧ್ಯಕ್ಷರು, ಕದಂಬ ರಂಗವೇದಿಕೆ, ಮೈಸೂರು

ಹಿಂದಿ ಭಾಷೆಯ ಬಲವಂತದ ಹೇರಿಕೆ ಬೇಡ

ಮಾನ್ಯರೇ,

ಇತ್ತೀಚೆಗೆ ಕೇಂದ್ರ ಗೃಹ ಸಚಿವರಾದ ಅಮಿತ್ ಶಾ ಅವರು ರಾಜ್ಯಗಳು ಪರಸ್ಪರ ವ್ಯವಹರಿಸಲು ಇಂಗ್ಲಿಷ್ ಭಾಷೆಗೆ ಪರ್ಯಾಯವಾಗಿ ಹಿಂದಿ ಭಾಷೆಯನ್ನು ಬಳಸಬೇಕೆಂದು ನೀಡಿರುವ ಹೇಳಿಕೆ ಅತ್ಯಂತ ಖಂಡನೀಯ. ರಾಜ್ಯದಲ್ಲಿ ಸುಮಾರು 2000 ವರ್ಷಗಳಷ್ಟು ಇತಿಹಾಸ ಹೊಂದಿರುವ ಕನ್ನಡ ಭಾಷೆಯೇ ಪ್ರಧಾನ. ಬಲವಂತ ಹಿಂದಿ ಹೇರಿಕೆ ಅತ್ಯಂತ ಅಪಾಯಕಾರಿ ಬೆಳವಣಿಗೆಯಾಗಿದೆ. ಹಿಂದಿಯನ್ನು ರಾಷ್ಟ್ರಭಾಷೆ ಎಂದು ಬಿಂಬಿಸಿ ರಾಜ್ಯ ಭಾಷೆಯನ್ನು ಹತ್ತಿಕ್ಕುವ ಕೆಲಸವನ್ನು ಮಾಡಲಾಗುತ್ತಿದೆ. ನಮ್ಮ ರಾಜ್ಯದಲ್ಲಿ ನಮ್ಮ ಮಾತೃಭಾಷೆಯಾದ ಕನ್ನಡವೇ ನಮಗೆ ಶ್ರೇಷ್ಠವಾಗಿದೆ. ಈಗಾಗಲೇ ನಮ್ಮ ಕರುನಾಡು ಪರಭಾಷೆಗಳ ಸ್ವರ್ಗವಾಗಿ ಮಾರ್ಪಾಡಾಗುತ್ತಿರುವ ಇಂತಹ ಸಂದರ್ಭದಲ್ಲಿ ಗೃಹ ಸಚಿವರ ಹಿಂದಿ ಭಾಷೆ ಹೇರಿಕೆಯ ಹೇಳಿಕೆ ಸರಿಯಲ್ಲ. ಉತ್ತರ ಭಾರತದ ಬಹುತೇಕ ಕಡೆ ಇಂದಿಗೂ ಸ್ಥಳೀಯ ಭಾಷೆಯೇ ಶ್ರೇಷ್ಠ ಎಂದು ಭಾವಿಸಿದೆ. ಇಂಥ ಸಂದರ್ಭದಲ್ಲಿ ನಮ್ಮ ಸ್ಥಳೀಯ ಭಾಷೆಯನ್ನು ನಾಶ ಮಾಡುವಂತಹ ಈ ಧೋರಣೆಯು ಅಪಾಯವು ಹಾಗೂ ಖಂಡನೀಯವಾಗಿದೆ. ಈ ನಿಟ್ಟಿನಲ್ಲಿ ನಮ್ಮ ಎಲ್ಲ ಜನಪ್ರತಿನಿಧಿಗಳು ಪಕ್ಷಬೇಧ ಮರೆತು ಒಕ್ಕೊರಲಿನಿಂದ ಕನ್ನಡ ಭಾಷೆಯ ಅಸ್ತಿತ್ವಕ್ಕಾಗಿ ದನಿಯೆತ್ತ ಬೇಕಾಗಿರುವುದು ಅವಶ್ಯಕವು ಹಾಗೂ ಅನಿವಾರ್ಯವೂ ಆಗಿದೆ. ನಮಗೆಲ್ಲರಿಗೂ ಕನ್ನಡವೇ ಸತ್ಯ, ಕನ್ನಡವೇ ನಿತ್ಯ ಹಾಗೂ ಕನ್ನಡವೇ ನಿರಂತರ ಭಾಷೆ ಆಗಿರಬೇಕೆಂಬುದೇ ನಮ್ಮ ಹಂಬಲ.

–ಕಿರಣ್‌ಕುಮಾರ್ ಎಂ, ಸಂತ ಜೋಸೆಫರ ಪ್ರೌಢಶಾಲೆ, ಬನ್ನಿಮಂಟಪ, ಮೈಸೂರು.

ಎಲ್ಲೆಂದರಲ್ಲಿ ನಿಲ್ಲುವ ವಾಹನಗಳಿಗೆ ಕಡಿವಾಣ ಹಾಕಿ

ಮಾನ್ಯರೇ,

ಮೈಸೂರು ನಗರದ ಅನೇಕ ರಸ್ತೆಗಳಲ್ಲಿ ಹಲವಾರು ತಿಂಗಳುಗಳಿಂದ ವಾಹನಗಳನ್ನು ಸಿಕ್ಕ ಸಿಕ್ಕ ಕಡೆ ನಿಲ್ಲಿಸಲಾಗುತ್ತಿದೆ. ಇದರ ಮಾಲೀಕರು, ಸವಾರರು ಯಾರೆಂದು ತಿಳಿಯದೇ ಅನಾಥವಾಗಿ ನಿಂತಿರುತ್ತವೆ.

ಕೆಲವು ಸಂದರ್ಭದಲ್ಲಿ ರಿಪೇರಿ ಕಾರಣ ವಾಹನಗಳು ರಸ್ತೆಗಳ ಮೇಲೆ ಹಲವಾರು ದಿನಗಳ ಕಾಲ ನಿಂತಿರುತ್ತವೆ. ಇವುಗಳನ್ನು ಕೇಳುವವರೇ ಇರುವುದಿಲ್ಲ. ಇದೇ ರೀತಿಯಲ್ಲಿ ಮೈಸೂರು ನಗರದ ಸರ್ಕಾರಿ ಕಟ್ಟಡಗಳು, ಬೃಹತ್ ವಾಣಿಜ್ಯ ಮಳಿಗೆಗಳ ನೆಲಮಹಡಿಯಲ್ಲಿ ನೂರಾರು ವಾಹನಗಳು ಅನೇಕ ದಿನಗಳಿಂದ ಕೇಳುವವರಿಲ್ಲದೆ ನಿಂತಿರುತ್ತವೆ. ಇಂತಹ ವಾಹನಗಳಲ್ಲಿ ಅನೇಕ ವಿಷಜಂತುಗಳು ಸೇರಿಕೊಂಡಿರುತ್ತವೆ ಜೊತೆಗೆ ಧೂಳು ತುಂಬಿ ಪರಿಸರವನ್ನು ಹಾಳು ಮಾಡುತ್ತವೆ. ಮೈಸೂರು ನಗರ ಪೊಲೀಸ್ ಇಲಾಖೆಯ ಸಂಚಾರ ವಿಭಾಗದ ಅಧಿಕಾರಿಗಳು ಕೂಡಲೇ ಮೈಸೂರು ನಗರದ ರಸ್ತೆಗಳಲ್ಲಿ ಅನಾಥವಾಗಿ ನಿಂತಿರುವ ವಾಹನಗಳನ್ನು ತೆರವು ಮಾಡಬೇಕು. ಇಲ್ಲವೆ ಅವುಗಳನ್ನು ಖಾಲಿ ಪ್ರದೇಶಗಳಿಗೆ ಸಾಗಿಸಿ ರಸ್ತೆಗಳನ್ನು ಸಂಚಾರಕ್ಕೆ ಅನುವು ಮಾಡಿಕೊಡಬೇಕು ಮತ್ತು ಕಟ್ಟಡದ ಮಾಲೀಕರಿಗೆ ನೋಟಿಸ್ ಜಾರಿ ಮಾಡಿ ಇಂತಿಷ್ಟು ದಿನಗಳ ನಂತರವು ವಾಹನಗಳು ನೆಲಮಾಳಿಗೆಯಲ್ಲಿ ನಿಲ್ಲಿಸಿದ್ದರೆ ಅವುಗಳನ್ನು ತೆರವುಗೊಳಿಸಬೇಕೆಂಬ ಎಚ್ಚರಿಕೆಯನ್ನು ನೀಡಬೇಕು. ಇಂತಹ ವಾಹನಗಳ ಮಾಲೀಕರು ಯಾರು ಎಂಬುದನ್ನು ಪತ್ತೆ ಹಚ್ಚಿ ಅವರಿಗೆ ದಂಡ ವಿಧಿಸಬೇಕು.

–ವಿಕ್ರಂ ಅಯ್ಯಂಗಾರ್, ಅಧ್ಯಕ್ಷರು, ಕೆಎಂಪಿಕೆ ಚಾರಿಟಬಲ್ ಟ್ರಸ್ಟ್, ಮೈಸೂರು

ವಾಹನ ಚಾಲನೆಯಲ್ಲಿ ಜಾಗ್ರತೆ ಅಗತ್ಯ

ಮಾನ್ಯರೇ

ಇತ್ತೀಚಿನ ದಿನಗಳಲ್ಲಿ ರಸ್ತೆ ಅಪಘಾತಗಳಿಂದ ಜನರ ಸಾವು–ನೋವುಗಳು ಹೆಚ್ಚಾಗುತ್ತಿದ್ದು, ಆಧುನಿಕ ಒತ್ತಡದ ಬದುಕಿನಲ್ಲಿ ಸಿಲುಕಿರುವ ಜನರು ತಮ್ಮ ಅಮೂಲ್ಯ ಜೀವವನ್ನು ಕಳೆದುಕೊಳ್ಳುತ್ತಿದ್ದಾರೆ.

ಮದ್ಯದ ಅಮಲಿನಲ್ಲಿ ವಾಹನವನ್ನು ಚಲಾಯಿಸುವುದು, ತಾವು ತಲುಪುವ ಸ್ಥಳವನ್ನು ಅವಸರದಲ್ಲಿ ಬೇಗ ತಲುಪುವ ಧಾವಂತದಲ್ಲಿ ಅತಿ ವೇಗವಾಗಿ ವಾಹನಗಳನ್ನು ಚಲಾಯಿಸುವುದು, ಸಾರ್ವಜನಿಕರು ರಸ್ತೆಯ ಸಂಚಾರ ನಿಯಮಗಳನ್ನು ಸರಿಯಾಗಿ ಪಾಲಿಸದೇ ಇರುವುದು, ವಾಹನ ಚಲಾಯಿಸುವಾಗ ಏಕಾಗ್ರತೆಯಿಲ್ಲದೆ ಒತ್ತಡದ ಚಿಂತೆಯ ತೊಳಲಾಟದಲ್ಲಿ ತಮ್ಮನ್ನೇ ಮೈಮರೆತು ವಾಹನ ಚಲಾಯಿಸುವುದು, ನಿದ್ದೆಗೆಟ್ಟು ನಿದ್ದೆ ಮಂಪರಿನಲ್ಲಿ ವಾಹನಗಳನ್ನು ಚಲಾಯಿಸುವುದು, ಗುಂಡಿಬಿದ್ದ ರಸ್ತೆಗಳಲ್ಲಿ ತಾಳ್ಮೆಯಿಂದ ನಿಧಾನವಾಗಿ ವಾಹನ ಚಲಿಸದಿರುವುದು, ಇತರೆ ವಾಹನವನ್ನು ಹಿಂದಿಕ್ಕುವ ಬರದಲ್ಲಿ ಮುಂದೆ ಬರುವ ವಾಹನಕ್ಕೆ ಡಿಕ್ಕಿ ಹೊಡೆಯುವುದು, ಮೊಬೈಲ್‌ನಲ್ಲಿ ಮಾತನಾಡುತ್ತಾ ವಾಹನಗಳನ್ನು ಚಲಾಯಿಸುವುದು ರಸ್ತೆ ಅಪಘಾತಗಳಿಗೆ ಕಾರಣವಾಗಿದೆ.

ಇತ್ತೀಚೆಗೆ ಚಾಲಕನ ಅಜಾಗರೂಕತೆಯಿಂದ ಹನೂರು ಹಾಗೂ ತುಮಕೂರಿನ ಪಾವಗಡದಲ್ಲಿ ನಡೆದ ಬಸ್ ಅಪಘಾತ ಘಟನೆಯೇ ಇದಕ್ಕೆ ಪ್ರತ್ಯಕ್ಷ ಸಾಕ್ಷಿಯಾಗಿದೆ. ಅಪಘಾತಕ್ಕೆ ಒಳಗಾದ ಜನರು ಹಾಗೂ ಕುಟುಂಬಸ್ಥರನ್ನು ಕಳೆದುಕೊಂಡವರ ನೋವು ಎಂದಿಗೂ ಮರೆಯಲಾಗದು. ಆದ್ದರಿಂದ ಚಾಲಕರು ತಾಳ್ಮೆ, ಸಹನೆ, ಜಾಗರೂಕತೆ, ಏಕಾಗ್ರತೆ ಹಾಗೂ ಸಂಚಾರ ನಿಯಮಗಳನ್ನು ಚಾಚೂ ತಪ್ಪದೆ ಪಾಲಿಸಿ ವಾಹನ ಚಲಾಯಿಸುವ ಮೂಲಕ ಅಮೂಲ್ಯ ಜೀವ ಹಾನಿಯಾಗುವುದನ್ನು ತಪ್ಪಿಸಬಹುದಾಗಿದೆ.

–ಪರಶಿವಮೂರ್ತಿ ಎನ್.ಪಿ, ನಂಜೀಪುರ, ಸರಗೂರು ತಾಲೂಕು.



ಜಿ.ಎಲ್. ತ್ರಿಪುರಾಂತಕ
ಮೊ : 9686677284

ಸುಪ್ರಭ

ಅಂದುಕೊಂಡರೆ ಅಸಮಾಧಾನ... ಹೊಂದಿಕೊಂಡರೆ ನೆಮ್ಮದಿ ಜೀವಮಾನ....!

ಮನುಷ್ಯನ ಬದುಕು ಅನ್ಯ ಜೀವಿಗಳಿಗೆ ಹೋಲಿಸಿಕೊಂಡರೆ ವಿಭಿನ್ನ ಹಾಗೂ ವಿಶಿಷ್ಟವಾಗಿದೆ. ಬುದ್ಧಿವಂತನಾದ ಮನುಷ್ಯ ತನ್ನ ಸುಖಸೌಖ್ಯಕ್ಕೆ ಅನೇಕ ಸೌಲಭ್ಯಗಳನ್ನು ಹೊಂದಿದ್ದಾನೆ. ಅಷ್ಟಾಗಿಯೂ ಮನುಷ್ಯನಿಗೆ ತನ್ನ ಬದುಕಿಗೆ ಹೋಲಿಸಿಕೊಂಡರೆ ಪ್ರಾಣಿಪಕ್ಷಿಗಳೇ ನಿರುಮ್ಮಳವಾಗಿ ಜೀವನ ನಡೆಸುತ್ತಿವೆ ಎಂದುಕೊಂಡರೆ ಆಶ್ಚರ್ಯವಿಲ್ಲ. ಏಕೆಂದರೆ ಪ್ರಾಣಿ ಪಕ್ಷಿಗಳು ತಮಗೆ ದಕ್ಕಿದ ಬದುಕಿನ ಸತ್ಯಸಂಗತಿಗಳಿಗೆ ಹೊಂದಿಕೊಂಡು ಬದುಕುತ್ತಿರುವ ಕಾರಣಕ್ಕೆ ಒಂದು ರೀತಿಯ ಸಮಾಧಾನದ ಬದುಕನ್ನು ಕಂಡುಕೊಂಡಿವೆ ಎನ್ನಬಹುದು. ಆದರೆ ಮನುಷ್ಯ ತಾನು ಅಂದು ಕೊಂಡ ರೀತಿ ಬದುಕಲು ಯತ್ನಿಸುವ ಕಾರಣಕ್ಕೆ ಸದಾ ಅತೃಪ್ತಿ, ಅಸಮಾಧಾನ ಇದ್ದಂತೆ ಕಾಣುತ್ತದೆ. ಅಂದುಕೊಂಡ ಹಾಗೆ ಬದುಕಲು ಇದು ಬೆಳ್ಳಿತೆರೆಯ ಮೇಲೆ ಚಿತ್ರಕಥೆಯಂತೆ ನಡೆಯುವ ಮೂರುಗಂಟೆಯ ಸಿನೆಮಾ ಪ್ರಸಂಗವಲ್ಲ, ಇದು ನೈಜಜೀವನ, ಇಲ್ಲಿ ಭ್ರಮೆಗಿಂತ ವಾಸ್ತವವೇ ಸತ್ಯ.

ಜೊತೆಗೆ ಪ್ರಪಂಚದ ಎಲ್ಲಾ ಐಹಿಕ ಸುಖವನ್ನು ಒಂದು ಜನ್ಮದಲ್ಲಿಯೇ ಅನುಭವಿಸಿ ಬಿಡುವ ಇರಾದೆಯನ್ನು ಮನುಷ್ಯ ಹೊಂದಿರುತ್ತಾನೆ. ಅಪರಿಮಿತ ಬಯಕೆಯಿಂದ ತನ್ನಲ್ಲಿ ಇರುವ ಸಂಗತಿಗಳನ್ನು ಅನುಭವಿಸದೇ ಇರುವುದಕ್ಕೆ ಅಪೇಕ್ಷಿಸಿ ದುಃಖವನ್ನು ಕೊಳ್ಳುವ ಪ್ರಯತ್ನ ಮಾಡುತ್ತಾನೆ. ಮನುಷ್ಯನಿಗೆ ಸುಖವಾಗಿ ಬದುಕಲು ಬರುವುದಿಲ್ಲವೋ ಏನೋ ಎಂದು ಅನುಮಾನ ಮೂಡುವಂತೆ ಬದುಕುತ್ತಾನೆ. ಹಣ, ಅಧಿಕಾರ, ಸ್ಥಾನಮಾನ ಎಲ್ಲವೂ ಇದ್ದರೂ ಏನೂ ಇಲ್ಲ, ಅವರನ್ನು ನೋಡಿ, ಇವರನ್ನು ನೋಡಿ ಎಂದು ಹೇಳುತ್ತಾ, ತನ್ನ ಬದುಕನ್ನೇ ಸರಿಯಾಗಿ ನೋಡದೆ ಅಸಮಾಧಾನದಲ್ಲಿಯೇ ಸಮಾಧಿ ಸೇರಿಬಿಡುತ್ತಾನೆ.

ಸಮಾಧಾನ ಪಡಲು ಹಲವು ಸಂಗತಿಗಳಿದ್ದರೂ, ಅಸಮಾಧಾನ ಪಡಲು ಇಲ್ಲದ ಒಂದೆರಡು ಸಂಗತಿಗಳನ್ನು ಹುಡುಕುವ ಜಾಯಮಾನ ಅನೇಕರದ್ದು. ಗಳಿಸಿರುವ ವಸ್ತುಗಳನ್ನು ಅಮಿತಾನಂದವನ್ನು ಕೊಟ್ಟರೂ, ಅದಕ್ಕೆ ಆಸ್ಪದ ಕೊಡದೆ ಗಳಿಸದೇ ಉಳಿದಿರುವ ಅನ್ಯರ ಬಳಿ ಇರುವ ಕೆಲವು ಸಣ್ಣ ವಸ್ತುಗಳಿಗೆ ಮನುಷ್ಯ ಆಸೆ ಪಡುವುದು ವಿಪರ್ಯಾಸದ ಸಂಗತಿ. ಅನೇಕರಿಗೆ ತಮ್ಮ ಬಳಿ ಇರುವ ವಸ್ತುಗಳನ್ನು ಆಸ್ವಾಧಿಸುವ ಮನೋಭಾವವೇ ಇರುವುದಿಲ್ಲ. ಅನ್ಯರ ವಸ್ತುಗಳೇ ಅವರ ಕಣ್ಣುಗಳನ್ನು ಕುಕ್ಕುತ್ತಿರುತ್ತವೆ. ಆ ವಸ್ತು ತನಗೆ ಸಿಕ್ಕರೆ ಮಾತ್ರ ತಾನು ಸುಖಿ ಎಂದು ಭ್ರಮಿಸುತ್ತಾರೆ. ಅಷ್ಟಾಗಿಯೂ ಅದು ಸಿಕ್ಕ ಮೇಲೆ ಖುಷಿ ಮಾತ್ರ ಕೆಲವೇ ನಿಮಿಷ. ಮತ್ತೆ ಮತ್ತೊಂದು ವಸ್ತುವನ್ನು ಗಳಿಸುವ ವ್ಯಾಮೋಹ. ಈ ರೀತಿಯ ಸಾಲು ಸಾಲು ವ್ಯಾಮೋಹದ ಸರಮಾಲೆ ಅನೇಕರ ಸಂತೋಷಕ್ಕೆ ಉರುಳಾಗಿ ಸದಾ ಅಸಂತೋಷದ ಗೂಡಲ್ಲಿ ಬಿಕ್ಕುತ್ತಿರುತ್ತಾರೆ.

ಈ ಭೂಮಿ ಮೇಲೆ ಯಾವುದೂ ಪರಿಪೂರ್ಣ ಎನಿಸುವುದಿಲ್ಲ. ಹಾಗೆಯೇ ವಿವಾಹ ಸಂಬಂಧಗಳು ಸಹ. ಪರ್ಫೆಕ್ಟ್ ಜೋಡಿ ಎಂದು ಬಿಂಬಿಸಿಕೊಳ್ಳುವ ಅನೇಕರು ತೆರೆಮರೆಯಲ್ಲಿ ಸಣ್ಣ ಸಣ್ಣ ಸಂಗತಿಗಳಿಗೂ ಜಗಳ ಕಾಯುತ್ತಿರುತ್ತಾರೆ. ಒಂದು ಗಂಡು ಹಾಗು ಹೆಣ್ಣು ಪರಸ್ಪರ ಅಭಿರುಚಿಗಳನ್ನು ಗೌರವಿಸಿ ದಾಂಪತ್ಯ ಜೀವನವನ್ನು ಸುಖಮಯವಾಗಿಸಿ, ನೆಮ್ಮದಿದಾಯಕವಾಗಿಸಿಕೊಳ್ಳಬಹುದಾಗಿರುತ್ತದೆ. ಅದರ ಬದಲಿಗೆ ಒಬ್ಬರು ಇನ್ನೊಬ್ಬರ ದೌರ್ಬಲ್ಯಗಳನ್ನು ಎತ್ತಿ ತೋರಿಸಿ ಪರಸ್ಪರ ದೋಷಾರೋಪ ಮಾಡುವುದು ಸಹಜವಾಗಿದೆ. ಏಳು ವರ್ಷಗಳ ಕಾಲ ಪ್ರೀತಿಸಿ ಮದುವೆಯಾದ ಜೋಡಿ ಹಲವು ತಿಂಗಳುಗಳ ಕಾಲ ಸರಿಯಾಗಿ ಸಂಸಾರ ನಡೆಸದೆ ವಿಚ್ಛೇದನ ಪಡೆದ ಉದಾಹರಣೆಗಳೂ ಅನೇಕ ಇವೆ. ಇದಕ್ಕೆ ಕಾರಣ ಹೊಂದಿಕೊಳ್ಳದೆ ಅಂದುಕೊಳ್ಳುವುದು. ಒಬ್ಬರು ಇನ್ನೊಬ್ಬರಿಂದ ಅನಪೇಕ್ಷಿತ ನಿರೀಕ್ಷೆಗಳನ್ನು ಇಟ್ಟುಕೊಂಡು, ಆ ನಿರೀಕ್ಷೆಗಳು ಹುಸಿ ಆದಾಗ ಅವರು ಕೈಲಾಗದವರಂತೆ ಕಾಣುತ್ತಾರೆ. ಆಗ ಅವರನ್ನು ಜರಿಯುವ ಚಾಳಿ ಶುರುವಾಗುತ್ತದೆ. ಇದರಿಂದ ಸಂಬಂಧಕ್ಕೆ ಧಕ್ಕೆ ಬರುತ್ತದೆ. ತನ್ನ ಅನಿಸಿಕೆಯಂತೆ ತನ್ನ ಸಂಗಾತಿ ನಡೆದುಕೊಳ್ಳಬೇಕೆಂಬ ಹಠ ಹಾಗೂ ಸ್ವಾರ್ಥದಿಂದ ಅನೇಕ ಸಂಸಾರಗಳು ಹಾಳಾಗಿವೆ. ಸಾಲದ್ದಕ್ಕೆ ಅವರುಗಳ ಪೋಷಕರು ಬುದ್ಧಿ ಹೇಳಿ ಹೊಂದಿಕೊಂಡು ಹೋಗಲು ಅವಕಾಶ ಕಲ್ಪಿಸುವುದನ್ನು ಬಿಟ್ಟು, ತಮ್ಮ ತಮ್ಮ ಮಕ್ಕಳ ನಡೆಯನ್ನು ಸಮರ್ಥಿಸಿಕೊಳ್ಳುತ್ತಾ, ಬಾಂಧವ್ಯ ಬೆಸೆಯುವ ಬದಲು ಸಂಬಂಧಕ್ಕೆ ಕೊಳ್ಳಿ ಇಟ್ಟು ಸುಟ್ಟುಬಿಡುತ್ತಾರೆ. ಒಬ್ಬ ಮನುಷ್ಯ ತಾನೆ ಬೆಳಗ್ಗೆ ಇದ್ದ ಹಾಗೆ ಸಂಜೆ ಇರುವುದಿಲ್ಲ,



> **ಸಮಾಧಾನ ಪಡಲು ಹಲವು ಸಂಗತಿಗಳಿದ್ದರೂ, ಅಸಮಾಧಾನ ಪಡಲು ಇಲ್ಲದ ಒಂದೆರಡು ಸಂಗತಿಗಳನ್ನು ಹುಡುಕುವ ಜಾಯಮಾನ ಅನೇಕರದ್ದು. ಗಳಿಸಿರುವ ವಸ್ತುಗಳನ್ನು ಅಪರಿಮಿತ ಆನಂದವನ್ನು ಕೊಟ್ಟರೂ, ಅದಕ್ಕೆ ಆಸ್ಪದ ಕೊಡದೆ ಗಳಿಸದೇ ಉಳಿದಿರುವ ಅನ್ಯರ ಬಳಿ ಇರುವ ಕೆಲವು ಕ್ಷುಲ್ಲಕ ವಸ್ತುಗಳಿಗೆ ಮನುಷ್ಯ ಆಸೆ ಪಡುವುದು ವಿಪರ್ಯಾಸದ ಸಂಗತಿ. ಪ್ರಪಂಚದ ಎಲ್ಲಾ ಐಹಿಕ ಸುಖವನ್ನು ಈ ಒಂದು ಜನ್ಮದಲ್ಲಿಯೇ ಅನುಭವಿಸಿ ಬಿಡುವ ಇರಾದೆ ಮನುಷ್ಯನಿಗೆ ಇದೆ. ಅಪರಿಮಿತ ಬಯಕೆಯಿಂದ ತನ್ನಲ್ಲಿ ಇರುವ ಸಂಗತಿಗಳನ್ನು ಅನುಭವಿಸದೇ ಇರುವುದಕ್ಕೆ ಅಪೇಕ್ಷಿಸಿ ದುಃಖವನ್ನು ಕೊಳ್ಳುವ ಪ್ರಯತ್ನ ಮಾಡುತ್ತಾನೆ. ಮನುಷ್ಯನಿಗೆ ಸುಖವಾಗಿ ಇರಲು ಬರುವುದಿಲ್ಲವೋ ಏನೋ ಎಂದು ಅನುಮಾನ ಮೂಡುವಂತೆ ಬದುಕುತ್ತಾನೆ. ಎಲ್ಲವೂ ಇದ್ದರೂ ಏನೂ ಇಲ್ಲ, ಅವರನ್ನು ನೋಡಿ, ಇವರನ್ನು ನೋಡಿ ಎಂದು ಹೇಳುತ್ತಾ, ತನ್ನ ಬದುಕನ್ನು ಸರಿಯಾಗಿ ನೋಡದೆ ಅಸಮಾಧಾನದಲ್ಲಿಯೇ ಸಮಾಧಿ ಸೇರಿಬಿಡುತ್ತಾನೆ.**

ಅಂತಹುದರಲ್ಲಿ ಅನ್ಯರನ್ನು ತನ್ನ ಅಣತಿಯಂತೆ ನಡೆಯಬೇಕು ಎಂದು ಬಯಸುವುದು ಎಷ್ಟು ಸರಿ ಅಲ್ಲವೇ?

ಸಮಾನ ಮನಸ್ಕ ಪತಿಪತ್ನಿಯರು ಕಾಣಸಿಗುವುದು ಬಹು ಅಪರೂಪ. ಹಾಗೆಯೇ ಭಿನ್ನತೆ ಇದ್ದರೆ ಬದುಕು ತುಸು ವರ್ಣಮಹವಾಗಿರುತ್ತದೆ. ಇಲ್ಲವಾದಲ್ಲಿ ಏಕತಾನತೆ ಕಾಡುತ್ತದೆ. ಅನೇಕ ಜೋಡಿಗಳು ಮದುವೆಯಾಗಿ ಎಷ್ಟೇ ವರ್ಷಗಳಾದರೂ ಪರಸ್ಪರ ಒಬ್ಬರನ್ನೊಬ್ಬರು ತಮ್ಮ ಆಯ್ಕೆಯ ವಿಚಾರಕ್ಕೆ ಗೊಣಗುತ್ತಿರುತ್ತಾರೆ. ಗಂಡ 'ನಾನು ಎಷ್ಟೋ ರೂಪವತಿ ಹುಡುಗಿಯರನ್ನು ನೋಡಿದ್ದು, ನನ್ನ ಕರ್ಮ ನಿನ್ನನ್ನು ಕಟ್ಟಿಕೊಳ್ಳುವ ಹಾಗೆ ಆಯ್ತು, ಅಂದರೆ, ಹೆಂಡತಿ, 'ನನ್ನನ್ನು ನೋಡಲು ಎಷ್ಟೋ ಶ್ರೀಮಂತ ಹುಡುಗರು ಬಂದಿದ್ದರು, ನನ್ನ ದುರಾದೃಷ್ಟ ನಮ್ಮ ತಂದೆ ನಿಮಗೆ ಗಂಟು ಹಾಕಿದರು' ಎಂದು ಗೊಣಗುತ್ತಾಳೆ. ಒಮ್ಮೆ ಹೀಗೆ ಮದುವೆಯಾಗಿ ಇಪ್ಪತ್ತು ವರ್ಷವಾಗಿದ್ದರೂ ಗಂಡ ಹೆಂಡತಿಗೆ ಗೊಣಗುತ್ತಲೇ ಇದ್ದ. 'ತಾನು ತನ್ನ ಸಹಪಾಠಿಯೊಬ್ಬಳನ್ನು ಇಷ್ಟಪಟ್ಟಿದ್ದು, ಅವಳು ತನ್ನ ಅಭಿರುಚಿಗೆ ತಕ್ಕ ಹಾಗೆ ಇದ್ದಳು. ನನ್ನನ್ನು ಬಹಳ ಕಾಳಜಿ–ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದಳು. ನಾನು ಅವಳನ್ನು ಕಾರಣಾಂತರಗಳಿಂದ ವರಿಸಲು ಆಗಲಿಲ್ಲ. ಅವಳನ್ನು ಮದುವೆಯಾಗಿದ್ದರೆ ರಾಜನ ರೀತಿ ಇರುತ್ತಿದ್ದೆ' ಎನ್ನುತ್ತಾನೆ. ಅದಕ್ಕೆ ಪತ್ನಿ 'ಹಾಗೆ ಭ್ರಮೆ ಪಡಬೇಡಿ, ಪ್ರೇಮಿಯಾಗಿದ್ದವಳು ಮದುವೆಯಾಗಿ ಹೆಂಡತಿಯಾದ ಮೇಲೆ ಬೇರೆ ರೀತಿಯೇ ಇರುತ್ತಾಳೆ. ಈಗ ಇರುವುದಕ್ಕೆ ಸಮಾಧಾನ ಪಟ್ಟುಕೊಂಡು, 'ಪಾಲಿಗೆ ಬಂದದ್ದು ಪಂಚಾಮೃತ' ಎಂದು ಭಾವಿಸಿ ಹೊಂದಿಕೊಂಡು ಹೋಗಬೇಕು' ಎನ್ನುತ್ತಾಳೆ. ಅಷ್ಟಾದರೂ ಅವನು ಆಗಾಗ ಅವಳು ಸರಿಯಾದ ಜೋಡಿ ಅಲ್ಲ ಎನ್ನುತ್ತಾ ಗೊಣಗುತ್ತಲೇ ಇರುತ್ತಾನೆ.

ಹೀಗೆ ಒಮ್ಮೆ ಈ ಪತಿಪತ್ನಿಯರು ದೂರದ ಊರಿಗೆ ಮದುವೆ ಸಮಾರಂಭವೊಂದಕ್ಕೆ ಹೋದಾಗ, ಆ ಹಳೇ ಪ್ರೇಮಿ ಅವನಿಗೆ ಅಲ್ಲಿ ಸಿಗುತ್ತಾಳೆ. ಇಬ್ಬರು ಪರಸ್ಪರ ಕುಶಲೋಪಚಾರಿ ವಿಚಾರಿಸಿಕೊಳ್ಳುತ್ತಾರೆ. ಅವನು ತನ್ನ ಪತ್ನಿಯನ್ನು ಅವಳಿಗೆ ಪರಿಚಯಿಸುತ್ತಾನೆ. ಆ ಹಳೇ ಪ್ರೇಯಸಿ ತಾನು ಇಲ್ಲೇ ಇರುವುದಾಗಿ, ಮನೆಗೆ ಬರುವಂತೆ ಆಹ್ವಾನಿಸುತ್ತಾಳೆ. ಅದಕ್ಕೆ ಅವರು ಒಪ್ಪಿ ಅವಳೊಟ್ಟಿಗೆ ಅವರ ಮನೆಗೆ ಹೋಗುತ್ತಾರೆ. ಐಷಾರಾಮಿ ಮನೆಯನ್ನು ನೋಡಿ, ಆತ ತಾನು ಇವಳನ್ನು ಮದುವೆಯಾಗಿದ್ದರೆ ಇದೇ ರೀತಿ ಮನೆಯಲ್ಲಿ ಇರಬಹುದಿತ್ತು ಎಂದು ಭಾವಿಸುತ್ತಾನೆ. ಮನೆ ಒಳಗೆ ಹೋದವರೆ ಸೋಫಾದ ಮೇಲೆ ಕೂರುತ್ತಾರೆ. ಆ ಪ್ರೇಯಸಿ ತನ್ನ ಮನೆ ಬಗ್ಗೆ ಹೆಮ್ಮೆಯಿಂದ ಹೇಳುತ್ತಿರುತ್ತಾಳೆ. ಸ್ವಲ್ಪ ಸಮಯದ ನಂತರ ಆತ 'ನಿಮ್ಮ ಪತಿ ಪರಿಚಯವಾಲೇ ಇಲ್ಲ, ಎಲ್ಲಿದ್ದಾರೆ ಅವರು ಎಂದು ಕೇಳುತ್ತಾನೆ, ಆಗ ಅವಳು 'ರೀ ಇಲ್ಲಿ ಬನ್ನಿ' ಎಂದು ಕರೆದಾಗ ಆಕೆಯ ಪತಿರಾಯ ಅಡುಗೆ ಮನೆಯಿಂದ ಹೊರಬಂದವನೇ 'ತನ್ನ ಪರಿಚಯ ಮಾಡಿಕೊಂಡು, ತಾನು ಟೀ ಮಾಡಿ ತರುವುದಾಗಿ, ತಮಗೆ ಶುಗರ್ ಅಥವಾ ಶುಗರ್‌ಲೆಸ್ ಟೀ ಯಾವುದು ಬೇಕು? ಎಂದು ಕೇಳು ತ್ತಾನೆ. ಇದನ್ನು ಕೇಳಿದಾಕ್ಷಣ ಭ್ರಮೆಯಲ್ಲಿ ತೇಲುತ್ತಿದ್ದವನಿಗೆ ಭ್ರಮನಿರಸನ ವಾಗುತ್ತದೆ. ಅವನಿಗೆ ವಾಸ್ತವ ಅರಿವಾಗುತ್ತದೆ. ತಾನು ಈಕೆಯನ್ನು ವರಿಸಿದ್ದರೆ, ಇದೇ ರೀತಿ ಅತಿಥಿಗಳಿಗೆ ಟೀ/ಕಾಫಿ ತಂದುಕೊಡುವ ಪರಿಸ್ಥಿತಿ ಬರುತ್ತಿತ್ತು ಎಂದು ಭಾವಿಸುತ್ತಾನೆ. ಹಾಗೆಯೇ ತನ್ನ ಹೆಂಡತಿ ತನ್ನನ್ನು ಉತ್ತಮವಾಗಿ ನೋಡಿಕೊಳ್ಳುತ್ತಿದ್ದಾಳೆ ಎಂದು ಭಾವಿಸಿ ಖುಷಿ ಪಡುತ್ತಾನೆ.

ಅನೇಕ ಸಂದರ್ಭಗಳಲ್ಲಿ ಇದೇ ರೀತಿ ಅನುಭವಗಳಾಗುತ್ತವೆ. ಅನ್ಯರು ಸಾಮಾಜಿಕ ಬದುಕಿನಲ್ಲಿ ನಡೆದುಕೊಳ್ಳುವ ರೀತಿ ನೋಡಿ, ಇವರ ವೈಯಕ್ತಿಕ ಬದುಕು ಎಷ್ಟು ಉತ್ಕೃಷ್ಟತೆಯಿಂದ ಕೂಡಿರಬಹುದು ಎಂಬ ಭ್ರಮೆ ಇರುತ್ತದೆ. ಆದರೆ ಅನೇಕ ಕೇಸ್‌ಗಳಲ್ಲಿ ಊಹೆ ತದ್ವಿರುದ್ಧವಾಗಿರುತ್ತದೆ. ಇದಕ್ಕೆ ಕೆಲವು ಸೆಲೆಬ್ರಿಟಿಗಳ ಜೀವನವನ್ನು ನೋಡಬಹುದಾಗಿದೆ. ಕೋಟಿ ಕೋಟಿ ರೂಪಾಯಿ ಸಂಪಾದನೆ, ಬೃಹತ್ ಬಂಗಲೆ, ಐಷಾರಾಮಿ ಕಾರು ಎಲ್ಲವನ್ನು ಹೊಂದುವ ಮೂಲಕ ಸಾಮಾಜಿಕವಾಗಿ ಶ್ರೀಮಂತರಂತೆ ಕಂಡರೂ ಸಾಂಸಾರಿಕ ಜೀವನದಲ್ಲಿ ಬಹಳ ಬಡತನವಿರುತ್ತದೆ. ಮಧ್ಯಮ ವರ್ಗವೊಂದರ ಕುಟುಂಬ ಸದಸ್ಯರ ನಡುವೆ ಇರುವ ಸಾಮರಸ್ಯ ಅವರ ಕುಟುಂಬಗಳಲ್ಲಿ ಇಲ್ಲದೇ ಇರುವುದನ್ನು ಕಾಣಬಹುದಾಗಿರುತ್ತದೆ.

ಹಾಗಾಗಿ ಇತರರ ಹೊರಬದುಕನ್ನು ಕಂಡು ಇಲ್ಲಸಲ್ಲದ ಭ್ರಮೆ ಪಡುವ ಅಗತ್ಯವಿಲ್ಲ. ವಾಸ್ತವ ಬದುಕು ಬೇರೆಯೇ ಇರುತ್ತದೆ. ಇತ್ತೀಚಿನ ದಿನಗಳಲ್ಲಿ ಕೆಲವು ವಿಚಿತ್ರ ವರದಿಗಳು ಹುಬ್ಬೇರಿಸುವಂತೆ ಮಾಡುತ್ತವೆ. ಮೂರು ಮಕ್ಕಳ ತಾಯಿ ಗಂಡ ಮಕ್ಕಳನ್ನು ಬಿಟ್ಟು ಪ್ರಿಯತಮನೊಂದಿಗೆ ಓಡಿಹೋದಳು ಅಂತಲೋ, ವಿವಾಹಿತನೊಂದಿಗೆ ಕಾಲೇಜು ಹುಡುಗಿ ಓಡಿಹೋದಳು ಅಂತಲೋ ಸುದ್ದಿ ಓದುತ್ತೇವೆ. ಇವೆಲ್ಲವೂ ಭ್ರಮೆಗಳಿಂದ ಆಗುವ ಪ್ರಕರಣಗಳು. 'ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡ' ಎಂಬ ವಚನಕಾರರಾದ ಅಲ್ಲಮಪ್ರಭುದೇವರ ವಚನದಂತೆ ಕ್ಷಣಿಕ ಸುಖದ ಆಸೆಗೆ ಬಿದ್ದು, ತಮ್ಮ ಭವಿಷ್ಯವನ್ನೇ ಹಾಳು ಮಾಡಿಕೊಳ್ಳುತ್ತಿರುವ ಇಂದಿನ ಯುವ ಮನಸುಗಳಿಗೆ ವಾಸ್ತವದ ಅರಿವಾಗಬೇಕು. ಬಣ್ಣದ ಮಾತುಗಳಿಗೆ ಮಾರುಹೋಗಿ, ಭ್ರಮೆಗೆ ಬಿದ್ದು, ಸಮಾಜ ಒಪ್ಪದ ಅನೈತಿಕ ಸಂಬಂಧಕ್ಕೆ ನಾಂದಿ ಹಾಡುತ್ತಾರೆ. ತಮ್ಮೊಟ್ಟಿಗೆ ತಮ್ಮ ಕುಟುಂಬಕ್ಕೂ ನೋವನ್ನು ತರುತ್ತಾರೆ. ನಂತರ ಭ್ರಮೆಯಿಂದ ಉಂಟಾದ ಒಂದು ತಪ್ಪಿಗೆ ಪಶ್ಚಾತ್ತಾಪಡುತ್ತಾ ಜೀವಮಾನವಿಡೀ ಕೊರಗುತ್ತಾ ನೋವನ್ನು ಅನುಭವಿಸುತ್ತಾರೆ.

ತಮಗೆ ದಕ್ಕಿದ ಕೆಲಸದಲ್ಲಿ, ತಮಗೆ ಸಿಕ್ಕಿದ ಸಂಗಾತಿ ವಿಚಾರದಲ್ಲಿ, ಸ್ನೇಹ ಸಂಬಂಧಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳದೆ ಸದಾ ಗೊಣಗುತ್ತಾ ಇರುತ್ತಾರೆ. ಇಲ್ಲಸಲ್ಲದ್ದನ್ನು ಕಲ್ಪಿಸಿಕೊಂಡು ತಮ್ಮ ಬಗ್ಗೆ ಕೀಳರಿಮೆ ಅನುಭವಿಸುತ್ತಿರುತ್ತಾರೆ. ಏನೇನೋ ಅಂದುಕೊಂಡು ನೋವನ್ನು ಅನುಭವಿಸುವುದಕ್ಕಿಂತ, ವಾಸ್ತವವನ್ನು ಅರಿತು ಹೊಂದುಕೊಂಡು ಹೋದರೆ ಜೀವಮಾನವಿಡಿ ನೆಮ್ಮದಿಯನ್ನು ಕಂಡುಕೊಳ್ಳಬಹುದು. ನಿತ್ಯ ಅನೇಕ ಆಕರ್ಷಣೆಗಳು ಮನುಷ್ಯನನ್ನು ಸೆಳೆಯುವುದುಂಟು. ಆದರೂ ಯಾವ ಆಕರ್ಷಣೆ ಹಾಗೂ ಆಮಿಷಗಳಿಗೂ ಒಳಗಾಗದೆ ತಮ್ಮ ಬದುಕು ತಮ್ಮದು ಎಂದು ಭಾವಿಸಿದರೆ ಮನೆ ನಂದನವನವಾಗುತ್ತದೆ, ಇಲ್ಲಸಲ್ಲದ ದುರಾಸೆಗಳ ಬೆನ್ನತ್ತಿ ಹೋದರೆ ಅದೊಂದು ಕಾನನವಾಗಿಬಿಡು ತ್ತದೆ. ಏನಂತೀರಿ?

ಬೆಳ್ಳಿ ಕಿರಣ : ಅಂದುಕೊಂಡವರೆ ನೊಂದುಕೊಳ್ಳುವವರು ಹೊಂದಿಕೊಂಡವರು ನೆಮ್ಮದಿ ಕಾಣುವರು

ರಷ್ಯಾ-ಉಕ್ರೇನ್ ಯುದ್ಧ

ಇಂದು ಮೋದಿ, ಜೋ ಬೈಡನ್ ವರ್ಚುವಲ್ ಸಭೆ

ನವದೆಹಲಿ, ಏ. 10– ರಷ್ಯಾ–ಉಕ್ರೇನ್ ಯುದ್ಧ ಮುಂದುವರೆದಿರುವಂತೆಯೇ ಪ್ರಧಾನಿ ನರೇಂದ್ರ ಮೋದಿ ಅವರು ಸೋಮವಾರ ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರೊಡನೆ ವರ್ಚುವಲ್ ಸಭೆ ನಡೆಸಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ (ಎಂಇಎ) ಭಾನುವಾರ ಮಾಹಿತಿ ನೀಡಿದೆ.

ಸಭೆ ವೇಳೆ ಉಭಯ ರಾಷ್ಟ್ರಗಳ ನಡುವೆ ದ್ವಿಪಕ್ಷೀಯ ಸಹಕಾರ ಪರಿಶೀಲನೆ, ದಕ್ಷಿಣ ಏಷ್ಯಾದಲ್ಲಿನ ಇತ್ತೀಚಿನ ಬೆಳವಣಿಗೆಗಳು ಹಾಗೂ ಇಂಡೋ–ಪೆಸಿಫಿಕ್ ಮತ್ತು ಪರಸ್ಪರ ಆಸಕ್ತಿಯ ಜಾಗತಿಕ ಸಮಸ್ಯೆಗಳ ಕುರಿತು



ಇಬ್ಬರೂ ನಾಯಕರು ಚರ್ಚೆ ನಡೆಸಲಿದ್ದಾರೆ. ವರ್ಚುವಲ್ ಸಭೆಯು ದ್ವಿಪಕ್ಷೀಯ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಗುರಿಯೊಂದಿಗೆ ಸಹಭಾಗಿತ್ವವನ್ನು ಮುಂದುವರಿಸಲು ಎರಡೂ ರಾಷ್ಟ್ರಗಳಿಗೆ ಅನುವು ಮಾಡಿಕೊಡುತ್ತದೆ ಎಂದು ಎಂಇಎ ಹೇಳಿಕೆಯಲ್ಲಿ ತಿಳಿಸಿದೆ.

ಉಭಯ ನಾಯಕರು ದಕ್ಷಿಣ ಏಷ್ಯಾ, ಇಂಡೋ–ಪೆಸಿಫಿಕ್ ಪ್ರದೇಶದಲ್ಲಿನ ಇತ್ತೀಚಿನ ಬೆಳವಣಿಗೆಗಳು ಮತ್ತು ಪರಸ್ಪರ ಹಿತಾಸಕ್ತಿಯ ಜಾಗತಿಕ ಸಮಸ್ಯೆಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳುತ್ತಾರೆ. ವರ್ಚುವಲ್ ಸಭೆಯು ದ್ವಿಪಕ್ಷೀಯ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸುವ ಗುರಿಯೊಂದಿಗೆ ತಮ್ಮ ನಿಯಮಿತ ಮತ್ತು ಉನ್ನತ ಮಟ್ಟದ ಕಾರ್ಯತತ್ವವನ್ನು ಮುಂದುವರಿಸಲು ಎರಡೂ ಕಡೆಯವರಿಗೆ ಅನುವು ಮಾಡಿಕೊಡುತ್ತದೆ ಎಂದು ವಿದೇಶಾಂಗ ಇಲಾಖೆ ಮಾಹಿತಿ ನೀಡಿದೆ.

ಆಂಧ್ರಪ್ರದೇಶ ಸಚಿವ ಸಂಪುಟ ಪುನಾರಚನೆ

ಇಂದು ಪ್ರಮಾಣವಚನ ಸಾಧ್ಯತೆ

ಹೈದರಾಬಾದ್, ಏ. 10– ತನ್ನ ಸಚಿವ ಸಂಪುಟವನ್ನು ಮಧ್ಯಾವಧಿಯಲ್ಲಿ ಪುನಾರಚನೆ ಮಾಡುವುದಾಗಿ ಜೂನ್ 2019ರಲ್ಲಿ ನೀಡಿದ ಭರವಸೆಯಂತೆ ಆಂಧ್ರಪ್ರದೇಶದ ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಭಾನುವಾರ ಸಂಪುಟ ಪುನರಚಿಸಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ.

ಮುಖ್ಯಮಂತ್ರಿ ಜಗನ್ ಮೋಹನ್ ರೆಡ್ಡಿ ಹೊಸ ಸಚಿವ ಸಂಪುಟದಲ್ಲಿ ಹಿರಿಯ ಮತ್ತು ಅನುಭವಿ ನಾಯಕರ ಜೊತೆಗೆ ಸಮತೋಲಿತ ಆಡಳಿತಕ್ಕಾಗಿ ಯುವ ಮುಖಗಳಿಗೂ ಅವಕಾಶ ನೀಡಲಾಗಿದೆ. ಹಿರಿಯ ಸಚಿವರು ತಮ್ಮ ಪರಿಣತಿ ಮತ್ತು ಅನುಭವವನ್ನು ಮೇಲೆ ತಂದರೆ, ಯುವ ನಾಯಕರು ತಮ್ಮ ನವೀನ ಆಲೋಚನೆಗಳು ಮತ್ತು ಯೋಜನೆಗಳನ್ನು ಕಾರ್ಯರೂಪಕ್ಕೆ ಇಳಿಸಲಿದ್ದಾರೆ. ಈ ಮೂಲಕ ಜನ–ಆಧಾರಿತ ಆಡಳಿತವನ್ನು ಜಗನ್ ಸರ್ಕಾರ ಕೇಂದ್ರೀಕರಿಸುತ್ತಿದೆ

ಆಂಧ್ರಪ್ರದೇಶ ಸಿಎಂ ಜಗನ್ ಮೋಹನ್ ರೆಡ್ಡಿ ಅವರ ಹೊಸ ಕ್ಯಾಬಿನೆಟ್‌ನಲ್ಲಿರುವ 25 ಸಚಿವರಲ್ಲಿ ಕನಿಷ್ಠ 17 ಮಂದಿಯನ್ನು 2024ರ ಚುನಾವಣೆಗೆ ಮುಂಚಿತವಾಗಿ ಜಾತಿ ಮತ್ತು ಪ್ರಾದೇಶಿಕ ಸಮತೋಲನವನ್ನು ಖಚಿತಪಡಿಸಿಕೊಳ್ಳಲು ಸಂಪುಟದಲ್ಲಿ ಸೇರಿಸಲಾಗಿದೆ ಎನ್ನಲಾಗುತ್ತಿದೆ. ಈ 17 ಸಚಿವರನ್ನು ಎಸ್‌ಸಿ, ಎಸ್‌ಟಿ, ಬಿಸಿ ಮತ್ತು ಅಲ್ಪಸಂಖ್ಯಾತ ಸಮುದಾಯದಿಂದ ಆಯ್ಕೆ ಮಾಡಲಾಗಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

2019 ರಲ್ಲಿ, ಜಗನ್ ಮೊದಲ ಬಾರಿಗೆ ತಮ್ಮ ಸಂಪುಟವನ್ನು ರಚಿಸಿದಾಗ, ಅವರ 25 ಸಚಿವರಲ್ಲಿ 56 ಪ್ರತಿಶತದಷ್ಟು ಸಚಿವರು ಪರಿಶಿಷ್ಟ ಜಾತಿ ಮತ್ತು ಪಂಗಡಗಳು, ಇತರ ಹಿಂದುಳಿದ ವರ್ಗಗಳು ಮತ್ತು ಅಲ್ಪ ಸಂಖ್ಯಾತ ವಲಯದಿಂದ ಬಂದಿದ್ದರು. ಈ ಬಾರಿ ಅವರ ಪ್ರಾತಿನಿಧ್ಯವನ್ನು ಶೇ.68ಕ್ಕೆ ಹೆಚ್ಚಿಸಲಾಗಿದೆ.

ಆಂಧ್ರಪ್ರದೇಶದ 25 ಸಂಪುಟ ಸಚಿವರ ಸಂಭಾವ್ಯ ಪಟ್ಟಿ ಇಲ್ಲಿದೆ: ಧರ್ಮಣ ಪ್ರಸಾದ ರಾವ್, ಸಿದಿರಿ ಅಪ್ಪಲರಾಜು, ಬೊತ್ಸಾ ಸತ್ಯನಾರಾಯಣ, ಪಿ.ರಾಜಣ್ಣ ದೊರ, ಗುಡಿವಾಡ ಅಮರನಾಥ್, ಬುಡ್ಡಿ ಮುತ್ಯಾಲ ನಾಯ್ಡು ದಾಡಿಶೆಟ್ಟಿ ರಾಜಾ, ಪಿನಿಪೆ ವಿಶ್ವರೂಪಂ ಮತ್ತು ಚೆಲುಬೋಯಿನ ವೇಣುಗೋಪಾಲಕೃಷ್ಣ.

ತಾನೇಟಿ ವನಿತಾ, ಕರುಮುರಿ ನಾಗೇಶ್ವರರಾವ್, ಕಿಟ್ಟು ಸತ್ಯನಾರಾಯಣ, ಜೋಗಿ ರಮೇಶ್, ಅಂಬಟಿ ರಾಂಬಾಬು, ಮೆರಗ ನಾಗಾರ್ಜುನ, ವಿಡದಾಳ ರಜಿನಿ, ಕಾಕಣಿ ಗೋವರ್ಧನ ರೆಡ್ಡಿ, ಅಮ್ಜದ್ ಬಾಷಾ, ಬುಗ್ಗನ ರಾಜೇಂದ್ರನಾಥ್, ಗುಮ್ಮನೂರು ಜಯರಾಂ, ಪೆದ್ದಿರೆಡ್ಡಿ ರಾಮಚಂದ್ರರೆಡ್ಡಿ, ನಾರಾಯಣ ಸ್ವಾಮಿ, ರೋಜಾ ಕೆ.ಸೆಲ್ವಮಣಿ, ಸುರೇಶ್ ಎ. ಜಗನ್ ಸಚಿವ ಸಂಪುಟದ ನೂತನ ಸಚಿವರು ಎಂದು ತಿಳಿದು ಬಂದಿದೆ.



ನಾಡೋಜ ಪ್ರಶಸ್ತಿ ಪುರಸ್ಕೃತರಾದ ಡಾಕ್ಟರ್ ಭಾಷ್ಯಂ ಸ್ವಾಮೀಜಿ ವಿಕ್ರಾಂತ್ ಪಿ.ದೇವೇಗೌಡ, ಕುಮಾರ್, ಜಯರಾಮು, ಬೋರಪ್ಪ, ಭೈರವ ಗ್ರೂಪ್ಸ್ ಮಹದೇವ್, ಚೇತನ್, ಒಂಟಿಕೊಪ್ಪಲ್ ಗುರುರಾಜ್ ಮತ್ತಿತರರು ಅಭಿನಂದಿಸಿ, ಆಶೀರ್ವಾದ ಪಡೆದರು. ಸ್ವಾಮೀಜಿ ಸಹೋದರ ಶೇಷಾದ್ರಿ ಅವರು ಉಪಸ್ಥಿತರಿದ್ದರು.



ಮೈಸೂರಿನಲ್ಲಿ ಇತ್ತೀಚೆಗೆ ನೆರವೇರಿದ ಕರ್ನಾಟಕ ಪ್ರಕಾಶಕರ ದ್ವಿತೀಯ ಸಮ್ಮೇಳನದ ಅಧ್ಯಕ್ಷರಾಗಿದ್ದ ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆಯ ಟಿ.ಎಸ್.ಛಾಯಾಪತಿ ಅವರನ್ನು ಸಾಹಿತಿಗಳು ಹಾಗೂ ಪ್ರಕಾಶಕರ ಪರವಾಗಿ ಭಾನುವಾರ ಸನ್ಮಾನಿಸಲಾಯಿತು.

ಮಧ್ಯದಲ್ಲೇ ತಂಡ ತೊರೆದ ಆರ್‌ಸಿಬಿಯ ಹರ್ಷಲ್ ಪಟೇಲ್!



ಬೆಂಗಳೂರು, ಏ. 10– ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಮತ್ತೊಂದು ಶಾಕ್ ಎದುರಾಗಿದೆ. ತಂಡದ ಬೌಲಿಂಗ್ ಟ್ರಂಪ್ ಕಾರ್ಡ್ ಆಗಿದ್ದ ಬೌಲರ್ ಹರ್ಷಲ್ ಪಟೇಲ್ ತಂಡವನ್ನು ತೊರೆದಿದ್ದಾರೆ. ಹರ್ಷಲ್ ಪಟೇಲ್ ಅವರ ಸಹೋದರಿ ನಿಧನರಾಗಿದ್ದು ಇದರಿಂದಾಗಿ ಅವರು ಐಪಿಎಲ್ ಬಯೋಬಬಲ್ ಅನ್ನು ತೊರೆದು ತಮ್ಮ ಮನೆಗೆ ಮರಳಿದ್ದಾರೆ. ಮುಂಬೈ ಇಂಡಿಯನ್ಸ್ ವಿರುದ್ಧದ ಪಂದ್ಯದ ನಂತರ ಕುಟುಂಬದಲ್ಲಿ ಸಂಭವಿಸಿದ ದುರಂತದ ಬಗ್ಗೆ ತಿಳಿದುಕೊಂಡ ಹರ್ಷಲ್ ಐಪಿಎಲ್ ಬಯೋಬಬಲ್‌ನಿಂದ ಹೊರನಡೆಯಬೇಕಾಯಿತು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಆದಿ ಕರ್ನಾಟಕ (SC)
PUC, Degree, BE, MBBS, Master Degree ವಿವಾಹ ನೋಂದಣಿಗೆ ಕರೆ ಮಾಡಿ
9164743059

ಮನೆ ಬಾಡಿಗೆಗೆ ಇದೆ
1BHK and 2 BHK ಕೆ.ಜಿ.ಕೊಪ್ಪಲ್ New Kantharaj Urs Road, Mysore.
9739737378
7829922772

HOME APPLIANCES SERVICE
ಫ್ರಿಡ್ಜ್, ವಾಷಿಂಗ್ ಮೆಷೀನ್, ಮೈಕ್ರೋ ವೋವೆನ್, LED, LCD, AC Sales & Service
Contact: Srinivas
9379699229

ಶ್ರೀ ಗೌರಿಶಂಕರ ಟ್ರಾವೆಲ್ಸ್
8–5–22 (6 ದಿನ) ಗುರುವಾಯೂರು, ಮುನ್ನಾರ್, ತ್ರಿವೇಂಡಂ, ಆಲಪ್ಪಿ, ಕೊಚ್ಚಿನ್ ಇತ್ಯಾದಿ.
15–5–22 (1 ದಿನ) ಕೋಟಿಲಿಂಗ, ಘಾಟಿಸುಬ್ರಮಣ್ಯ, ಚಿಕ್ಕ ತಿರುಪತಿ ಇತ್ಯಾದಿ.
17–6–22 (15 ದಿನ) ಹರಿದ್ವಾರ, ಯಮುನೋತ್ರಿ, ಗಂಗೋತ್ರಿ, ಕೇದಾರ್‌ನಾಥ್, ಬದರಿನಾಥ್, ಉತ್ತರಕಾಶಿ, ದೆಹಲಿ ಇತ್ಯಾದಿ.
12–8–22 (8ದಿನ) ಕಾಶಿ, ಪ್ರಯಾಗ್‌ರಾಜ್, ಅಯೋಧ್ಯ, ಗಯ, ಬುದ್ಧಗಯಾ ಇತ್ಯಾದಿ, (ವಿಮಾನ, ರೈಲು ಮತ್ತು ಎ.ಸಿ.ಬಸ್ಸಿನಲ್ಲಿ) ಊಟ, ವಸತಿ ಸೇರಿರುತ್ತದೆ.
9620002114

ಬೇಕಾಗಿದ್ದಾರೆ
ನುರಿತ ಮಹಿಳಾ ಮತ್ತು ಪುರುಷ ಆಯುರ್ವೇದ ಪಂಚಕರ್ಮ ಥೆರಪಿಸ್ಟ್ ಬೇಕಾಗಿದ್ದಾರೆ. ವಸತಿ ಸೌಲಭ್ಯವಿದೆ.
Mob: 9686264040

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

ತಕ್ಷಣ ಬೇಕಾಗಿದ್ದಾರೆ
ಮಾಲ್ ಆಫ್ ಮೈಸೂರು ಹಾಗೂ ಫೋರಂ ಮಾಲ್ ಮೈಸೂರಿನಲ್ಲಿರುವ ಜಾಕಿ ಶೋರೂಂನಲ್ಲಿ ಕೆಲಸ ಮಾಡಲು ಯುವತಿಯರು ಬೇಕಾಗಿದ್ದಾರೆ. ಉತ್ತಮ ವೇತನ ಸೌಲಭ್ಯವಿರುತ್ತದೆ. ವಿದ್ಯಾರ್ಹತೆ PUC ಮೇಲ್ಪಟ್ಟು, ವಯಸ್ಸಿನ ಮಿತಿ: 18 ರಿಂದ 28, ಆಸಕ್ತರು ಸಂಪರ್ಕಿಸಿ.
8431588337 / 7338306565

ಷೇರ್ ಮಾರ್ಕೆಟ್ ಟ್ರೇಡಿಂಗ್
ಮನೆಯಲ್ಲೇ ಕುಳಿತು ಟ್ರೇಡಿಂಗ್ ಮಾಡುವ ಮೂಲಕ ದಿನಕ್ಕೆ 1500–2000 ಸಂಪಾದಿಸಿ self ಟ್ರೇಡಿಂಗ್ ಮಾಡುವುದನ್ನು ಹೇಳಿಕೊಡುತ್ತೇವೆ.
(Trading Tips Available)
Do Not Depend on one source of income
9945667806

ಬಟ್ಟಲು ಸಾಂಬ್ರಾಣಿ ಉದ್ಯೋಗ
ಉತ್ತಮ ಗುಣಮಟ್ಟದ ಬಟ್ಟಲು ಸಾಂಬ್ರಾಣಿಯನ್ನು ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 1000 ರೂ. ವರೆಗೆ ಗಳಿಸಿ. ತರಬೇತಿಗಾಗಿ:
7406375196
9880548596

WANTED TEACHERS
Jnanajyothi Vidyalaya Beerihundi (H.P.S) English Medium
H.M. English-2, Academic Coordinator, Science, Mathematics -2, N.S.T. Hindi-1
9845390377
8197057626

HOUSE FOR SALE
33x40 MUDA
(1320 Sqft) New 3BHK Duplex, N/F Door at Vijayanagar 4th Stage (RMP Layout) 1.40 Cr
100 mtrs from Ring Road
Owner: 6361295132

HOUSE FOR RENT
KRS Road, Gokulam 2nd Floor
9900237315
9845963421

S.M.GOLD
ಗಿರವಿ ಚಿನ್ನಾಭರಣ ಖರೀದಿ
1 ಗ್ರಾಂ ಚಿನ್ನಕ್ಕೆ 5150
ನೀವು ಗಿರವಿಯಿಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವು ಬಿಡಿಸಿ ನಿಮ್ಮ ಚಿನ್ನದ ಪ್ಯೂರಿಟಿಯ ಗುಣಮಟ್ಟಕ್ಕೆ ಅನುಗುಣವಾಗಿ ತೆಗೆದುಕೊಂಡು ಉಳಿದ ಹಣವನ್ನು ಕೊಡುತ್ತೇವೆ. (T&C) ಕೂಡಲೇ ಸಂಪರ್ಕಿಸಿ :
8050518881

ಹೊಸ ಮನೆ ಮಾರಾಟಕ್ಕಿದೆ (MUDA ಮನೆ)
#5422 ವಿಜಯನಗರ 2ನೇ ಹಂತ, ಮೈಸೂರು. G/F, F/F
ಸೈಟು ಮಾರಾಟಕ್ಕಿದೆ
#168819 ದೇವನೂರು 2ನೇ ಹಂತ
9844444395

ನಿರುದ್ಯೋಗಿಗಳಿಗೊಂದು ಸುವರ್ಣಾವಕಾಶ
ಮನೆಯಲ್ಲೇ ಕುಳಿತು ಟಾರ್ಗೆಟ್ ಇಲ್ಲದೆ ಬರವಣಿಗೆ ಮೂಲಕ 9 ರಿಂದ 30 ಸಾವಿರದವರೆಗೆ ಹಣಗಳಿಸುವ ಸುವರ್ಣಾವಕಾಶ. ಆಸಕ್ತರು ಸಂಪರ್ಕಿಸಿ:
7676844160
6361056646

AIR COOLER EXCHANGE OFFER
UPTO RS. 4000 OFF
Service Center for Air Cooler
SYMPHONY, KENSTAR
Contact: 9845963421 / 9900237315

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಸೇವಾ ಮನೋಭಾವವುಳ್ಳ ಯುವಕ / ಯುವತಿಯರು ಮಹಿಳೆಯರು ವಿಧವೆ / ವಿಚ್ಛೇದಿತೆಯರು ಹೋಂ ಕೇರ್ ಕೆಲಸಕ್ಕೆ ಬೇಕಾಗಿದ್ದಾರೆ. (ಯಾವುದೇ ರೀತಿಯ ಶುಲ್ಕ ಇರುವುದಿಲ್ಲ) ಆಧಾರ್ ಕಾರ್ಡ್ ಕಡ್ಡಾಯ ಕೂಡಲೇ ಸಂಪರ್ಕಿಸಿ ಸಂಬಳ: 10,000 ರಿಂದ 15,000 ರವರೆಗೆ
9035324777 / 7259306665
9035081222

ಸೈಟು ಮಾರಾಟಕ್ಕಿದೆ
* 20x30 North. Rs. 26 Lakhs ರೂಪನಗರ
* 33x40 -East & South Corner Rs.47 Lakhs ನ್ಯಾಯಾಂಗ ಬಡಾವಣೆ
* ಮನೆ ಭೋಗ್ಯಕ್ಕಿದೆ 3BHK 8 Lakhs ದಾಸನಕೊಪ್ಪಲು, ಮೈಸೂರು
9845765573



SUNZONE SOLAR SYSTEM
VM Double Road, Kuvempunagar, Mysuru
9845175443

ತಕ್ಷಣ ಬೇಕಾಗಿದ್ದಾರೆ
PART TIME /FULL TIME / HOME-BASED
E-CODE GAS SAFE

EDUCATION ವಿದ್ಯಾರ್ಹತೆ	WORK TIME ಕೆಲಸದ ಸಮಯ	SALARY ಸಂಬಳ
SSLC,PUC ,Dip,Degree	4 HOURS	6000/-
SSLC,PUC ,Dip,Degree	8 HOURS	16000/-

ಗ್ಯಾಸ್ ಸೇಫ್ ಬಗ್ಗೆ ಮನೆಯಲ್ಲಿ ಕುಳಿತು ಗ್ರಾಹಕರಿಗೆ ಮಾಹಿತಿ ನೀಡುವ ಕೆಲಸ Android ಸ್ಮಾರ್ಟ್ ಫೋನ್ ಹೊಂದಿರಬೇಕು
9986621226

MUDA APPROVED SITE FOR SALE
20X30, 30X40 & 30X50
@ 3999/Sft. Onwards,
B/w Police Layout & Lalithadri Nagar Layout. within ring road.
READY WITH ALL BASIC AMENITIES & BANK LOAN AVAILABLE.
98800 65122 / 77956 09173

ಬೇಕಾಗಿದ್ದಾರೆ
ಆಫೀಸ್ ಕ್ಲೀನಿಂಗ್ ಕೆಲಸಕ್ಕೆ ಹುಡುಗಿಯರು ಬೇಕಾಗಿದ್ದಾರೆ
10-6 pm ಸಂಬಳ 8000/-
Ph.9380142144
ಶಿವರಾಂಪೇಟೆ, ಮೈಸೂರು

HOME LOAN
11B, 9/11A ಕಾರ್ಪೋರೇಷನ್ & ಮುಡಾ ಖಾತಾಗಳಿಗೆ ಸಾಲ ಸೌಲಭ್ಯ ಕೊಡಿಸಲಾಗುವುದು. ಮನೆ ಖರೀದಿ, ಸೈಟ್ ಖರೀದಿ, ಮನೆ ಕನ್ಸ್ಟ್ರಕ್ಷನ್, ಮಾರ್ಟ್‌ಗೇಜ್, ಫ್ಲಾಟ್ ಖರೀದಿ
HOUSING LOAN FOR PENSIONERS
ಶ್ರೀ ಸಾಯಿ ಎಂಟರ್‌ಪ್ರೈಸಸ್ ಮೈಸೂರು
8884176836

SITE FOR SALE
20x30 - 12 Lakhs
30x40 - 24 Lakhs
Bank Loan upto 75%, Ready for Registration near, Ramabainagar, Gurur Bus Stop, Mysore, DTCP approved,
1.5 kms from J P Nagar Ring Road
8660105902

ರೂಂ, ಜಮೀನು ಬಾಡಿಗೆಗೆ
ಕುವೆಂಪುನಗರ RMP ಎದುರು ರೂಂಗಳು ಮತ್ತು 1 1/4 ಎಕರೆ ಬೋಗಾದಿ ರಸ್ತೆಯಲ್ಲಿ ವರ್ಷ ಬಾಡಿಗೆ 9000/–, ದಿನೇಶ್ ಗುರೂಜಿ ನಕ್ಷತ್ರನಾಡಿ ಸಂಖ್ಯಾ ಶಾಸ್ತ್ರ ತರಬೇತಿ ಪಡೆದಿರುವವರು ಸಂಪರ್ಕಿಸಿ.
8197609290

ಸೈಟುಗಳು ಮಾರಾಟಕ್ಕಿವೆ
MUDA Approved
Bank Loan Available
ಶ್ರೀನಗರ ಪಕ್ಕ ಮತ್ತು ಶ್ರೀರಾಂಪುರ ರಿಂಗ್ ರೋಡ್
8050345574

ನಿರ್ಮಲ ಸರ್ವೀಸ್
ಸಂಪು
ಕ್ಲೀನಿಂಗ್‌ಗಾಗಿ ಸಂಪರ್ಕಿಸಿ:
6364079244

SDJ JEWELERS
ಪುರುಷರು ಮತ್ತು ಮಹಿಳೆಯರು Tele Callers ಮತ್ತು Sales Executive ಬೇಕಾಗಿದ್ದಾರೆ.
Qualification: SSLC/ PUC/ Degree/ Post Graduation
ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ
Salary : 20,000
8884304444

IMKTA - PRE-SCHOOL TEACHER TRAINING
Diploma Courses for SSLC, PU or any Degree Candidates.
Regular / Saturday / Correspondence Courses with practical training. www: imkta.in
ALPHA INTERNATIONAL SCHOOL
@ Srirampura & Gokulam
Call: 7829937469, 9901803394
ONLINE TRAINING AVAILABLE

Site For Sale
Kadakola, Indiranagar 3rd Stage, K Ramaswamy Layout, Behind Kadakola Railway Station, approx. 3-4 km distance to Airport. South facing 30'x40'- 2 sites. Kadakola Gram panchayat approved.
Contact: 7259508419.

AFFIDAVIT
I Santhosh Kumar S/o Late A.Musthafa, born on Feb 3rd 1966, residing at #3223, 21 C Main, Vijayanagar 2nd Stage, Mysuru-570017. I have obtained passport bearing No.V8333504 as Hamsa Mohamed Musthafa. Through this Affidavit, I swear that the name Hamsa Mohamed Musthafa or Santhosh Kumar is me only. Sworn in before Notary C. Mangala. Date: 8.4.2022.

ತಕ್ಷಣ ಬೇಕಾಗಿದ್ದಾರೆ
ಮೈಸೂರು ನಗರದ ಅರಸುರೋಡ್‌ನಲ್ಲಿರುವ ಹೆಸರಾಂತ ಬಟ್ಟೆ ಅಂಗಡಿಯಲ್ಲಿ 18 ರಿಂದ 30 ವಯಸ್ಸಿನ (SSLC ಪಾಸಾಗಿದ್ದು ದೃಢಕಾಯರಾಗಿ) ಹುಡುಗಿಯರು ಕೆಲಸ ಮಾಡಲು ಬೇಕಾಗಿದ್ದಾರೆ ಮತ್ತು ಮೈಸೂರಿನ ಕೂರ್ಗಳ್ಳಿ ಹಾಗೂ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾದಲ್ಲಿ ಹಾಗೂ ಮೈಸೂರು ಸಿಟಿಯ ಹೆಸರಾಂತ ಕಂಪನಿಯಲ್ಲಿ ಕೆಲಸ ಮಾಡಲು ಮತ್ತು ಮದ್ದೂರು ಹತ್ತಿರದಲ್ಲಿರುವ ಕಾಲೇಜೊಂದರಲ್ಲಿ ಸೆಕ್ಯೂರಿಟಿ ಸೂಪರ್‌ವೈಸರ್ ಹಾಗೂ ಗಾರ್ಡ್‌ಗಳು ಬೇಕಾಗಿದ್ದಾರೆ. ಅನುಭವವಿರುವ ಹತ್ತಿರದಲ್ಲಿರುವವರಿಗೆ ಮೊದಲ ಆದ್ಯತೆ.
9035050656 / 9035050653

ತಕ್ಷಣ ಬೇಕಾಗಿದ್ದಾರೆ
ಮೈಸೂರಿನ ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಹೆಸರಾಂತ ಕಾರ್ಖಾನೆಯೊಂದಕ್ಕೆ ತಕ್ಷಣ ಪುರುಷ ಕಾರ್ಮಿಕರು ಬೇಕಾಗಿದ್ದಾರೆ. ವಯೋಮಿತಿ 18 ರಿಂದ 40 ರವರೆಗೆ–ಮೊದಲು ಬಂದವರಿಗೆ ಆದ್ಯತೆ, ವಿದ್ಯಾರ್ಹತೆ:– ಕನಿಷ್ಠ ಓದು/ಬರಹ ಗೊತ್ತಿರಬೇಕು. ವೇತನ: 12,165+ESI&PF ಮತ್ತು ಉಚಿತ ಊಟದ ವ್ಯವಸ್ಥೆ, ಅಗತ್ಯ ದಾಖಲಾತಿಗಳು: ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಬುಕ್, ಫೋಟೋ–06, ಟಿ.ಸಿ. ಅಥವಾ ಮಾರ್ಕ್ಸ್ ಕಾರ್ಡ್ ಕಡ್ಡಾಯ. (ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ)
8453408502 / 9108100117

ಮೈಸೂರು ರಾಪಿಡೋ
ಬೈಕ್ ರೈಡರ್ ಆಗಿ ಸೇರಿ ಹಾಗೂ ದಿನಕ್ಕೆ 1200/– ರೂ. ವರೆಗೂ ಸಂಪಾದಿಸಿರಿ. ಅಗತ್ಯ ದಾಖಲೆಗಳು ಡಿಎಲ್, ವಾಹನದ ದಾಖಲೆಗಳು ಮತ್ತು ಆಧಾರ್. ಹೆಚ್ಚಿನ ಮಾಹಿತಿಗಾಗಿ ಕರೆ ಮಾಡಿ.
040-45209740

ಮಹಿಳೆಯರಿಗೆ
ಬ್ಯುಸಿನೆಸ್ ಪ್ಲಾನ್ ನಿಮ್ಮದು, ಬಂಡವಾಳ ನಮ್ಮದು ಬಂದ ಆದಾಯದಲ್ಲಿ 50=50 ಈ ರೀತಿ ಬ್ಯುಸಿನೆಸ್ ಪ್ಲಾನ್ ಇರುವವರು ಕೂಡಲೇ ಸಂಪರ್ಕಿಸಿ:
Mob: 9901080314

ಬೇಕಾಗಿದ್ದಾರೆ
ವಯಸ್ಸಾದ ವೃದ್ಧರು ರೋಗಿಗಳನ್ನು ಆರೈಕೆ ಮಾಡಲು ನಮ್ಮ ಸಂಸ್ಥೆಯಲ್ಲೇ ಉಳಿದುಕೊಳ್ಳುವಂತಹ ಸೇವಾಮನೋಭಾವವುಳ್ಳ ಯುವಕ / ಯುವತಿಯರು, ಮಹಿಳೆಯರು, ವಿಧವೆ / ವಿಚ್ಛೇದಿತೆಯರು ಹೋಂ ನರ್ಸ್ ಕೆಲಸಕ್ಕಾಗಿ ಬೇಕಾಗಿದ್ದಾರೆ. (ಯಾವುದೇ ರೀತಿಯ ಶುಲ್ಕ ಇರುವುದಿಲ್ಲ) ಸಂಬಳ 12000 ರಿಂದ 16000 ವರೆಗೆ.
7411614209, 9513253739

ಬ್ಯುಸಿನೆಸ್ ಪ್ಲ್ಯಾನ್
ಬ್ಯುಸಿನೆಸ್ ಪ್ಲಾನ್ ನಿಮ್ಮದು ಬಂಡವಾಳ ನಮ್ಮದು ಬಂದ ಆದಾಯದಲ್ಲಿ 50–50 ಈ ರೀತಿ ಬ್ಯುಸಿನೆಸ್ ಪ್ಲಾನ್ ಇರುವವರು ಕೂಡಲೇ ಸಂಪರ್ಕಿಸಿ:
9901080314

SITES FOR SALE
1) 0.28 land Varkodu Bannur Road.
2) 30x40, 12 Lakhs, HD Kote Road.
3) Bogadi Road 40x30, 22 Lks
4) 20x30 house Aravindanagar
5) 30x40 KHB Layout attach HD Kote Road, 18 Lks.
PRAKRUTHI PROPERTIES
90359 90359, 95386 90359

ಬೇಕಾಗಿದ್ದಾರೆ
ಮೈಸೂರಿನ ಒಂಟಿಕೊಪ್ಪಲ್‌ನಲ್ಲಿ ಕಾರ್‌ವೊಂದಕ್ಕೆ ಡ್ರೈವರ್ ಕೆಲಸಕ್ಕೆ ಬೇಕಾಗಿದ್ದಾರೆ. ಸಂಪರ್ಕಿಸಿ:
9886745981

ಬೇಕಾಗಿದ್ದಾರೆ
ಅನುಭವವುಳ್ಳ ಬ್ಯೂಟಿಷಿಯನ್ ಬೇಕಾಗಿದ್ದಾರೆ.
ವಿಜಯನಗರ 4ನೇ ಹಂತ, 2ನೇ ಫೇಸ್, ಮೈಸೂರು. Above ಮಹಾಲಕ್ಷ್ಮೀ ಸ್ವೀಟ್.
Mob: 8792045177

WANTED
for Media TV
Female Telecaller - 6 Nos.
Male Marketing Executive - 8 Nos.
Event Manager - 5 Nos.
Data Entry Operator - 8 Nos.
Mob: 9743283001

ತಕ್ಷಣ ಬೇಕಾಗಿದ್ದಾರೆ
ಫ್ಯಾಕ್ಟರಿಯಲ್ಲಿ ಹೆಲ್ಪರ್ ಕೆಲಸಕ್ಕೆ ಪುರುಷರು ಬೇಕಾಗಿದ್ದಾರೆ. ವಯಸ್ಸು: 18 ರಿಂದ 48. ಸಂಬಳ 13,500/–, ESI, PF ಒಳಗೊಂಡು ವಿದ್ಯಾಭ್ಯಾಸ ಬೇಕಾಗಿಲ್ಲ. 3 ಶಿಫ್ಟ್‌ಗಳು ಇರುತ್ತದೆ. 8 hours duty. ಸ್ಥಳ: ಮೇಟಗಳ್ಳಿ CIPET ಕಾಲೇಜು ಹತ್ತಿರ, ಮೈಸೂರು.
Mob: 9986874584

ಪ್ರಮಾಣ ಪತ್ರ
ಮಂಡ್ಯ ಜಿಲ್ಲೆ ಪಾಂಡವಪುರ ತಾಲ್ಲೂಕು ಕೆನ್ನಾಳು ಗ್ರಾಮದ ಗಿರೀಗೌಡರ ಮಗ ಮೋಹನ್‌ಗೌಡ. ಜಿ. ಆದ ನಾನು ಈ ಮೂಲಕ ತಿಳಿಯಪಡಿಸುವುದೇನೆಂದರೆ ಆಧಾರ್ ಕಾರ್ಡ್ ಇನ್ನಿತರೇ ವ್ಯವಹಾರಗಳಲ್ಲಿ ಮೋಹನ್‌ಗೌಡ.ಜಿ. ಎಂದಿದ್ದು ಶಾಲಾ ದಾಖಲಾತಿ ಗಳಲ್ಲಿ ಮೋಹನ್‌ಕುಮಾರ್. ಜಿ. ಎಂದಿದ್ದು ಈ ಎರಡು ಹೆಸರುಗಳು ನನ್ನದೇ ಆಗಿರುತ್ತದೆ ಎಂದು ನೋಟರಿಯವರ ಮುಂದೆ ಪ್ರಮಾಣೀಕರಿಸಿರುತ್ತೇನೆ.
ಸಹಿ/– ಮೋಹನ್ ಗೌಡ. ಜಿ.

1 ಲಕ್ಷಕ್ಕೆ ಒಂದು ದಿನಕ್ಕೆ 200ರೂ ಸೆಕ್ಯೂರಿಟಿಗೆ ಚಿನ್ನ ಕೊಡಲಾಗುವುದು
ಪ್ರತಿ ದಿನ ಚಿನ್ನಾಭರಣದ ವಹಿವಾಟಿಗೆ 1 ಲಕ್ಷಕ್ಕೆ ಒಂದು ದಿನಕ್ಕೆ 200ರೂ ಸೇರಿಸಿ ಸಂಜೆ ವಾಪಸ್ ಕೊಡಲಾಗುವುದು. ಕೊಟ್ಟಿರುವ ಹಣಕ್ಕೆ ಚಿನ್ನವನ್ನು ಸೆಕ್ಯೂರಿಟಿಯಾಗಿ ನೀಡಲಾಗುವುದು. ಸಂಪರ್ಕಿಸಿ – MNM ಗೋಲ್ಡ್ ರೆನೋ ಕಲರ್ ಲ್ಯಾಬ್ ಪಕ್ಕ, ಅಶೋಕ ರಸ್ತೆ, ಮೈಸೂರು.
7259214732

FLAT FOR SALE
* Aishwarya Layout Near Arvind Nagar.
* 3BHK fully Furnished Solar Itlian Kitchen, Chimini.
* Brand New 1 year old flat 3rd Floor.
9902199179

WANTED FIELD SERVICE Representative
to Kent RO System Ltd
9900237315
9846963421

ಮನೆಯಿಂದಲೇ ಸಂಪಾದಿಸಿ
ಮನೆಯಿಂದಲೇ ಮೊಬೈಲ್, ಕಂಪ್ಯೂಟರ್ ಅಥವಾ ಕೈ ಬರವಣಿಗೆ ಮೂಲಕ ಉದ್ಯೋಗ ಮಾಡಿ 10,000 ರಿಂದ 30,000 ಸಂಪಾದಿಸಿ
7795560970

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ನಿಮ್ಮ ಚಿನ್ನಾಭರಣಕ್ಕೆ 1%ಬಡ್ಡಿ ಹಾಗೂ ಗಿರವಿ ಚಿನ್ನಾಭರಣ ಖರೀದಿ
ಯಾವುದೇ ಬ್ಯಾಂಕ್ ಫೈನಾನ್ಸ್ ಮತ್ತು ಗಿರವಿ ಅಂಗಡಿಯಿಂದ ಆಭರಣ ಬಿಡಿಸಿ, 1% ಬಡ್ಡಿಯಲ್ಲಿ ಹಣ ಸಾಲ ನೀಡಲಾಗುವುದು ಹಾಗೂ ಇಂದಿನ ಬೆಲೆಗೆ ಖರೀದಿಸಲಾಗುವುದು
ಸಂಪರ್ಕಿಸಿ – MNM ಗೋಲ್ಡ್, ರೆನೋ ಸ್ಟುಡಿಯೋ ಪಕ್ಕ, ಅಶೋಕ ರಸ್ತೆ, ಮೈಸೂರು.
7259214732

ಬರವಣಿಗೆ ಕೆಲಸ
ಮನೆಯಿಂದಲೇ ಫಾರಂ ಭರ್ತಿಮಾಡುವ ಉದ್ಯೋಗ ಮಾಡಿ ಪ್ರತಿ 1 ಫಾರಂಗೆ 30 ರೂ.ಗಳನ್ನು ಪಡೆಯಿರಿ
9731891409

ವಿಚ್ಛು ಕಲ್ಯಾಣ ಭಾಗ್ಯ
ಎಲ್ಲಾ ಜಾತಿಯ ವಧು, ವರರಿಗಾಗಿ ಸಂಪರ್ಕಿಸಿ 1) ಮೊದಲನೇ ಮದುವೆ, (2) ಎರಡನೇ ಮದುವೆ, (3) ಲೇಟ್ ಮ್ಯಾರೇಜ್ 4) ವಿಧವೆ, ವಿಧುರರು
ಸಂಪರ್ಕಿಸಿ: ನಂ. 445, 1ನೇ ಕ್ರಾಸ್, ಚಿಕ್ಕಮ್ಮ ಸ್ಕೂಲ್ ರಸ್ತೆ, ಹುಂಡಿ ಬೀದಿ, ಹಿನಕಲ್, ಮೈಸೂರು–570 017
8722935334, 8296856534

ಬೇಕಾಗಿದ್ದಾರೆ
ಹೋಟೆಲ್ ಉದ್ಯಮಕ್ಕೆ ಎಲ್ಲಾ ವಿಧವಾದ ಕೆಲಸಗಳಿಗೆ ಪುರುಷರು / ಮಹಿಳೆಯರು ಅನುಭವವಿರುವ / ಇಲ್ಲದಿರುವವರು ಬೇಕಾಗಿದ್ದಾರೆ. ಆಸಕ್ತರು ವಿವರಗಳೊಂದಿಗೆ ನೇರವಾಗಿ ಸಂಪರ್ಕಿಸಿ.
ಹೋಟೆಲ್ ವಿಷ್ಣುಭವನ್
ಬಿ.ಎನ್.ರಸ್ತೆ, ಭೀಮಾ ಜ್ಯೂಯಲರ್ಸ್ ಕೆಳಗೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಎದುರು, ಬಿ.ಎನ್.ರಸ್ತೆ, ಮೈಸೂರು.

ಸುವರ್ಣ ಯಾತ್ರಾ
26/04/22 ನೇಪಾಳ ಹಾಗೂ ಮುಕ್ತಿನಾಥ ಪ್ರವಾಸ 9 ದಿನಗಳು
08/5/22 ಕಾಶಿ ಹಾಗೂ ಜಾರ್ಖಂಡ್ ಪ್ರವಾಸ 6 ದಿನಗಳು
24/05/22 4 ಜ್ಯೋತಿರ್ಲಿಂಗದೊಂದಿಗೆ ಗುಜರಾತ್ ಹಾಗೂ ಮಧ್ಯಪ್ರದೇಶ ಪ್ರವಾಸ 9 ದಿನಗಳು
8970949434 / 9019462508

ತಕ್ಷಣವೇ ಬೇಕಾಗಿದ್ದಾರೆ
ಹೌಸ್‌ಕೀಪಿಂಗ್ ಸೂಪರ್ ವೈಸರ್ ಸೆಕ್ಯೂರಿಟಿ ಗಾರ್ಡ್, ಹೌಸ್ ಕೀಪಿಂಗ್ ಮಹಿಳೆಯರು ಮತ್ತು ಹುಡುಗರು ವಾರ್ಡ್ ಬಾಯ್ ಕೆಲಸಕ್ಕೆ ಪುರುಷರು, ಮೇಟಗಳ್ಳಿ, ಹಿನಕಲ್, ಅಗ್ರಹಾರ, ರಾಮಕೃಷ್ಣನಗರ ಸುತ್ತಮುತ್ತ ಬೇಕಾಗಿದ್ದಾರೆ. ಆಸ್ಪತ್ರೆ ಕೆಲಸಕ್ಕೆ ಬೇಕಾಗಿದ್ದಾರೆ. (ESI + PF ಉತ್ತಮ ಸಂಬಳ) ಯಾವುದೇ ಶುಲ್ಕ ಇಲ್ಲ.
8884339446 / 8884286321
8884286123

ಮನೆ ಬಾಡಿಗೆಗೆ
2BHK
1 ಮಹಡಿ ಮೇಲೆ
3ನೇ ಹಂತ, ಕುವೆಂಪುನಗರ, ಪ್ರಮತಿ ಶಾಲೆ ಹತ್ತಿರ
9481187171
9945291634

ತಕ್ಷಣ ಸಂಪರ್ಕಿಸಿ
ಮೈಸೂರು, ನಂಜನಗೂಡು, ಹೂಟಗಳ್ಳಿ, ಮೇಟಗಳ್ಳಿ, ಹೆಬ್ಬಾಳ್ ಮುಂತಾದ ಕೈಗಾರಿಕ ಪ್ರದೇಶಗಳಲ್ಲಿರುವ ಕಂಪನಿಗಳಿಗೆ, ಆಫೀಸ್‌ಗಳಿಗೆ ಮತ್ತು ಶೋರೂಂಗಳಿಗೆ 7th, SSLC, PUC, ITI, Diploma, Any Degree Pass/Fail ಆದ ಯುವಕ, ಯುವತಿಯರಿಗೆ Cashier, Billing, Data Entry, Receptionist ಮತ್ತು Quality, Production Dept. Labelling, Packing Helper ಮುಂತಾದ ಕೆಲಸಗಳಿಗೆ ಬೇಕಾಗಿದ್ದಾರೆ. ಸಂಬಳ 14000–38000/– (ESI+PF+OT) ಸೇರಿ
7676939277 / 7892878915

ಬೇಕಾಗಿದ್ದಾರೆ
ಶಾಲೆಯಲ್ಲಿ ಕಸ ಗುಡಿಸಲು ಮತ್ತು ಅಡುಗೆ ಸಹಾಯಕ ಕೆಲಸಗಳಿಗೆ ಆರೋಗ್ಯವಂತ ಮಹಿಳೆ ಒಬ್ಬರು ಬೇಕಾಗಿದ್ದಾರೆ. ಕೆಲಸದ ಸಮಯ ಬೆಳಿಗ್ಗೆ 8 ರಿಂದ ಸಂಜೆ 6, ಸಂಬಳ ತಿಂಗಳಿಗೆ 6000/– ಸಂಪರ್ಕಿಸಿ, ಜ್ಞಾನ ಗಂಗೋತ್ರಿ ಕಾನ್ವೆಂಟ್, ಇಂಗ್ಲೀಷ್ ಮೀಡಿಯಮ್, ರಾಜೇಂದ್ರನಗರ, ಮೈಸೂರು – 570007
9243580672

ಮನೆ /ರೂಂ ಬಾಡಿಗೆಗೆ ಇದೆ
1BHK
ಮನೆ 2ನೇ ಅಂತಸ್ತು, 1 ರೂಮು ನೆಲ ಅಂತಸ್ತು, 3ನೇ ಹಂತ, 7ನೇ ಮೇನ್, ಕಾಂಟೂರು ರಸ್ತೆ, ನಂದಗೋಕುಲಂ
9901074480
9449024024

SITE FOR SALE
KBL Greenwood 30x40 & 30x50 Opp to Saptamathruka Layout
8792207164 / 8050821108

ಮನೆ ಮಾರಾಟಕ್ಕೆ ಇದೆ
29x33 ಅಳತೆಯ ಮನೆ ಕೇರಗಳ್ಳಿ ಬಡಗಲಹುಂಡಿಯಲ್ಲಿ ಮಾರಾಟಕ್ಕೆ ಇದೆ. 28 Lakhs (ಇಪ್ಪತ್ತೆಂಟು ಲಕ್ಷ) ವಿವರಗಳಿಗೆ ಸಂಪರ್ಕಿಸಿ.
8197770133

ಮೈಸೂರು ಮ್ಯಾರೇಜ್ ಲಿಂಕ್ಸ್
ಎಲ್ಲಾ ಜಾತಿಯ ವಧು ವರರು ವಿಧುರರು ವಿಧವೆಯರು, ವಿಚ್ಛೇದಿತರು ನೇರ ಸಂಪರ್ಕಿಸಿ: ಮದುವೆ ವಿಳಂಬವಾದಲ್ಲಿ ಪರಿಹಾರ ಶತಸಿದ್ಧ. ಗುರೂಜಿ:
6361740552

ಬೇಕಾಗಿದ್ದಾರೆ
1) ಫೀಲ್ಡ್ ಸೂಪರ್‌ವೈಸರ್ – ಇಬ್ಬರು (ದ್ವಿಚಕ್ರ ಹೊಂದಿರಬೇಕು)
2) ಸೆಕ್ಯೂರಿಟಿ ಗಾರ್ಡ್‌ಗಳು – ಹತ್ತು ಮಂದಿ ಸ್ಥಳ: 1) ಶೂಟಿಂಗ್ ಮಹದೇವಪುರ 2) ಲಲಿತಾದ್ರಿಪುರ, 3) ಹೂಟಗಳ್ಳಿ, 4) ಜೆ.ಪಿ.ನಗರ, 5) ಹೆಬ್ಬಾಳ್.
3) ಹೌಸ್‌ಕೀಪಿಂಗ್ (ಮಹಿಳೆಯರು ಮಾತ್ರ)
ಸಂಪರ್ಕಿಸಿ: ಸುರಕ್ಷಾವಲ್
9686422400 / 7259526261
9686566261

WALK IN INTERVIEW
SREE BASAVESHWARA SCHOOL
Nursery & HP School
Hura Road, Hullahalli
Walk in Interview for Immediate Appointment
LKG to 8th Standard PUC, D.Ed, B.A, B.Sc & B.Ed
8867961400 / 9141774821

ಮಾರಾಟಕ್ಕಿದೆ FOR SALE
Running ಬೇಕರಿ & Cool Bar, Bannur Main Road.
9449092614

ಸಾಲ ಸಾಲ ಸಾಲ
10 ಲಕ್ಷದಿಂದ 500 ಲಕ್ಷದವರೆಗೆ Business Start ಮಾಡಲು ಹಾಗೂ 2 ವರ್ಷದ ಹಳೆಯ Business ನವರಿಗೂ 30% Subsidiary ಸಾಲ ದೊರೆಯುತ್ತದೆ. ಎಲ್ಲಾ ವರ್ಗದ ಮಹಿಳೆಯರಿಗೆ SC, ST ವರ್ಗದವರಿಗೆ ಮೊದಲ ಆದ್ಯತೆ ಮತ್ತು ಎಲ್ಲಾ Business ಗೂ Top Up Loan ಮತ್ತು Related Documents / Project Report ಮಾಡಿಕೊಡಲಾಗುವುದು. ಸಂಪರ್ಕಿಸಿ:
9686773884 / 9901270092

ಬೇಕಾಗಿದ್ದಾರೆ
ಮ್ಯಾಚಿಂಗ್ ಸೆಂಟರ್‌ನಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು / ಹುಡುಗಿಯರು ಕೆಲಸಕ್ಕೆ ಬೇಕಾಗಿದ್ದಾರೆ.
ಶ್ರೀ ಭಗವಾನ್ ಸಿಲ್ಕ್ಸ್
ಕೆ.ಆರ್.ಸರ್ಕಲ್, ಮೈಸೂರು

ದಾಖಲಾತಿಗಳು ಕಳೆದಿದೆ
ನನ್ನ ಕಕ್ಷಿದಾರರಾದ ಶ್ರೀ ರಾಜೇಶ್.ಬಿ.ಕೆ.ರವರು ಕೆಳಕಂಡ ಮೂಲ ದಾಖಲಾತಿಗಳನ್ನು ಕಳೆದುಕೊಂಡಿರುವುದಾಗಿ ತಿಳಿಸಿದ್ದು, ಅದರಂತೆ ಈ ಪ್ರಕಟಣೆ ಪ್ರಕಾರಪಡಿಸಲಾಗಿದೆ. 1) ಮೂಲ ಕೆಲಸದಾನದ ವಿಭಾಗ ಪತ್ರ ಸಂಖ್ಯೆ 3177/19–20 ದಿ: 10/10/2019, 2) ವಾಹನಗಳ ಆರ್.ಸಿ.ಇನ್ಶೂರೆನ್ಸ್ ದಾಖಲಾತಿಗಳು., ಎ) ಕಾರ್‌ನಂಬರ್ ಕೆ.ಎ–11–ಎನ್ 3300, ಬಿ) ಸ್ಕೂಟರ್ ನಂ.ಕೆ.ಎ–11 ಇ–9001, ಸಿ) ಟಾಟಾ ಗೂಡ್ಸ್ ವಾಹನ ಕೆ ಎ–11–8329, ಈ ಮೇಲ್ಕಂಡ ದಾಖಲಾತಿಗಳು ಯಾರಿಗಾದರೂ ಸಿಕ್ಕಲ್ಲಿ ಕೆಳಕಂಡ ವಿಳಾಸಕ್ಕೆ 7 ದಿವಸಗಳ ಒಳಗೆ ತಲುಪಿಸಲು ಕೋರಲಾಗಿದೆ.
ಸಹಿ/- B.N.Ramachandra, B.A., LL.B, Advocate Roll No.: KAR/318/77, #1134, SBM Building, Ballal Circle, Chamarajapuram, Mysuru-570005

WANTED
1) Marketing Executive / Field Development Officer with Minimum 5 Years Experience - 1 Post.
2) ಶೌಚಾಲಯ ಸ್ವಚ್ಛತಾಗಾರರು (ಪುರುಷರು) –15 Post.
Contact: M/s Karnataka Security Agency, #513, Honna Complex, Opp. Lakshmi Talkies Road, K.R.Mohalla, Mysuru.
0821-4247385 / 9480420666

ಬೇಕಾಗಿದ್ದಾರೆ
ಶ್ರೀ ಯೋಗಿನಾರಾಯಣ ಸಹಕಾರ ಸಂಘ (ನಿ) ಮೈಸೂರು, #136/1, ಶ್ರೀ ನೀಲಕಂಠಸ್ವಾಮಿ ಮಠ ಹೊಂದಿದ್ದರಸ್ತೆ, ಗನ್‌ಹೌಸ್ ಮುಂಭಾಗ ಖಿಲ್ಲೆ ಮೊಹಲ್ಲಾ, ಮೈಸೂರು – 570004, ಇಲ್ಲಿ ಕಾರ್ಯದರ್ಶಿಯವರ ಹುದ್ದೆ ಖಾಲಿಯಾಗುತ್ತಿದ್ದು, ಈ ಹುದ್ದೆಗೆ ಬಿ.ಕಾಂ ಪದವೀಧರರಾಗಿದ್ದು, ಕನ್ನಡ ಇಂಗ್ಲೀಷ್ ಗಣಕಯಂತ್ರ ಕೆಲಸದಲ್ಲಿ ಅನುಭವ ಉಳ್ಳವರಾಗಿದ್ದು, ಆಸಕ್ತಿ ಉಳ್ಳವರು ದಾಖಲೆ ಸಮೇತ ಸದರಿ ಕಛೇರಿಯ ವೇಳೆ ಬೆಳಿಗೆ 10–30 ರಿಂದ ಸಂಜೆ 4–00 ಘಂಟೆಯೊಳಗೆ ಸಂಪರ್ಕಿಸಬಹುದು. –ಕಾರ್ಯದರ್ಶಿ
8861195137

ಪಾರ್ಟ್ /ಫುಲ್ ಟೈಮ್
ಪಾರ್ಟ್ ಟೈಮ್ ಹಾಗೂ ಫುಲ್ ಟೈಮ್ ಕೆಲಸ ಮನೆಯಲ್ಲಿ ಕುಳಿತು ಅಂಕಿಗಳನ್ನು ಬರೆಯುವ ಮುಖಾಂತರ ವಾರಕ್ಕೆ ಗಳಿಸಿ, ವೇತನ: 4000 ರಿಂದ 6000
7353369458
8747823697

ಬೇಕಾಗಿದ್ದಾರೆ
ಮನೆ ಕೆಲಸಕ್ಕೆ ಮಹಿಳೆ ಬೇಕಾಗಿದ್ದಾರೆ. ಮನೆಯಲ್ಲೇ ಉಳಿದು ಕೊಂಡು 2 ಪುಟ್ಟ ಮಕ್ಕಳನ್ನು ನೋಡಿಕೊಂಡು ಅಡುಗೆ, ಮನೆ ಕೆಲಸ ಮಾಡಲು ಬೇಕಾಗಿದ್ದಾರೆ.
9036951272

ಕೆಲಸಕ್ಕೆ ಬೇಕಾಗಿದ್ದಾರೆ
ಕೊಳ್ಳೇಗಾಲ ಮಳವಳ್ಳಿ, ಟಿ.ನರಸೀಪುರದಲ್ಲಿ ಸೇಲ್ಸ್‌ಮ್ಯಾನ್ ಆಗಿ ಕೆಲಸ ಮಾಡಲು ಬೇಕಾಗಿರುತ್ತಾರೆ. ದ್ವಿಚಕ್ರವಾಹನ ಕಡ್ಡಾಯ ಆಕರ್ಷಕ ಸಂಬಳದೊಂದಿಗೆ ಇತರೆ Incentive ಇರುತ್ತದೆ.
8095445584 / 9110234943

WANTED TEACHERS
Walk in Interview on Wednesday 13th April, Time : 10am to 1 pm.
* B.Ed & D.Ed Teachers
* Experience and Freshers are welcome
Address: St.Paul's Higher Primary School, S.K.Nagar, Yearaganahalli, Bannur Road, Mysore
9620592221 / 9845410038

ಶಿಕ್ಷಕಿಯರು ಬೇಕಾಗಿದ್ದಾರೆ
(TCH or D.Ed)
ಡಿ.ಇಡಿ or ಟಿ.ಸಿ.ಎಚ್.ತರಬೇತಿ ಹೊಂದಿರುವವರು ಏಕದಂತ ಕಿರಿಯ ಪ್ರಾಥಮಿಕ ಶಾಲೆ (ಇಂಗ್ಲೀಷ್ ಮೀಡಿಯಂ) ಕಳಸ್ತವಾಡಿ ಸಿದ್ದಲಿಂಗಪುರ (ಪೋಸ್ಟ್) ಮೈಸೂರು (ತಾ) & (ಜಿ), ಮೈಸೂರು & ಬೆಂಗಳೂರು ಮುಖ್ಯರಸ್ತೆ.
9916778412 / 9880348677

ಕಳೆದಿದೆ
ಲೀಲಾಮಣಿ ಕೋಂ ಎಸ್.ರವಿ, ನಂ.673/ಎ, SRS ಬಡಾವಣೆ ಹೂಟಗಳ್ಳಿ ಮೈಸೂರು ಇವರಿಗೆ ಸೇರಿದ ಸರ್ವೆ ನಂ. 40/4 ರಲ್ಲಿ ವಿಂಗಡಿಸಿ ಮಾಡಿರುವ ನಿವೇಶನ ವಿಸ್ತೀರ್ಣ 9x38 ರ ಡಾಕ್ಯುಮೆಂಟ್ ನಂ.32/2008 ರ ಮೂಲ ಕ್ರಯಪತ್ರ ಕಳೆದಿದೆ. ಯಾರಿಗಾದರೂ ಸಿಕ್ಕರೆ ಸಂಪರ್ಕಿಸಿ.
9902739177

ಟೈಲರ್‌ಗಳು ಬೇಕಾಗಿದ್ದಾರೆ
ಬನ್ನಿಮಂಟಪದಲ್ಲಿರುವ ಕಾರ್ಖಾನೆಗೆ ಟೈಲರ್‌ಗಳು ಬೇಕಾಗಿದ್ದಾರೆ. ವೇತನ: 10 ರಿಂದ 15 ಸಾವಿರ
9342118153

ಕೇರಳ ಶ್ರೀ ಪ್ರಸಿದ್ಧ ಮಹಾ ಮಾಂತ್ರಿಕ ಜ್ಯೋತಿಷ್ಯರು, ನಂ.1 ಮೋಡಿ ತಜ್ಞರು
ಪಂಡಿತ್ ಕೆ.ಎಸ್.ಕೃಷ್ಣಮೂರ್ತಿ
ಮೊ.: 9741806990
ತಾಯಿ ಚಾಮುಂಡೇಶ್ವರಿ ಕಾಣತೋರೆ ನಾಲ್ವರ ದೈವ ಚೌಡಿನ್ ಕರಿ ಭಗವತಿ ಮಹಾ ಮಾಂತ್ರಿಕ ಶಕ್ತಿಯಿಂದ ಲೈಂಗಿಕ, ದಾಂಪತ್ಯ, ಸ್ತ್ರೀ ಪುರುಷ ಪ್ರೇಮ ವಿಚಾರ, ಕೋರ್ಟ್ ಕಚೇರಿ, ಹಣಕಾಸಿನ ತೊಂದರೆ, ವಿವಾದ, ಮನೆಯಲ್ಲಿ ಅಶಾಂತಿ, ಮಾನಸಿಕ ಚಿಂತೆ, ಇನ್ನೂ ಮುಂತಾದ ಸಮಸ್ಯೆಗಳಿಗೆ 3 ದಿನದಲ್ಲಿ ಪರಿಹಾರ ಶತಸಿದ್ಧ. ಖಾಯಂ ವಿಳಾಸ: ಸುಬ್ಬರ್ ಬಸ್‌ಸ್ಟ್ಯಾಂಡ್ ಪಕ್ಕ, ಇರ್ವಿನ್ ರೋಡ್, ಅಂದ್ರ ಶೈಲಿ ನಂದಿನಿ ಹೋಟೆಲ್ ಹಿಂಭಾಗ, ಮಾರುತಿ ಸುಜುಕಿ ಆಟೋ ಮೊಬೈಲ್ ಪಕ್ಕ ಮನೆಯಲ್ಲಿ ನೆಲೆಸಿದ್ದಾರೆ. ಹಳ್ಳೇರಿ, ಮೈಸೂರು ಇಲ್ಲಿ ಹೇಳುವ ವಿಚಾರಗಳನ್ನು ಗುಪ್ತವಾಗಿ ಇಡಲಾಗುತ್ತದೆ.

ಕೇರಳ ಶ್ರೀ ಭಗವತಿ ಜ್ಯೋತಿಷ್ಯರು
ಪಂ|| ಎಸ್.ಮಣಿಕಂಠನ್
ಮೊ: 9480743991
ಮಹಾಮಾಂತ್ರಿಕ ಅಘೋರಿ ದೈವ ದೇವರ ಬಲಿಷ್ಠ ಪೂಜಾ ಶಕ್ತಿಗಳಿಂದ ನಿಮ್ಮ ಎಲ್ಲಾ ಸಮಸ್ಯೆಗಳಿಗೆ 3 ದಿನಗಳಲ್ಲಿ ಶಾಶ್ವತ ಪರಿಹಾರ ವಿದ್ಯೆ, ಉದ್ಯೋಗ, ಸಂತಾನ, ಪ್ರೀತಿ, ಪ್ರೇಮ, ಮದುವೆ, ಕೋರ್ಟ್, ಕೇಸು, ದಾಂಪತ್ಯ, ಗಂಡ ಹೆಂಡತಿ ಕಿರಿಕಿರಿ ಇಲ್ಲಿ ಹೇಳುವಂತ ವಿಚಾರಗಳನ್ನು ಗುಪ್ತವಾಗಿ ಇಡಲಾಗುವುದು. ಖಾಯಂ ವಿಳಾಸ: ಅಶೋಕ ರೋಡ್, ಈಸ್ಟ್ ಕ್ರಾಸ್ 36, ಶುಭಂ ಜ್ಯುವೆಲರಿ ಎದುರು ಕನ್ನಿಕ ಪರಮೇಶ್ವರಿ ದೇವಸ್ಥಾನದ ಹತ್ತಿರ, ಮೈಸೂರು.

ಕೊಳ್ಳೇಗಾಲದ ಜ್ಯೋತಿಷ್ಯರು
ಮೋಡಿ ಮಾಂತ್ರಿಕರು ಪಂ.ಎಸ್.ಕುಮಾರಸ್ವಾಮಿ
ಮೊ.: 9880583804
ಸ್ತ್ರೀ ಪುರುಷ ಪ್ರೇಮ, ಸಂತಾನ, ದಾಂಪತ್ಯ ಸಮಸ್ಯೆ (Divorce) ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಶತ್ರುಭಾದೆ, ದುಷ್ಟಶಕ್ತಿ, ಅಷ್ಟಪಟ್ಟವರು ನಿಮ್ಮಂತಾಗಲು, ಕೊಳ್ಳೇಗಾಲ ಮೋಡಿ ಮಾಂತ್ರಿಕ ಶಕ್ತಿಯಿಂದ ನಿಮ್ಮ ಯಾವುದೇ ಸಮಸ್ಯೆಗಳಿಗೆ ಎರಡೇ ದಿನದಲ್ಲಿ ಶಾಶ್ವತ ಪರಿಹಾರ ಶತಸಿದ್ಧ ನಂಬಿ ಬನ್ನಿ. ಖಾಯಂ ವಿಳಾಸ: (Reliance Smart) ಹತ್ತಿರ, ATM ಪಕ್ಕ, ಟಿಕೆಟ್ ಬುಕ್ಕಿಂಗ್ ಕೌಂಟರ್ ಹತ್ತಿರ, (KSRTC) ಸುಬರ್ಬ್ ಬಸ್ ಸ್ಟ್ಯಾಂಡ್, ಮೈಸೂರು

ಮಂಡ್ಯ ಕಚೇರಿ : ನಂ. 1204/1, ಮಹಿಳಾ ಸಮಾಜ ರಸ್ತೆ, 3ನೇ ಕ್ರಾಸ್, ಅಶೋಕನಗರ, ಮಂಡ್ಯ-571404 ದೂ: 222026 (ಕ) ಫ್ಯಾಕ್ಸ್: 08232-222026, ಮೊ: 8762960325. E-Mail : mandya@mysurumithra.com

ಯಾರಿಗೆ ಒಲಿಯಲಿದೆ ಮಂಡ್ಯ ಜಿಲ್ಲೆಯ ಕಾಂಗ್ರೆಸ್ ಸಾರಥ್ಯ?

ಎಂ.ಕೆ.ಮೋಹನ್‌ರಾಜ್

ಮಂಡ್ಯ,ಏ.10- ಕಳೆದ ಆರು ವರ್ಷಗಳಿಂದ ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸುತ್ತಿದ್ದ ಪಕ್ಷದ ಹಿರಿಯ ಮುಖಂಡ ಸಿ.ಡಿ.ಗಂಗಾಧರ್‌ಗೆ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಬಡ್ತಿ ಸಿಕ್ಕಿದ್ದು, ಅವರಿಂದ ತೆರವಾಗುವ ಜಿಲ್ಲಾಧ್ಯಕ್ಷ ಸ್ಥಾನ ಯಾರಿಗೆ ಎಂಬ ಕುತೂಹಲ ಜಿಲ್ಲಾ ಕಾಂಗ್ರೆಸ್‌ನಲ್ಲಿ ಮೂಡಿದೆ.

ಚುನಾವಣೆಗೆ ಕೆಲವೇ ತಿಂಗಳು ಬಾಕಿ ಇರುವಾಗ ಜಿಲ್ಲಾ ಕಾಂಗ್ರೆಸ್ ಸಾರಥ್ಯದ ನೊಗ ಹೊರಲು ಜಿಲ್ಲೆಯ ಹಲವು ಕಾಂಗ್ರೆಸ್ಸಿಗರು ರೇಸ್‌ನಲ್ಲಿದ್ದರೆ, ಸಂಘಟನೆಯಲ್ಲಿ ಮುಂಚೂಣಿಯಲ್ಲಿರುವ ವ್ಯಕ್ತಿಗೆ ಪಟ್ಟ ಕಟ್ಟಬೇಕೆಂದು ಕೆಪಿಸಿಸಿ ಕಸರತ್ತು ಆರಂಭಿಸಿದೆ.

ದಿವಂಗತ ಅಂಬರೀಷ್ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದ ಸಂದರ್ಭದಲ್ಲಿ ತಮ್ಮ ಆಪ್ತರೇ ಆಗಿದ್ದ ಸಿ.ಡಿ.ಗಂಗಾಧರ್ ಅವರನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಅಂದಿನ ಕೆಪಿಸಿಸಿ ಅಧ್ಯಕ್ಷ ಡಾ.ಜಿ.ಪರಮೇಶ್ವರ್ ಅವರಿಗೆ ಒತ್ತಡ ತಂದಿದ್ದರು. ಅಂಬರೀಷ್ ಒತ್ತಾಯದ ಹಿನ್ನೆಲೆಯಲ್ಲಿ ಜಿಲ್ಲಾಧ್ಯಕ್ಷರಾಗಿದ್ದ ಮಾಜಿ ಸಚಿವ ಎಂ.ಎಸ್. ಆತ್ಮಾನಂದ ಅವರನ್ನು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿ ಅವರ ಸ್ಥಾನಕ್ಕೆ ಗಂಗಾಧರ್ ಅವರನ್ನು ನೇಮಿಸಲಾಗಿತ್ತು.

ನಂತರ ಸುಮಾರು 6 ವರ್ಷಗಳ ಬಳಿಕ ಸಿ.ಡಿ.ಗಂಗಾಧರ್ ಅವರನ್ನು ರಾಜ್ಯ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಕ ಮಾಡಲಾಗಿದ್ದು, ಇದೀಗ ಜಿಲ್ಲಾಧ್ಯಕ್ಷ ಸ್ಥಾನಕ್ಕೆ ಯಾರನ್ನು ಆಯ್ಕೆ ಮಾಡಬೇಕೆಂಬುದು ಜಿಲ್ಲಾ ಕಾಂಗ್ರೆಸ್ ನಾಯಕರು ಹಾಗೂ ರಾಜ್ಯ ಕಾಂಗ್ರೆಸ್ ನಾಯಕರಿಗೆ ಗೊಂದಲ ಶುರುವಾಗಿದೆ.

ಏಕೆಂದರೆ ರಾಜ್ಯದಲ್ಲಿ ಸಾರ್ವತ್ರಿಕ ವಿಧಾನ ಸಭೆ ಚುನಾವಣೆಗೆ ಕೆಲವೇ ಕೆಲವು ತಿಂಗಳುಗಳು ಬಾಕಿ ಇದೆ. ಈ ಹಂತದಲ್ಲಿ ಒಳ್ಳೆಯ ಸಂಘಟನಾಚತುರ ಹಾಗೂ ವರ್ಚಸ್ಸಿರುವ ನಾಯಕನನ್ನು ಜಿಲ್ಲಾ ಕಾಂಗ್ರೆಸ್ಸಿಗೆ ನೇಮಿಸಬೇಕಾದ ಅನಿವಾರ್ಯತೆ ಕಾಂಗ್ರೆಸ್ಸಿಗರಿಗಿದೆ ಹಾಲಿ ಅಧ್ಯಕ್ಷ ಸಿ.ಡಿ.ಗಂಗಾಧರ್ ಸಾರಥ್ಯದಲ್ಲಿ ಕಾಂಗ್ರೆಸ್ ಹೇಳಿಕೊಳ್ಳುವ ಸಾಧನೆ ಮಾಡದಿರುವುದರಿಂದ ಕೆಲ ತಿಂಗಳು ತಡವಾದರೂ ಸಂಘಟನಾತ್ಮಕ ವ್ಯಕ್ತಿಗೆ ಪಟ್ಟಕಟ್ಟಲು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ನಿರ್ಧರಿಸಿದ್ದಾರೆ. ಇದನ್ನು ಸ್ವತಃ ಡಿಕೆಶಿ ಮಂಡ್ಯಗೆ ಬಂದಾಗ ಹಲವು ಬಾರಿ ಹೇಳಿದ್ದರು.

ಅಧ್ಯಕ್ಷರ ಆಯ್ಕೆ ಡಿಕೆಶಿ, ಚಲುವರಾಯ ಸ್ವಾಮಿ ಅಂಗಳದಲ್ಲಿ: ಮಂಡ್ಯ ಜಿಲ್ಲೆ ಒಕ್ಕಲಿಗ ಮತದಾರರು ನಿರ್ಣಾಯಕವಾಗಿರುವ ಜಿಲ್ಲೆ. ಅದರಲ್ಲೂ ಜೆಡಿಎಸ್‌ನ ಭದ್ರಕೋಟೆ. ಮುಂದಿನ ಚುನಾವಣೆಯಲ್ಲಿ ಇಲ್ಲಿ ಹೆಚ್ಚಿನ ಸೀಟು ಗೆಲ್ಲಬೇಕೆಂಬುದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಗುರಿ. ಡಿಕೆಶಿಗೆ ಮಂಡ್ಯ ಜಿಲ್ಲೆ ಅವರು ಪ್ರತಿನಿಧಿಸುವ ಕ್ಷೇತ್ರದ ಪಕ್ಕದ ಜಿಲ್ಲೆಯಾಗಿರುವುದರಿಂದ ಮಂಡ್ಯ ಜಿಲ್ಲೆಯನ್ನು ಪ್ರತಿಷ್ಠೆಗೆ ತೆಗೆದುಕೊಂಡಿದ್ದು, ಜಿಲ್ಲೆಯಲ್ಲಿ ಸಣ್ಣಮಟ್ಟ ಪದಾಧಿಕಾರಿಗಳ ನೇಮಕ ಅಥವಾ ಇನ್ನಿತರ ಅಧಿಕಾರ ಹಂಚಿಕೆ



ರಮೇಶ್ ಬಾಬು ದಿನೇಶ್ ಗೂಳಿಗೌಡ ಗಣಿಗ ರವಿಕುಮಾರ್ ಎಂ.ಎಸ್. ಚಿದಂಬರ್ ಸಿ.ಡಿ.ಗಂಗಾಧರ್ ಸುರೇಶ್ ಕಿಕ್ಕೇರಿ

ಬಂದಾಗ ಸ್ವತಃ ಡಿಕೆಶಿ ಅವರೇ ಮಧ್ಯ ಪ್ರವೇಶಿಸುತ್ತಾರೆ. ಈ ಹಿನ್ನೆಲೆಯಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರ ಆಯ್ಕೆ ವಿಚಾರದಲ್ಲಿ ಶಿವಕುಮಾರ್ ಆಯ್ಕೆಯೇ ಅಂತಿಮ. ಆದರೂ ಜಿಲ್ಲಾ ನಾಯಕತ್ವವನ್ನು ಮಾಜಿ ಸಚಿವ ಎನ್.ಚಲುವರಾಯಸ್ವಾಮಿ ವಹಿಸಿರುವುದರಿಂದ ಅವರ ಸಲಹೆ ಪಡೆದೇ ಅಧ್ಯಕ್ಷರನ್ನು ಆಯ್ಕೆ ಮಾಡಬಹುದು ಎಂಬ ಮಾತುಗಳು ಕೇಳಿ ಬರುತ್ತಿದೆ.

ರೇಸ್‌ನಲ್ಲಿರುವ ಮುಖಂಡರು: 2018ರ ವಿಧಾನಸಭಾ ಚುನಾವಣೆ ಮುಗಿದ ದಿನದಿಂದಲೂ ಜಿಲ್ಲಾಧ್ಯಕ್ಷರ ಬದಲಾವಣೆ ಕೇಳಿ ಬರುತ್ತಿತ್ತು ಮುಂಚೂಣಿಗೆ ಬರುತ್ತಿದ್ದ ಹೆಸರು. ಜಿಲ್ಲಾ ಯುವ ಕಾಂಗ್ರೆಸ್ ಮಾಜಿ ಅಧ್ಯಕ್ಷ ಹಾಗೂ ಡಿ.ಕೆ.ಶಿವಕುಮಾರ್ ಆಪ್ತ ಎಂ.ಎಸ್. ಚಿದಂಬರ್. ಸದ್ಯ ಈಗಲೂ ಸಹ ಅವರ ಹೆಸರೇ ಪ್ರಬಲವಾಗಿ ಕೇಳಿ ಬರುತ್ತಿದೆ ಯಾದರೂ ಚಿದಂಬರ್ ಆಯ್ಕೆಗೆ ಚಲುವ ರಾಯಸ್ವಾಮಿ ಅಂಡ್ ಟೀಂನ ವಿರೋಧವಿದೆ ಎಂದು ಹೇಳಲಾಗಿದೆ. ಮೂಲ ಕಾಂಗ್ರೆಸ್ಸಿಗರಾದ ಚಿದಂಬರ್ ತಮ್ಮ ಮಾತುಗಳಿಗೆ ಸೊಪ್ಪು ಹಾಕುವುದಿಲ್ಲ ಎಂಬ ಮಾತು ಚಲುವರಾಯ ಸ್ವಾಮಿ ಬೆಂಬಲಿಗರಲ್ಲಿದ್ದು, ಈ ನಿಟ್ಟಿನಲ್ಲಿ ಕೆಲವರು ಅವರನ್ನು ವಿರೋಧಿಸಬಹುದು.

ಬ್ಲಾಕ್ ಕಾಂಗ್ರೆಸ್ ಮಾಜಿ ಅಧ್ಯಕ್ಷ ಕಿಕ್ಕೇರಿ ಸುರೇಶ್, ಮುಖಂಡರುಗಳಾದ ಸಿದ್ದಾರೂಢ ಸತೀಶ್‌ಗೌಡ, ಸಿ.ಎಂ.ದ್ಯಾವಪ್ಪ ಸುರೇಶ್ ಕಂಠಿ ಸೇರಿದಂತೆ ಅನೇಕರು ರೇಸ್‌ನಲ್ಲಿದ್ದು, ಚುನಾವಣೆ ವರ್ಷವಾಗಿರುವುದರಿಂದ ಸಂಘಟನೆ ಹಾಗೂ ವರ್ಚಸ್ಸಿನಲ್ಲಿ ಮುಂಚೂಣಿಯಲ್ಲಿರುವ ಮುಖಂಡರಿಗೆ ಮಣೆಹಾಕ ಬೇಕೆಂಬುದು ರಾಜ್ಯ ಕಾಂಗ್ರೆಸ್ಸಿಗರ ವಾದವಾಗಿದೆ.

ರಮೇಶ್ ಬಂಡಿಸಿದ್ದೇಗೌಡ, ಗೂಳಿಗೌಡ, ಗಣಿಗ ಪರ ಒಲವು: ಮಾಜಿ ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಜಿಲ್ಲೆಯ ನಾಯಕತ್ವ ವಹಿಸಿದ ದಿನದಿಂದಲೂ ಹಿರಿಯರಿಗೆ, ಅನುಭವಿಗಳಿಗೆ ಜಿಲ್ಲಾ ಕಾಂಗ್ರೆಸ್‌ನ ನೊಗವನ್ನು ನೀಡುತ್ತಾ ಬಂದಿರುವುದರಿಂದ ಈ ಬಾರಿಯೂ ಸಹ ಹಿರಿಯರು, ಸಂಘಟನಾತ್ಮಕವಾಗಿ ವರ್ಚಸ್ಸಿರುವವರಿಗೆ ಮಣೆ ಹಾಕುವ ಸಾಧ್ಯತೆ ಇದೆ ಎನ್ನಲಾಗಿದೆ. ಎಸ್.ಎಂ. ಕೃಷ್ಣ ಕಾಲದಿಂದ ಗಮನಿಸಿದರೆ ಮಾಜಿ ಸಚಿವ ಎಂ.ಎಸ್.ಆತ್ಮಾನಂದ, ಮಾಜಿ ಶಾಸಕರಾದ ಕೆ.ಬಿ.ಚಂದ್ರಶೇಖರ್, ಎಲ್.ಆರ್.ಶಿವರಾಮೇಗೌಡರಂತಹ ಅನುಭವಿಗಳಿಗೆ ಮಣೆ ಹಾಕಲಾಗಿದ್ದು, ಈಗಲೂ ಸಹ ಅನುಭವಿಗಳಿಗೆ ಮಣೆ ಹಾಕುವ ಸಾಧ್ಯತೆ ಇದೆ.

ಅನುಭವದ ಲೆಕ್ಕಾಚಾರಕ್ಕೆ ಬಂದರೆ ಮಾಜಿ ಸಚಿವ ಎಂ.ಎಸ್.ಆತ್ಮಾನಂದ ಹಾಗೂ ಮಾಜಿ ಶಾಸಕ ಕೆ.ಬಿ.ಚಂದ್ರಶೇಖರ್ ಈ ಹಿಂದೆಯೇ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿದ್ದರಿಂದ ಅವರು ಮತ್ತೆ ಆ ಹುದ್ದೆ ಪಡೆಯಲು ಆಸಕ್ತಿ ಹೊಂದಿಲ್ಲ. ಈ ನಿಟ್ಟಿನಲ್ಲಿ ಕಾಂಗ್ರೆಸ್ಸಿಗರು ಮಾಜಿ ಶಾಸಕ ಎ.ಬಿ. ರಮೇಶ್‌ಬಾಬು ಬಂಡಿಸಿದ್ದೇಗೌಡ, ವಿಧಾನ ಪರಿಷತ್ ಸದಸ್ಯ ದಿನೇಶ್‌ಗೂಳಿಗೌಡ ಅಥವಾ ಕಾಂಗ್ರೆಸ್ ಮುಖಂಡ ಗಣಿಗ ರವಿಕುಮಾರ್ ಪರ ಒಲವು ಹೊಂದಿದ್ದಾರೆ.


ಮೊನ್ನೆ ಬಿಡುಗಡೆಯಾಗಿರುವ ಕೆಪಿಸಿಸಿ ಪದಾಧಿಕಾರಿಗಳ ಪಟ್ಟಿಯಲ್ಲಿ ಮಾಜಿ ಸಚಿವರಾದ ಎನ್.ಚಲುವರಾಯಸ್ವಾಮಿ, ಪಿ.ಎಂ.ನರೇಂದ್ರಸ್ವಾಮಿಗೆ ಕೆಪಿಸಿಸಿ ಉಪಾಧ್ಯಕ್ಷ ಪಟ್ಟ ಒಲಿದಿದ್ದರೆ, ಹಾಲಿ ಜಿಲ್ಲಾಧ್ಯಕ್ಷ ಸಿ.ಡಿ.ಗಂಗಾಧರ್ ಹಾಗೂ ಸಿದ್ದರಾಮಯ್ಯ ಆಪ್ತ ದಡದಪುರ ಶಿವಣ್ಣಗೆ ಪ್ರಧಾನ ಕಾರ್ಯದರ್ಶಿ ಪಟ್ಟ ಒಲಿದಿದೆ. ಇವರನ್ನು ಹೊರತು ಪಡಿಸಿದರೆ ಅನುಭವಿಗಳೆಂದರೆ ಮಾಜಿ ಶಾಸಕ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ. ಚಲುವರಾಯಸ್ವಾಮಿ ಜೊತೆಯಲ್ಲೇ ಜೆಡಿಎಸ್‌ಗೆ ಬಂದ ರಮೇಶ್ ಬಾಬು ಪರ ಡಿ.ಕೆ.ಶಿವಕುಮಾರ್ ಹಾಗೂ ಚಲುವರಾಯಸ್ವಾಮಿ ಒಲವು ಹೊಂದಿದ್ದಾರೆ. ಸಂಘಟನಾತ್ಮಕವಾಗಿ ಮುಂಚೂಣಿಯಲ್ಲಿರುವ ಬಂಡಿಸಿದ್ದೇಗೌಡಗೆ ಪಟ್ಟಕಟ್ಟಿದರೆ ಚುನಾವಣೆ ವರ್ಷದಲ್ಲಿ ಕಾಂಗ್ರೆಸ್ ಸಂಘಟನೆ ದೃಷ್ಟಿಯಿಂದ ಬಲ ಬರಲಿದೆ ಎಂಬುದು ನಾಯಕರ ಲೆಕ್ಕಾಚಾರ.

ರಮೇಶ್‌ಬಾಬು ಜೊತೆಗೆ ಮಂಡ್ಯ ವಿಧಾನ ಸಭಾಕ್ಷೇತ್ರದಕಾಂಗ್ರೆಸ್ ಮುಖಂಡ ಗಣಿಗ ರವಿ ಕುಮಾರ್ ಹೆಸರು ಸಹ ಮುಂಚೂಣಿಯಲ್ಲಿದೆ. ಚುನಾವಣೆಯಲ್ಲಿ ಸೋತರು ಸಹ ಕ್ಷೇತ್ರದಲ್ಲಿ ಸಕ್ರೀಯವಾಗಿದ್ದು, ಕೇಂದ್ರ ಸ್ಥಾನದಲ್ಲಿರುವುದರಿಂದ ಗಣಿಗ ರವಿಕುಮಾರ್ ಮೇಲೂ ಸಹ ನಾಯಕರಿಗೆ ಒಲವಿದ್ದು, ಇವರಿಬ್ಬರ ಜೊತೆಗೆ ಇತ್ತೀಚೆಗೆ ಎಂಎಲ್‌ಸಿ ಚುನಾವಣೆಯಲ್ಲಿ ಆಯ್ಕೆಯಾಗಿರುವ ದಿನೇಶ್ ಗೂಳಿಗೌಡರನ್ನು ಆಯ್ಕೆ ಮಾಡಿದರೆ ಹೇಗೆ ಎಂಬ ಲೆಕ್ಕಾಚಾರ ಸಹ ನಾಯಕರ ಮನಸ್ಸಿನಲ್ಲಿದೆ. ಆದರೆ ಆಯ್ಕೆ ಮಾಡಿದರೆ ಚುನಾವಣೆದೃಷ್ಟಿಯಿಂದ ಪಕ್ಷಕ್ಕೆ ಲಾಭವಾಗುವ ವ್ಯಕ್ತಿಗೆ ಮಣೆ ಹಾಕಲು ಕೆಪಿಸಿಸಿ ನಿರ್ಧರಿಸಿದೆ.

ಒಂದು ಕಾಲದಲ್ಲಿ ಮಂಡ್ಯ ಜಿಲ್ಲೆ ಕಾಂಗ್ರೆಸ್‌ನ ಭದ್ರಕೋಟೆಯಾಗಿತ್ತು. ಆದರೆ ಕ್ರಮೇಣ ಅದು ಜೆಡಿಎಸ್ ಪರ ವಾಲಿತು. ಸಿ.ಡಿ.ಗಂಗಾಧರ್ ಅಧ್ಯಕ್ಷರಾದ ಮೇಲೆ ಕಾಂಗ್ರೆಸ್ ಪರಿಸ್ಥಿತಿ ಶೋಚನೀಯವಾಯಿತು. 2018ರ ವಿಧಾನ ಸಭಾ ಚುನಾವಣೆಯಲ್ಲಿ ಏಳಕ್ಕೆ ಏಳು ಕ್ಷೇತ್ರದಲ್ಲಿ ಕಾಂಗ್ರೆಸ್ ಸೋಲುವ ಮೂಲಕ ದಯನೀಯ ಪರಿಸ್ಥಿತಿಗೆ ತಲುಪಿತು. ಸ್ಥಳೀಯ ಸಂಸ್ಥೆ ಹಾಗೂ ಇನ್ನಿತರ ಚುನಾವಣೆಯಲ್ಲಿ ಕಾಂಗ್ರೆಸ್ ಸೋತು ಸುಣ್ಣವಾಗಿತ್ತು. ಆದರೆ ಪರಿಷತ್ ಚುನಾವಣೆಯ ಗೆಲುವು ಜಿಲ್ಲೆಯಲ್ಲಿ ಕಾಂಗ್ರೆಸ್ ಉಸಿರಾಡುವಂತೆ ಮಾಡಿತು. 'ಈ ನಿಟ್ಟಿನಲ್ಲಿ ಸಾಲು ಸಾಲು ಚುನಾವಣೆ ಇರುವುದರಿಂದ ಜಿಲ್ಲಾಧ್ಯಕ್ಷರ ಆಯ್ಕೆಗೆ ನಾಯಕರು ಭಾರೀ ಕಸರತ್ತು ಮಾಡುತ್ತಿದ್ದಾರೆ ಎನ್ನಲಾಗಿದೆ.

ಯೋಜನೆಗಳನ್ನು ಮನವರಿಕೆ ಮಾಡಿಕೊಟ್ಟು ಮತ ಕೇಳುವ ಹಕ್ಕು ಬಿಜೆಪಿಗಿದೆ

ಮಂಡ್ಯ,ಏ.10(ಮೋಹನ್‌ರಾಜ್)-



ಹಲವು ಯೋಜನೆಗಳನ್ನು ಇಟ್ಟುಕೊಂಡು ಮತದಾರರಿಗೆ ಸಮರ್ಪಕವಾಗಿ ಮನವರಿಕೆ ಮಾಡಿಕೊಟ್ಟು ಮತವನ್ನು ಕೇಳುವ ಹಕ್ಕು ಭಾರತೀಯ ಜನತಾ ಪಕ್ಷಕ್ಕಿದೆ ಎಂದು ದಕ್ಷಿಣ ಪದವೀಧರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಮೈ.ವಿ. ರವಿಶಂಕರ್ ತಿಳಿಸಿದರು.

ತಾಲೂಕಿನ ಬಿಳಿದೇಗಲು ಗ್ರಾಮದಲ್ಲಿ ನಡೆದ ಪ್ರಚಾರ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಮಂಡ್ಯ ತಾಲೂಕಿನಲ್ಲಿ ಮೂರು ವಿಭಾಗಗಳನ್ನು ಮಾಡಿದ್ದು, ಇವರಲ್ಲಿ ಕಸಬಾ, ಕೆರಗೋಡು, ಬಸರಾಳು ವ್ಯಾಪ್ತಿಯಲ್ಲಿ 3600 ಮಂದಿ ಮತದಾರರಿದ್ದಾರೆ. ಇದರಲ್ಲಿ ಗೃಹಿಣಿಯರು, ಉದ್ಯೋಗಸ್ಥರು, ಸ್ವ ಉದ್ಯೋಗ, ವ್ಯಾಪಾರ, ಸಾಫ್ಟ್‌ವೇರ್ ಇಂಜಿನಿಯರ್‌ಗಳು ಎಲ್ಲರೂ ಸೇರಿದ್ದಾರೆ. ಪ್ರತೀ 25 ಮತದಾರರಿಗೆ ಒಬ್ಬ ಘಟಕ ನಾಯಕನನ್ನು ನೇಮಕ ಮಾಡಿ ಆ 25 ಮತಗಳ ಬಗ್ಗೆ ನಿಗಾ ವಹಿಸಿದಲ್ಲಿ ಬಿಜೆಪಿ ಗೆಲುವು ನಿಶ್ಚಿತ ಎಂದರು.

25 ಮಂದಿ ಮತದಾರರನ್ನು ಭೇಟಿ ಮಾಡಿ ಮನವೊಲಿಸುವುದು ಕಷ್ಟದ ಕೆಲಸವಲ್ಲ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆ ಗಳನ್ನು ವಿವರಿಸುವುದು, ಗೃಹಿಣಿಯಾಗಿದ್ದರೆ ಅವರಿಗೆ ಅಡುಗೆ ಅನಿಲ ಇತ್ಯಾದಿ ಸೌಲಭ್ಯಗಳ ಬಗ್ಗೆ ಮನವರಿಕೆ ಮಾಡಿಕೊಡುವುದು, ಸರ್ಕಾರಿ ನೌಕರರಾದರೆ ರಾಜ್ಯ ಸರ್ಕಾರ ಕೇಂದ್ರದ ನೌಕರರ ಸರಿಸಮಾನವಾಗಿ ವೇತನ ಸೌಲಭ್ಯ ನೀಡಲು ಆಯೋಗ ರಚನೆ ಮಾಡಲಾಗಿದೆ. ನಿರುದ್ಯೋಗಿಗಳಿಗೆ ಮುದ್ರಾ ಯೋಜನೆಯಲ್ಲಿ ಸಾಲ ಸೌಲಭ್ಯ, ಕೌಶಲ್ಯಾಭಿವೃದ್ಧಿ ಯೋಜನೆ, ಉದ್ಯಮಿಗಳಾದರೆ ಎಂಎಸ್‌ಎಂಇ ಯೋಜನೆಯಲ್ಲಿ ಸೌಲಭ್ಯ ಸೇರಿದಂತೆ ಹಲವಾರು ಯೋಜನೆಗಳ ಬಗ್ಗೆ ಮಾಹಿತಿ ನೀಡಿ ಮತ ಕೇಳಬಹುದು ಎಂದು ವಿವರಿಸಿದರು.

ವಿಶ್ವದಲ್ಲಿ ದೊಡ್ಡ ಯುದ್ಧ ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಉಕ್ರೇನ್ ಮತ್ತು ರಷ್ಯಾ ಎರಡೂ ದೇಶಗಳಿಗೆ ಮಧ್ಯಸ್ಥಿಕೆ ವಹಿಸುವಂತೆ ಪ್ರಧಾನಿ ನರೇಂದ್ರ ಮೋದಿಯವರಲ್ಲಿ ಕೇಳುತ್ತಿದ್ದಾರೆ ಎಂದರೆ ವಿಶ್ವ ಮಟ್ಟದಲ್ಲಿ ನಮ್ಮ ದೇಶ ಯಾವ ಸ್ಥಾನದಲ್ಲಿದೆ ಎಂಬುದನ್ನು ಮತದಾರರಿಗೆ ಮನವರಿಕೆ ಮಾಡಿಕೊಡಬೇಕು ಎಂದು ಸಲಹೆ ನೀಡಿದರು.

ಕಾಂಗ್ರೆಸ್ಸಿಗರು ಕೆಲಸಕ್ಕೆ ಬಾರದ ಹಿಜಾಬ್ ಇಟ್ಟುಕೊಂಡು ನಮ್ಮ ಸಂಸ್ಕೃತಿಯನ್ನು ಹಾಳು ಮಾಡುತ್ತಿದ್ದಾರೆ. ಇದನ್ನು ನಿಮ್ಮ ಭಾಷೆಯಲ್ಲಿ ನಿಮ್ಮೂರಿನ ಮುಖಂಡರು, ಮತದಾರರಿಗೆ ತಿಳಿಸಿ, ಕರಪತ್ರವನ್ನು ಕೊಟ್ಟು ನೀವೇ ಜವಾಬ್ದಾರಿ ತೆಗೆದುಕೊಂಡು ಪ್ರತಿಯೊಬ್ಬ ಮತದಾರರನ್ನು ಭೇಟಿ ಮಾಡಿ ಮಾತನಾಡಿಸಿದರೆ ಬಿಜೆಪಿ ಗೆಲುವು ಕಷ್ಟಸಾಧ್ಯವಲ್ಲ. ಒಟ್ಟಾರೆ ನಮ್ಮ ಕಾರ್ಯಕರ್ತರು ಮನಸ್ಸು ಮಾಡಿದರೆ ಏನೆಲ್ಲಾ ಸಾಧಿಸಬಹುದು ಎಂಬುದನ್ನು ಈ ಚುನಾವಣೆಯಲ್ಲಿ ತೋರಿಸಬೇಕು ಎಂದು ಕಿವಿಮಾತು ಹೇಳಿದರು.

ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಡಾ.ಸಿದ್ದರಾಮಯ್ಯ, ಬಿಜೆಪಿ ಮಾಜಿ ಜಿಲ್ಲಾಧ್ಯಕ್ಷ ಎಚ್.ಪಿ.ಮಹೇಶ್, ಮುಖಂಡರಾದ ಸದಾನಂದ, ಶಿವಕುಮಾರ್ ಆರಾಧ್ಯ, ಸುಜಾತ ರಮೇಶ್, ವರದರಾಜು ಇತರರು ಇದ್ದರು.

ಕಲ್ಲು ಗಣಿಗಾರಿಕೆ ಸ್ಥಗಿತಕ್ಕೆ ಆಗ್ರಹಿಸಿ ಮುಂದುವರಿದ ಪ್ರತಿಭಟನೆ

ಪ್ರತಿಭಟನಾಕಾರರ ಸಮಸ್ಯೆ ಆಲಿಸಿದ ಶಾಸಕ ಸಿ.ಎಸ್.ಪುಟ್ಟರಾಜು



ಪಾಂಡವಪುರ,ಏ.10- ತಾಲೂಕಿನ ಕನಗನಮರಡಿ ಗ್ರಾಮದಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯನ್ನು ಸ್ಥಗಿತಗೊಳಿಸುವಂತೆ ಆಗ್ರಹಿಸಿ ಗ್ರಾಮಸ್ಥರು ನಡೆಸುತ್ತಿರುವ ಅಹೋರಾತ್ರಿ ಪ್ರತಿಭಟನಾ ಸ್ಥಳಕ್ಕೆ ಶಾಸಕ ಸಿ.ಎಸ್.ಪುಟ್ಟರಾಜು ತೆರಳಿ ಗ್ರಾಮಸ್ಥರ ಸಮಸ್ಯೆ ಆಲಿಸಿ ಮನವಿ ಸ್ವೀಕರಿಸಿದರು.

ಅಹೋರಾತ್ರಿ ಪ್ರತಿಭಟನೆ ಭಾನುವಾರಕ್ಕೆ 6ನೇ ದಿನಕ್ಕೆ ಕಾಲಿಟ್ಟಿತ್ತು. ಈ ಹಿನ್ನೆಲೆಯಲ್ಲಿ ಸ್ಥಳಕ್ಕೆ ಭೇಟಿಕೊಟ್ಟ ಶಾಸಕ ಪುಟ್ಟರಾಜು ಪ್ರತಿಭಟನಾಕಾರರೊಂದಿಗೆ ಚರ್ಚಿಸಿದರು.

ಇಲ್ಲಿನ ಕಲ್ಲು ಗಣಿಗಾರಿಕೆಯಿಂದ ವಿಸಿ ನಾಲೆಯ ಅಕ್ವಟೆಡ್, ಹುಲಿಕೆರೆ ಸುರಂಗ ಸೇರಿದಂತೆ ಮನೆಗಳು, ದೇವಸ್ಥಾನಗಳು ಬಿರುಕು ಬಿಡುತ್ತಿವೆ. ಧೂಳಿನಿಂದ ಕೃಷಿ ಸೇರಿದಂತೆ ಜನಜಾನುವಾರುಗಳಿಗೆ ಸಾಕಷ್ಟು ತೊಂದರೆ ಉಂಟಾಗುತ್ತಿದೆ. ಹಾಗಾಗಿ ಗಣಿಗಾರಿಕೆಯನ್ನು ಸ್ಥಗಿತಗೊಳಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಶಾಸಕ ಸಿ.ಎಸ್. ಪುಟ್ಟರಾಜು, ನಾನು ಈ ಹಿಂದೆಯೇ ಇಲ್ಲಿನ ಗಣಿಗಾರಿಕೆಯಿಂದ ವಿಸಿ ನಾಲೆ ಅಕ್ವಟೆಡ್‌ಗೆ ಹಾಗೂ ಹುಲಿಕೆರೆ ಸುರಂಗಕ್ಕೆ ಅಪಾಯ ಎದುರಾಗಲಿದ್ದು, ಇದನ್ನು ಸ್ಥಗಿತಗೊಳಿಸಬೇಕು ಎಂದು ಆಗ್ರಹಿಸಿದ್ದೆ. ಆದರೆ, ಬೆಂಗಳೂರು-ಮೈಸೂರು ಹೆದ್ದಾರಿ ರಸ್ತೆ ಕಾಮಗಾರಿಗೆ ಕಲ್ಲಿನ ಕಚ್ಚಾವಸ್ತು ಬೇಕೆಂದು ದಿಲೀಪ್ ಬಿಲ್ಡರ್ಸ್ ಕಂಪನಿಗೆ ಆಗಿನ ಜಿಲ್ಲಾಧಿಕಾರಿ ಅವಕಾಶ ಮಾಡಿಕೊಟ್ಟಿದ್ದರು. ಆಗ ಗ್ರಾಮಸ್ಥರು ಸಹ ಸುಮ್ಮನಾಗಿದ್ದಿರಿ. ಇದೀಗ ಮತ್ತೆ ಗ್ರಾಮಸ್ಥರೇ ಗಣಿಗಾರಿಕೆ ವಿರುದ್ಧ ಅಹೋರಾತ್ರಿ ಪ್ರತಿಭಟನೆ ನಡೆಸುತ್ತಿದ್ದೀರಿ. ಇಲ್ಲಿನ ಕಲ್ಲುಗಣಿಗಾರಿಕೆಯಿಂದ ಎದುರಾಗುತ್ತಿರುವ ಸಮಸ್ಯೆ ನನ್ನ ಗಮನಕ್ಕೂ ಬಂದಿದೆ. ಈ ಸಂಬಂಧ ಮೇಲಾಧಿಕಾರಿಗಳೊಂದಿಗೆ ಚರ್ಚಿಸುತ್ತೇನೆ ಎಂದು ಗಣಿಗಾರಿಕೆ ಸ್ಥಗಿತಗೊಳಿಸುವಂತೆ ಸರಕಾರದೊಂದಿಗೂ ಮಾತನಾಡುತ್ತೇನೆ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮೈಷುಗರ್ ಅಧ್ಯಕ್ಷ ಜೆ.ಶಿವಲಿಂಗೇಗೌಡ, ಮುಖಂಡ ಚಿಕ್ಕಾಡೆ ಚೇತನ್, ಜಯರಾಮೇಗೌಡ ಸೇರಿದಂತೆ ಹಲವರು ಹಾಜರಿದ್ದರು.

ಜಲಜೀವನ್ ಮಿಷನ್ ಯೋಜನೆ ರಾಜ್ಯದಲ್ಲಿ ಮಂಡ್ಯಕ್ಕೆ ನಾಲ್ಕನೇ ಸ್ಥಾನ

ಮಂಡ್ಯ,ಏ.10(ಮೋಹನ್‌ರಾಜ್)-ಜಲಜೀವನ್ ಮಿಷನ್ ಯೋಜನೆಯಲ್ಲಿ ಮಂಡ್ಯ ಜಿಲ್ಲೆ ರಾಜ್ಯದಲ್ಲೇ ನಾಲ್ಕನೇ ಸ್ಥಾನದಲ್ಲಿದೆ. ಗ್ರಾಮೀಣ ನೀರು ಸರಬರಾಜು ಯೋಜನೆಯಿಂದ ಪ್ರತಿ ಮನೆಗೆ ಕುಡಿಯುವ ನೀರಿನ ಸರಬರಾಜಿನಲ್ಲಿ ಶೇ.71.98ರಷ್ಟು ಸಾಧನೆ ಮಾಡಲಾಗಿದೆ ಎಂದು ಬಿಜೆಪಿ ಜಿಲ್ಲಾಧ್ಯಕ್ಷ ಕೆ.ಜೆ.ವಿಜಯಕುಮಾರ್ ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿಯವರ ನೇತೃತ್ವದ ಕೇಂದ್ರ ಸರ್ಕಾರ ದೇಶದ ಪ್ರತಿಯೊಂದು ಕುಟುಂಬಕ್ಕೂ ಶುದ್ಧ ಕುಡಿಯುವ ನೀರು ಸರಬರಾಜು ಮಾಡುವ ಯೋಜನೆ ಕೈಗೆತ್ತಿಕೊಂಡಿದ್ದು, ಈ ಹಿಂದೆ ಅಂದರೆ 2019ರ ಆಗಸ್ಟ್‌ನಲ್ಲಿ ರಾಜ್ಯದಲ್ಲಿ 24.51 ಲಕ್ಷ ಕುಟುಂಬಗಳಿಗೆ ಅಂದರೆ ಶೇ.25ರಷ್ಟು ಗುರಿ ಸಾಧನೆ ಮಾಡಲಾಗಿತ್ತು. ಈವರೆಗೆ 47.41 ಲಕ್ಷ ಕುಟುಂಬಗಳು ನಲ್ಲಿ ನೀರಿನ ಸಂಪರ್ಕ ಹೊಂದಿವೆ ಎಂದು ಪತ್ರಿಕಾ ಹೇಳಿಕೆಯಲ್ಲಿ ವಿವರಿಸಿದ್ದಾರೆ.

ಜಲಜೀವನ್ ಮಿಷನ್ ಪ್ರಾರಂಭವಾದಾಗಿನಿಂದ 22.89 ಲಕ್ಷ ಮನೆಗಳಿಗೆ ನಲ್ಲಿ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ಶೇ.24ರಷ್ಟು ಹೆಚ್ಚಿನ ಸಾಧನೆ ಮಾಡಲಾಗಿದೆ. ಜಿಲ್ಲೆಯಲ್ಲಿ 3,29,302 ಕುಟುಂಬಗಳು ನಲ್ಲಿ ನೀರಿನ ಸಂಪರ್ಕ ಹೊಂದಿದ್ದು, ಇದೀಗ 2,87,148 ಕುಟುಂಬಗಳಿಗೆ ಸಂಪರ್ಕ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ. ಪ್ರತಿಯೊಂದು ಕುಟುಂಬಕ್ಕೂ ನೀರಿನ ಅಗತ್ಯತೆಯನ್ನು ಮನಗಂಡು ಸರ್ಕಾರ ಈ ಯೋಜನೆ ರೂಪಿಸಿದೆ ಎಂದು ಹೇಳಿದರು.

ಜಿಲ್ಲೆಯಾದ್ಯಂತ ಶ್ರೀ ರಾಮನವಮಿ ಸಂಭ್ರಮ

ನಾಗಮಂಗಲ, ಏ.10- ತಾಲ್ಲೂಕಿನ ಬೆಳ್ಳೂರು, ಹೊನ್ನೇನಹಳ್ಳಿ ಮತ್ತು ಪಟ್ಟಣದ ವಿವಿಧೆಡೆ ಶ್ರೀ ರಾಮನವಮಿಯನ್ನು ವೈಭವದಿಂದ ಆಚರಿಸಲಾಯಿತು.



ಇಲ್ಲಿನ ಛತ್ರದ ಆಂಜನೇಯ ದೇವಾಲಯದಲ್ಲಿ ವೇದ ವಿದ್ವಾಂಸ ನಂಜುಂಡ ಭಟ್ಟರು ಮತ್ತು ಸಂಸ್ಕೃತ ವಿದ್ವಾಂಸ ಭಾಸ್ಕರ್ ಭಟ್ ನೇತೃತ್ವದಲ್ಲಿ ಶ್ರೀ ರಾಮ, ಸೀತಾ, ಲಕ್ಷ್ಮಣ ಸಹಿತ ಆಂಜನೇಯನ ಮೂರ್ತಿಗಳಿಗೆ ಹಾಲು, ತುಪ್ಪ ಎಳನೀರಿನಿಂದ ಅಭಿಷೇಕ ಮಾಡಲಾಯಿತು. ನಂತರ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು.

ಬೆಟ್ಟದ ಮಲ್ಲೇನಹಳ್ಳಿ ರಸ್ತೆಯಲ್ಲಿರುವ ಮಾರುತಿ ದೇವಸ್ಥಾನದಲ್ಲಿ ಶ್ರೀ ರಾಮನವಮಿಯನ್ನು ವೈಭವದಿಂದ ಆಚರಿಸಿದ್ದು, ನೂರಾರು ಭಗವಾಧ್ವಜಗಳಿಂದ ದೇವಸ್ಥಾನವನ್ನು ಅಲಂಕರಿಸಲಾಗಿತ್ತು, ಸಾವಿರಾರು ಭಕ್ತಾದಿಗಳಿಂದ ಜೈ ಶ್ರೀ ರಾಂ ಘೋಷಣೆಗಳು ಮೊಳಗಿದವು. ಅಲ್ಲಿಯೂ ಸಹ ಕೋಸಂಬರಿ, ಪಾನಕದ ಜೊತೆಗೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿತ್ತು.

ಇತ್ತ ಮೈಸೂರು-ತುಮಕೂರು ರಸ್ತೆಯಲ್ಲಿರುವ ವೀರಾಂಜನೇಯ ದೇವಸ್ಥಾನದಲ್ಲಿ ಶನಿವಾರದಿಂದಲೇ ಭರ್ಜರಿ ತಯಾರಿ ನಡೆದಿದ್ದು ಸುತ್ತ ಮುತ್ತ ಬಾಳೆ ಕಂದು ಮತ್ತು ಮಾವಿನ ತೋರಣಗಳಿಂದ ಅಲಂಕರಿಸಲಾಗಿತ್ತು. ಮುಂಜಾನೆಯಿಂದಲೇ ಶ್ರೀ ರಾಮ ಸಮೇತ ಆಂಜನೇಯನಿಗೆ ಅಭಿಷೇಕಗಳು ನಡೆದು ಪಾನಕ, ಮಜ್ಜಿಗೆ, ಕೋಸಂಬರಿಗಳ ಸಮಾರಾಧನೆ ನಡೆಯಿತು. ಈ ದೇವಾಲಯದ ಇಂದಿನ ಪ್ರಸಾದದ ಪ್ರಾಯೋಜಕತ್ವವನ್ನು ದರ್ಶಿನಿ ಎಲೆಕ್ಟ್ರಿಕಲ್ಸ್ ಮಾಲೀಕರು, ವರದಿಗಾರ ಮಹೇಶ್ ವಹಿಸಿದ್ದರು.

ಬೆಳ್ಳೂರು ಹೋಬಳಿಯ ಹೊನ್ನೇನಹಳ್ಳಿ ಮತ್ತು ಬೆಳ್ಳೂರು ಪಟ್ಟಣದಲ್ಲಿರುವ ಶ್ರೀ ರಾಮ ಮಂದಿರದಲ್ಲೂ ಸಹ ಶ್ರೀ ರಾಮಸಮಿತಿಯಿಂದ ವೇದ ವಿದ್ವಾಂಸ ರವಿಶಂಕರ್ ಮತ್ತು ಸಂಜೀವ ದೀಕ್ಷಿತ್ ಮುಂದಾಳತ್ವದಲ್ಲಿ ಅದ್ಧೂರಿಯಾಗಿ ರಾಮನವಮಿ ನೆರವೇರಿತು.



ಕೆ.ಆರ್.ಪೇಟೆ: ತಾಲೂಕಿನ ವಿವಿಧೆಡೆ ಮರ್ಯಾದಾ ಪುರುಷೋತ್ತಮ ಶ್ರೀರಾಮ ನವಮಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಕಳೆದ ಎರಡು ವರ್ಷಗಳಿಂದ ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ಶ್ರೀರಾಮನವಮಿಯನ್ನು ಆಚರಿಸಲು ಸಾಧ್ಯವಾಗಿರಲಿಲ್ಲ. ಆದರೆ ಈ ಬಾರಿ ಕೊವಿಡ್ ದೂರವಾಗಿರುವ ಹಿನ್ನೆಲೆಯಲ್ಲಿ ತಾಲೂಕಿನ ಮಡುವಿನಕೋಡಿ ಗ್ರಾಮದಲ್ಲಿರುವ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಆವರಣದಲ್ಲಿ ಸಾಮೂಹಿಕ ಅನ್ನ ಸಂತರ್ಪಣೆ ಹಾಗೂ ವಿಶೇಷ ಪೂಜಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಬಿ.ಪ್ರಕಾಶ್ ಹಾಗೂ ಮಿತ್ರ ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷರು ಹಾಗೂ ಸಮಾಜ ಸೇವಕ ವಿಜಯ್ ರಾಮೇಗೌಡ ಭಾಗವಹಿಸಿ ರಾಮಮಂದಿರದಲ್ಲಿ ಸರ್ವಾಲಂಕೃತಗೊಂಡಿದ್ದ ಶ್ರೀರಾಮ ದೇವರಿಗೆ ಹಾಗೂ ಆಂಜನೇಯಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ತಾಪಂ ಮಾಜಿ ಸದಸ್ಯ ಮಾಧವಪ್ರಸಾದ್, ಮುಖಂಡರಾದ ಮಡುವಿನಕೋಡಿ ಕಾಂತರಾಜು, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಅಗಸರಹಳ್ಳಿ ಗೋವಿಂದರಾಜು, ಗ್ರಾಮದ ಮುಖಂಡರಾದ ಎಂ.ವಿ.ಜಯರಾಮೇಗೌಡ, ಎನ್.ಪಿ. ಹರೀಶ್, ಯೋಗೇಶ್, ನಾಗೇಗೌಡ, ಕುಮಾರ್, ಗೋಪಾಲ, ಮರಿಯಪ್ಪ , ಶ್ರೀನಿವಾಸ್, ಚಂದ್ರು, ಪೃಥ್ವಿರಾಜ್, ಉಮೇಶ್, ಮದನ್, ಮಡುವಿನಕೋಡಿ ಸುತ್ತಮುತ್ತಲ ಗ್ರಾಮಗಳ ಭಾಗವಹಿಸಿದ್ದರು.

ಅಗ್ರಹಾರ ಬಡಾವಣೆ: ಪಟ್ಟಣದ ಅಗ್ರಹಾರ ಬಡಾವಣೆಯಲ್ಲಿ ಶ್ರೀ ಕನಕ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ರಾಮಮಂದಿರದಲ್ಲಿ ಶ್ರೀರಾಮನವಮಿಯನ್ನು ಸಂಘದ ಅಧ್ಯಕ್ಷ ಕೆ.ಎಸ್. ಕುಮಾರ್ ನೇತೃತ್ವದಲ್ಲಿ ಆಚರಣೆ ಮಾಡಲಾಯಿತು.

ಉಪಾಧ್ಯಕ್ಷ ಕೆ.ಎಸ್.ರಾಜೇಗೌಡ, ಖಜಾಂಚಿ ಕೆ.ಸಿ.ಸಂದೀಪ್, ಸಲಹೆಗಾರ ಎಂ.ಎಸ್.ವಿಶ್ವನಾಥ್, ಗೌರವಾಧ್ಯಕ್ಷ ಕೆ.ಕೆ.ಕೃಷ್ಣೇಗೌಡ, ಮಾಜಿ ಅಧ್ಯಕ್ಷ ಸಿದ್ದು, ಕೆ.ಎನ್.ದೊಡ್ಡಯ್ಯ, ನಿರ್ದೇಶಕರಾದ ಕೆ. ಶ್ರೀನಿವಾಸ್, ಕೆ.ಎನ್.ಕಾಳೇಗೌಡ, ಬಸವರಾಜು, ಕೆ.ಹೆಚ್.ಮಂಜುನಾಥ್, ಕೆ.ಶಿವಕುಮಾರ್, ಕೆ.ಮಂಜುನಾಥ್, ಕೆ.ಉಮೇಶ್, ಎಸ್.ರಾಜು, ಕೆ.ಎನ್.ಯೋಗೇಶ್, ಮುಖಂಡರಾದ ಕೆ.ಮುರುಳೀಧರ್, ಮುತ್ತುರಾಜ್, ಶ್ರೀನಿವಾಸ್ ಮುತ್ತು ಸೇರಿದಂತೆ ಹಲವು ಗಣ್ಯರು ಭಾಗವಹಿಸಿದ್ದರು.

ಮೂಡಲ ಆಂಜನೇಯಸ್ವಾಮಿ ದೇವಾಲಯ: ಪಟ್ಟಣದ ಕೆರೆ ಬೀದಿಯಲ್ಲಿರುವ ಶ್ರೀ ಮೂಡಲ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರೀರಾಮನವಮಿಯನ್ನು ಶ್ರೀ ಕಾರ್ಯಸಿದ್ಧಿ ಆಂಜನೇಯಸ್ವಾಮಿ ದೇವಾಲಯ ಟ್ರಸ್ಟ್ ವತಿಯಿಂದ ಅರ್ಥಪೂರ್ಣವಾಗಿ ಆಚರಿಸಲಾಯಿತು.

ವೇದಬ್ರಹ್ಮ ಗೋಪಾಲಕೃಷ್ಣ ಅವಧಾನಿಗಳ ನೇತೃತ್ವದಲ್ಲಿ ಶ್ರೀರಾಮತಾರಕ ಹೋಮ, ಆಯುಷ್ ಹೋಮ, ನಕ್ಷತ್ರ ಹೋಮ, ಶ್ರೀರಾಮ ಪಟ್ಟಾಭಿಷೇಕ, ವೃಷಭ ದೇವರ ಪಟ್ಟಾಭಿಷೇಕ, ಪೂರ್ಣಾಹುತಿ, ಮಹಾಮಂಗಳಾರತಿ ಹಾಗೂ ಶ್ರೀರಾಮ ಭಜನೆ ಕಾರ್ಯಕ್ರಮಗಳು ದಿನವಿಡೀ ನಡೆದವು. ಕಾರ್ಯಸಿದ್ಧಿ ಟ್ರಸ್ಟಿನ ವಿಷ್ಣು, ವಿಜಯ್, ಮೋನಿಸ್, ಕಿರಣ್, ಅಭಿ, ಮನು, ದಿಲೀಪ್, ಜಗದೀಶ್ ನೇತೃತ್ವದಲ್ಲಿ ಶ್ರೀರಾಮದೇವರಿಗೆ ಹಾಗೂ ಆಂಜನೇಯ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿ ಭಕ್ತಾದಿಗಳಿಗೆ ಮಜ್ಜಿಗೆ, ಪಾನಕ ಹಾಗೂ ಪ್ರಸಾದ ವಿತರಣೆ ಮಾಡಲಾಯಿತು. ತೆಂಡೇಕೆರೆ ಶ್ರೀ ಬಾಳೆಹೊನ್ನೂರು ಶಾಖಾಮಠದ ಶ್ರೀಗಳ ಶ್ರೀ ಗಂಗಾಧರ ಶಿವಾಚಾರ್ಯ ಸ್ವಾಮೀಜಿ, ಉಪತಹಸೀಲ್ದಾರ್ ಲಕ್ಷ್ಮೀಕಾಂತ್, ಮುಖಂಡರಾದ ಕೆ.ಬಿ.ಸಿ.ಮಂಜುನಾಥ್, ಜ್ಯೋತಿದೇವರಾಜು, ಗೌಡರಾಜು, ಎಚ್.ಬಿ.ಮಂಜುನಾಥ್, ಮುರುಗೇಶ್ ಮತ್ತಿತರರು ಭಾಗವಹಿಸಿದ್ದರು.

ಪಾಂಡವಪುರ: ಶ್ರೀರಾಮ ನವಮಿ ಹಬ್ಬದ ಅಂಗವಾಗಿ ಪಟ್ಟಣ ಸೇರಿ ದಂತೆ ತಾಲೂಕಿನಾದ್ಯಂತ ವಿಜೃಂಭಣೆ ಯಿಂದ ಶ್ರೀ ರಾಮ ಸ್ಮರಣೆ ಮಾಡಲಾಯಿತು.

ಪಟ್ಟಣದ ಹಿರೋಡೆ ಬೀದಿಯಲ್ಲಿ ಇರುವ ಪುರಾತನ ಶ್ರೀರಾಮ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಶ್ರೀ ರಾಮನಾಮ ಸ್ಮರಣೆ ನಡೆಯಿತು. ವ್ಯಾಸರಾಯರ ಕಾಲದಲ್ಲಿ ನಿರ್ಮಾಣವಾಗಿರುವ ಹಿರೋಡೆ ಬೀದಿಯ ಶ್ರೀರಾಮಮಂದಿರದಲ್ಲಿ ಬೆಳಗ್ಗೆಯಿಂದ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ಭಕ್ತರಿಗೆ ಮಜ್ಜಿಗೆ, ಪಾನಕ, ಕೋಸಂಬರಿ ವಿತರಣೆ ಮಾಡಲಾಯಿತು.

ಪಟ್ಟಣದ ವಿಸಿ ಕಾಲೋನಿಯಲ್ಲಿರುವ ಶ್ರೀರಾಮಮಂದಿರ, ಬೋವಿ ಕಾಲೋನಿಯ ಬಳಿ ಇರುವ ಶ್ರೀರಾಮಮಂದಿರ ಸೇರಿ ದಂತೆ ವಿವಿಧೆಡೆ ಭಕ್ತಿಯಿಂದ ಶ್ರೀರಾಮ



ನವಮಿ ಅಂಗವಾಗಿ ಭಕ್ತರಿಗೆ ಮಜ್ಜಿಗೆ, ಪಾನಕ ವಿತರಣೆ ಮಾಡಲಾಯಿತು. ತಾಲೂಕಿನ ಎಲ್ಲಾ ಗ್ರಾಮದ ಶ್ರೀರಾಮ ಮಂದಿರದಲ್ಲಿ ರಾಮನವಮಿ ವಿಶೇಷ ಪೂಜೆ ಸಲ್ಲಿಸಿ ಮಜ್ಜಿಗೆ, ಪಾನಕ ವಿತರಣೆ ಮಾಡಲಾಯಿತು.

ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಪಿ.ಎಸ್.ಲಿಂಗರಾಜು, ಕೆ.ಪ್ರಸಾದ್, ರಘುನಾಥ್, ಶಿವಣ್ಣೇಗೌಡ ಸೇರಿದಂತೆ ಹಲವಾರು ಮುಖಂಡರು ಹಾಜರಿದ್ದರು.

ಆರ್‌ಎಪಿಸಿಎಂಎಸ್ ಚುನಾವಣೆ: ಶಾಸಕ ಪುಟ್ಟರಾಜು ಅಧ್ಯಕ್ಷತೆಯಲ್ಲಿ ಆಕಾಂಕ್ಷಿತರ ಸಭೆ

ಮಂಡ್ಯ,ಏ.10(ಮೋಹನ್‌ರಾಜ್)-ಆರ್‌ಎಪಿಸಿಎಂಎಸ್(ರೈತರ ವ್ಯವಸಾಯೋತ್ಪನ್ನ ಮಾರಾಟ ಸಹಕಾರ ಸಂಘ) ಚುನಾವಣೆಗೆ ಸ್ಪರ್ಧಿಸುವ ಆಕಾಂಕ್ಷಿಗಳು ಹೆಚ್ಚಿರುವುದರಿಂದ ವರಿಷ್ಠರು ಆಯ್ಕೆ ಮಾಡಿದ ಅಭ್ಯರ್ಥಿ ಗೆಲುವಿಗೆ ಶ್ರಮಿಸಲು ಎಲ್ಲರೂ ಬದ್ಧರಾಗಿರಬೇಕು ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ನಗರದ ಬಂದೀಗೌಡ ಬಡಾವಣೆಯಲ್ಲಿ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ದುದ್ದ ಹೋಬಳಿಯ ಆರ್‌ಎಪಿಸಿಎಂಎಸ್ ಚುನಾವಣೆಯ ಆಕಾಂಕ್ಷಿತರ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಬಳಿಕ ಮಾತನಾಡಿದ ಶಾಸಕ ಸಿ.ಎಸ್.ಪುಟ್ಟರಾಜು, ದುದ್ದ ಹೋಬಳಿ ವ್ಯಾಪ್ತಿಯಲ್ಲಿ ಆರ್‌ಎಪಿಸಿಎಂಎಸ್ ಚುನಾವಣೆಯ 5 ವಿಭಾಗಗಳಿಂದ 5 ಮಂದಿ ನಿರ್ದೇಶಕ ಸ್ಥಾನಕ್ಕೆ ಆಯ್ಕೆಯಾಗಬಹುದು. ಆಕಾಂಕ್ಷಿಗಳು ಹೆಚ್ಚಿರುವುದಿಂದ ಪೂರ್ವಭಾವಿ ಸಭೆ ಕರೆದು ಎಲ್ಲರ ಸಹಕಾರದೊಂದಿಗೆ ವರಿಷ್ಠರು ಆಯ್ಕೆ ಮಾಡಿದ ಅಭ್ಯರ್ಥಿ ಗೆಲುವಿಗೆ ಶ್ರಮಿಸಬೇಕು ಎಂದರು.

ಮುಂಬರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಪ್ರತಿಷ್ಠಿತ ಸಂಸ್ಥೆ ಆರ್‌ಎಪಿಸಿಎಂಎಸ್ ಒಂದಾಗಿದೆ. ಈ ಆಡಳಿತ ಮಂಡಳಿಗೆ ಜೆಡಿಎಸ್ ಬೆಂಬಲಿತ ಅಭ್ಯರ್ಥಿಗಳ ಗೆಲುವಿಗೆ ಬದ್ಧರಾಗಿ, ಆಡಳಿತ ನಡೆಸಲು ಸಂಕಲ್ಪ ಮಾಡಿ ಎಂದು ಕೋರಿದರು.

ಆರ್‌ಎಪಿಸಿಎಂಎಸ್ ಚುನಾವಣೆಯ ಮತದಾರರ ಪಟ್ಟಿಯಲ್ಲಿ ಕೆಲವರ ಹೆಸರು ಕೈಬಿಟ್ಟಿರುವುದು ಬೆಳಕಿಗೆ ಬಂದಿದೆ. ಅಧಿಕಾರಿಗಳು ಮತ್ತು ವಕೀಲರೊಂದಿಗೆ ಚರ್ಚಿಸಿ, ಮುಂದಿನ ನಿರ್ಧಾರ ಕೈಗೊಳ್ಳಲಾಗುವುದು. ಆತಂಕ ಪಡುವ ಅಗತ್ಯವಿಲ್ಲ ಎಂದು ತಿಳಿಸಿದರು.

ದುದ್ದ ಹೋಬಳಿಯ ವ್ಯಾಪ್ತಿಯಲ್ಲಿನ ಸೊಸೈಟಿಯಿಂದ ಒಬ್ಬ ನಿರ್ದೇಶಕ ಸ್ಥಾನಕ್ಕೆ 5 ಮಂದಿ ಆಕಾಂಕ್ಷಿತರಿದ್ದು, ಸಾಮಾನ್ಯ ವರ್ಗದಿಂದ 3 ಮಂದಿ ಆಕಾಂಕ್ಷಿತರಿದ್ದಾರೆ. ಬಿಸಿಎಂ 'ಬಿ' ವರ್ಗದಿಂದ ಇಬ್ಬರು ಆಕಾಂಕ್ಷಿತರಿದ್ದು, ಬಿಸಿಎಂ 'ಎ' ವರ್ಗದಿಂದ 3 ಮಂದಿ ಆಕಾಂಕ್ಷಿತರು, ಸಾಮಾನ್ಯ ಮಹಿಳೆ ವಿಭಾಗದಿಂದ ಇಬ್ಬರು ಆಕಾಂಕ್ಷಿತರಿದ್ದಾರೆ. ವರಿಷ್ಠರ ತೀರ್ಮಾನಕ್ಕೆ ಬದ್ಧರಾಗಿ ಆಯ್ಕೆಯಾದವರ ಗೆಲುವಿಗೆಗೆ ಶ್ರಮಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ಮಾಜಿ ಶಾಸಕ ಜಿ.ಬಿ.ಶಿವಕುಮಾರ್, ಮನ್ಮುಲ್ ಅಧ್ಯಕ್ಷ ರಾಮಚಂದ್ರ, ಜಿಪಂ ಮಾಜಿ ಸದಸ್ಯ ಮಾದಪ್ಪ, ತಾಪಂ ಮಾಜಿ ಸದಸ್ಯ ಬೆಟ್ಟಸ್ವಾಮಿ, ಹೆಚ್.ಎಲ್. ಶಿವಣ್ಣ, ಜಿಪಂ ಮಾಜಿ ಸದಸ್ಯ ಜಯಶಂಕರ್, ಮುಖಂಡರಾದ ಹೊಳಲು ಯೋಗೇಶ್, ಶ್ರೀಧರ್, ಶ್ರೀಕಂಠೇಗೌಡ ಮತ್ತಿತರರಿದ್ದರು.



ಕೆ.ಆರ್. ಪೇಟೆ ತಾಲೂಕು ಕಿಕ್ಕೇರಿಯಲ್ಲಿ ಕಿಕ್ಕೇರಮ್ಮನ ವಸಂತನ ಹಬ್ಬ ನಡೆಯಿತು.

ಮೈಸೂರು ಮಿತ್ರ ಕೊಡಗು ಕಛೇರಿ: ಪೂಜಾ ಆರ್ಕೆಡ್, ಜೂನಿಯರ್ ಕಾಲೇಜು ರಸ್ತೆ, ಮಡಿಕೇರಿ. ದೂರವಾಣಿ: 223517, (ಕ) ಫ್ಯಾಕ್ಸ್: 08272-223517 ಮೊ. 9731469871 E-mail: madikeri@mysurumithra.com

ಕಣಿವೆಯಲ್ಲಿ ಶ್ರೀ ರಾಮಲಿಂಗೇಶ್ವರ ಬ್ರಹ್ಮರಥೋತ್ಸವ



ಕುಶಾಲನಗರ, ಏ.10–ಕುಶಾಲನಗರ ತಾಲೂಕಿನ ಕಣಿವೆ ಗ್ರಾಮದಲ್ಲಿ ಶ್ರೀ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಭಾನುವಾರ ರಾಮನವಮಿಯಂದು ಶ್ರೀ ರಾಮಲಿಂಗೇಶ್ವರ ವಾರ್ಷಿಕ ಬ್ರಹ್ಮ ರಥೋತ್ಸವ ಶ್ರದ್ಧಾಭಕ್ತಿಯೊಂದಿಗೆ ವಿಜೃಂಭಣೆಯಿಂದ ಜರುಗಿತು.

ಕಾವೇರಿ ನದಿಯ ದಂಡೆಯಲಿರುವ ರಾಮಸ್ವಾಮಿ ಕಣಿವೆಯಲ್ಲಿ ವೈಶಿಷ್ಟ್ಯಪೂರ್ಣವಾಗಿ ನಡೆದ ರಥೋತ್ಸವದಲ್ಲಿ ಸಾವಿರಾರು ಮಂದಿ ಭಕ್ತಾದಿಗಳು ಪಾಲ್ಗೊಂಡು ತೇರನ್ನು ಎಳೆದು ಪುನೀತರಾದರು.

ರಥೋತ್ಸವದ ಹಿನ್ನೆಲೆ ರಾಮಲಿಂಗೇಶ್ವರ ದೇಗುಲದಲ್ಲಿ ಬೆಳಗ್ಗೆಯಿಂದಲೇ ವಿವಿಧ ಪೂಜಾ ಕೈಂಕರ್ಯ ನೆರವೇರಿತು. ಕಾಶಿಯಿಂದ ಅಂಚೆ ಮೂಲಕ ತರಿಸಿದ್ದ ತೀರ್ಥಕ್ಕೆ ಹೆಬ್ಬಾಲೆ ಬಸವೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು. ಬಳಿಕ ದೇವಸ್ಥಾನ ಸಮಿತಿಯ ಅಧ್ಯಕ್ಷ ಹೆಚ್.ಎನ್.ಬಸವರಾಜು, ಕಾರ್ಯದರ್ಶಿ ಎಚ್.ಪಿ.ರಾಜು ನೇತೃತ್ವದಲ್ಲಿ ಮಂಗಳವಾದ್ಯದೊಂದಿಗೆ ಮೆರವಣಿಗೆ ಮೂಲಕ ರಾಮಲಿಂಗೇಶ್ವರ ದೇವಸ್ಥಾನಕ್ಕೆ ತೀರ್ಥವನ್ನು ತಂದು, ದೇವರಿಗೆ ಅಭಿಷೇಕ ಮಾಡಿ ಮಹಾ ಮಂಗಳಾರತಿ ನೆರವೇರಿಸಲಾಯಿತು.

ಬಳಿಕ ವಿವಿಧ ಪುಷ್ಪ-ಧ್ವಜಗಳಿಂದ ಅಲಂಕೃತಗೊಂಡಿದ್ದ ರಥದಲ್ಲಿ ಸೀತಾ ಮಾತೆ, ರಾಮ-ಲಕ್ಷ್ಮಣ, ಆಂಜನೇಯರಿರುವ ಉತ್ಸವ ಮೂರ್ತಿಯನ್ನು ರಥದಲ್ಲಿ ಪ್ರತಿಷ್ಠಾಪಿಸಿ, ಪೂಜೆ ಸಲ್ಲಿಸಿದ ನಂತರ ರಥೋತ್ಸವಕ್ಕೆ ಚಾಲನೆ ನೀಡಲಾಯಿತು. ರಥೋತ್ಸವದಲ್ಲಿ ಜಿಲ್ಲೆಯ ಜನತೆ ಸೇರಿದಂತೆ ನೆರೆಯ ಹಾಸನ ಮತ್ತು ಮೈಸೂರು ಜಿಲ್ಲೆಯ ಭಕ್ತಾದಿಗಳು ಅಧಿಕ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಭಕ್ತಾದಿಗಳು ಜಯಕಾರಗಳೊಂದಿಗೆ ಸಂಭ್ರಮ, ಸಡಗರದಿಂದ ತೇರನ್ನು ಎಳೆದರು.

ರಥ ಸಾಗುವ ವೇಳೆ ದಾರಿಯುದ್ದಕ್ಕೂ ಈಡುಗಾಯಿ ಒಡೆದು, ರಥಕ್ಕೆ ಹಣ್ಣು-ದವನ ಎಸೆದು ಭಕ್ತರು ಭಕ್ತಿ ಸಮರ್ಪಿಸಿದರು. ವೇದ ಬ್ರಹ್ಮ ನರಹರಿ ಶರ್ಮಾ ಅವರ ತಂಡ ಹಾಗೂ ದೇವಾಲಯದ ಅರ್ಚಕ ಹೆಚ್.ಆರ್.ರಾಘವೇಂದ್ರಾಚಾರ್ ನೇತೃತ್ವದಲ್ಲಿ ಧಾರ್ಮಿಕ ಕೈಂಕರ್ಯ ನೆರವೇರಿದವು.

ದೇವಸ್ಥಾನ ಸಮಿತಿಯ ಅಧ್ಯಕ್ಷ ಕೆ.ಎನ್.ಸುರೇಶ್, ಕಾರ್ಯದರ್ಶಿ ಟಿ.ಎನ್.ಶೇಷಾಚಲ ನೇತೃತ್ವದಲ್ಲಿ ಉತ್ಸವಗಳು ಜರುಗಿದವು. ವಿವಿಧ ಕಲಾತಂಡಗಳು ಪ್ರದರ್ಶಿಸಿದ ಕಲಾ ಪ್ರದರ್ಶನ ಎಲ್ಲರ ಗಮನ ಸೆಳೆಯಿತು. ಭಕ್ತಾದಿಗಳು ರಾಮ, ಲಕ್ಷ್ಮಣ, ಆಂಜನೇಯ ದೇವಾಲಯಗಳಿಗೆ ತೆರಳಿ ದೇವರ ದರ್ಶನ ಪಡೆದರು. ಉತ್ಸವದಲ್ಲಿ ಸಮಿತಿಯ ಸಹ ಕಾರ್ಯದರ್ಶಿ ಕೆ.ಎಲ್.ಮಹೇಶ್ ಕುಮಾರ್, ಕಾರ್ಯಾಧ್ಯಕ್ಷ ಕೆ.ಎಸ್.ಮಾಧವ, ಉಪಾಧ್ಯಕ್ಷ ಕೆ.ಕೆ. ಮಂಜುನಾಥ ಸ್ವಾಮಿ ಮತ್ತಿತರರು ಈ ಸಂದರ್ಭದಲ್ಲಿದ್ದರು. ಸಮಿತಿಯಿಂದ ನೆರೆದಿದ್ದ ಭಕ್ತರಿಗೆ ಅನ್ನ ಸಂತರ್ಪಣೆ ನೆರವೇರಿಸಲಾಯಿತು.

ಸೋಮವಾರಪೇಟೆಯಲ್ಲಿ ಶ್ರೀರಾಮನವಮಿ



ಸೋಮವಾರಪೇಟೆ, ಏ.10–ಶ್ರೀ ರಾಮನವಮಿ ಉತ್ಸವ ಸಮಿತಿ ಮತ್ತು ಹಿಂದೂ ಜಾಗರಣಾ ವೇದಿಕೆ ಸಂಯುಕ್ತಾಶ್ರಯದಲ್ಲಿ ಭಾನುವಾರ ಪಟ್ಟಣದಲ್ಲಿ ಶ್ರೀ ರಾಮನವಮಿಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ರಾಮನವಮಿ ಅಂಗವಾಗಿ ಪಟ್ಟಣದ ಶ್ರೀ ಆಂಜನೇಯ ದೇವಾಲಯದಲ್ಲಿ ಕಳೆದ 9 ದಿನಗಳಿಂದ ದೇವರಿಗೆ ವಿವಿಧ ಅಲಂಕಾರ, ವಿಶೇಷ ಪೂಜೆ ನೆರವೇರಿತು. ಭಾನುವಾರ ಶ್ರೀ ಆಂಜನೇಯ ಮೂರ್ತಿಗೆ ನಾಣ್ಯಗಳ ಅಲಂಕಾರ ಮಾಡಿ, ಪೂಜೆ ಸಲ್ಲಿಸಲಾಯಿತು. ಮಧ್ಯಾಹ್ನ ಅನ್ನಸಂತರ್ಪಣೆ ನೆರವೇರಿತು. ಸಂಜೆ ರಾಮನ ಉತ್ಸವ ಮೂರ್ತಿಯನ್ನು ಅಲಂಕೃತ ಮಂಟಪದಲ್ಲಿರಿಸಿ ಊರಿನ ಪ್ರಮುಖ ರಸ್ತೆಗಳಲ್ಲಿ ವಾದ್ಯಗೋಷ್ಠಿಗಳೊಂದಿಗೆ ಮೆರವಣಿಗೆ ನಡೆಸಲಾಯಿತು. ಈ ಸಂದರ್ಭ ದೇವಾಲಯ ಸಮಿತಿ ಅಧ್ಯಕ್ಷ ಬನ್ನಳ್ಳಿ ಗೋಪಾಲ್, ಉತ್ಸವ ಸಮಿತಿ ಅಧ್ಯಕ್ಷ ಸುಭಾಷ್, ಕಾರ್ಯದರ್ಶಿ ಎಂ.ಬಿ.ಉಮೇಶ್ ಮತ್ತಿತರರಿದ್ದರು.

ಅಲ್ಲದೆ ಪಟ್ಟಣದ ಕುರುಹಿಶೆಟ್ಟಿ ಸಮಾಜದ ಶ್ರೀ ರಾಮಮಂದಿರದಲ್ಲಿ ಶ್ರೀ ರಾಮನವಮಿಯನ್ನು ಶ್ರದ್ಧಾ ಭಕ್ತಿಯಿಂದ ಆಚರಿಸಲಾಯಿತು. ಬೆಳಗ್ಗೆ ದೇವಾಲಯದಲ್ಲಿ ಜನಾಂಗದವರು ಸೇರಿ ಪೂಜೆ ಸಲ್ಲಿಸಿದರು. ನಂತರ ಎಲ್ಲರಿಗೂ ಕೋಸಂಬರಿ, ಪಾನಕ ವಿತರಿಸಲಾಯಿತು.

ಕೊಡವ ಚಲನಚಿತ್ರ 'ನೆಲ್ಚಿ ಬೊಳಿ' ಏ.15ಕ್ಕೆ ಬಿಡುಗಡೆ

ಮಡಿಕೇರಿ, ಏ.10–ಕೋಟ್ರಂಗಡ ಸಜನಿ ಸೋಮಯ್ಯ ವಿರಚಿತ 'ಬಾಳ್ ಕ್ ಬೊಳಿ' ಕಾದಂಬರಿ ಆಧಾರಿತ ಕೊಡವ ಚಲನಚಿತ್ರ 'ನೆಲ್ಚಿ ಬೊಳಿ' ಏ.15ರಂದು ಬಿಡುಗಡೆಯಾಗಲಿದೆ ಎಂದು ಸಿನಿಮಾ ತಂಡ ಮಾಹಿತಿ ನೀಡಿದೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಿನಿಮಾ ನಿರ್ಮಾಪಕ ಹಾಗೂ ನಿರ್ದೇಶಕ ಕಾಳಿಮಾಡ ದಿನೇಶ್ ನಾಚಪ್ಪ, ಕೊಡವ ಆಚಾರ, ವಿಚಾರ, ಸಂಸ್ಕೃತಿಯನ್ನು ಬಿಂಬಿಸುವ ಜೊತೆಗೆ ಮನರಂಜನಾತ್ಮಕವಾಗಿ ಸಿನಿಮಾ ಮೂಡಿ ಬಂದಿದೆ. ತಾಂತ್ರಿಕವಾಗಿ ಉತ್ತಮ ಗುಣಮಟ್ಟದಲ್ಲಿ ಸಿನಿಮಾ ನಿರ್ಮಾಣವಾಗಿದೆ. ಅನುಭವಿ ಹಾಗೂ ಹೊಸ ಕಲಾವಿದರು ಸೇರಿ ಒಟ್ಟು 38 ಕಲಾವಿದರು ಸಿನಿಮಾಕ್ಕೆ ಬಣ್ಣ ಹಚ್ಚಿದ್ದಾರೆ. ಕರುಣೆ ಮತ್ತು ಪ್ರೀತಿಯ ನಡುವಿನ ಕಥೆ ಇದಾಗಿದ್ದು, ಕನ್ನಡ, ತಮಿಳು ಸೇರಿ 100ಕ್ಕೂ ಹೆಚ್ಚು ಚಿತ್ರಗಳಿಗೆ ಹಿನ್ನೆಲೆ ಸಂಗೀತ ಸಂಯೋಜಿಸಿರುವ ರಾಜ್ ಭಾಸ್ಕರ್ ನೆಲ್ಚಿ ಬೊಳಿಗೆ ಸಂಗೀತ ನೀಡಿದ್ದಾರೆ ಎಂದು ಮಾಹಿತಿ ನೀಡಿದರು. ಏ.15ರಂದು ವಿರಾಜಪೇಟೆ ಟೌನ್ ಹಾಲ್‌ನಲ್ಲಿ ಸಿನಿಮಾ ಬಿಡುಗಡೆಯಾಗಲಿದ್ದು, ಬೆಳಗ್ಗೆ 10.30, ಮಧ್ಯಾಹ್ನ 2.30 ಹಾಗೂ ಸಂಜೆ 6 ಗಂಟೆಗೆ ಸಿನಿಮಾ ಪ್ರದರ್ಶನವಾಗಲಿದೆ ಎಂದರು. ಸಿನಿಮಾ ಟಿಕೆಟ್ ಮೇಲಿರುವ ಎ.ಆರ್. ಕೋಡ್ ಸ್ಕ್ಯಾನ್ ಮಾಡುವ ಮೂಲಕ ಸಿನಿಮಾ ಟ್ರೈಲರ್ ವೀಕ್ಷಿಸಬಹುದಾಗಿದ್ದು, ಇದು ಭಾರತೀಯ ಸಿನಿಮಾದ ಪ್ರಥಮ ಪ್ರಯೋಗ ಎಂದು ವಿವರಿಸಿದರು.

ಕಲಾವಿದ ನೆರವಂಡ ಉಮೇಶ್ ಮಾತನಾಡಿ, ಸಿನಿಮಾ ಅಚ್ಚುಕಟ್ಟಾಗಿ ಮೂಡಿ ಬಂದಿದೆ. ಕೊಡವ ಸಿನಿಮಾ ಪ್ರದರ್ಶನಕ್ಕೆ ಉತ್ತಮ ಚಿತ್ರಮಂದಿರವಿಲ್ಲದ ಬಗ್ಗೆ ಬೇಸರ ವ್ಯಕ್ತಪಡಿಸಿದರು. ಸುದ್ದಿಗೋಷ್ಠಿಯಲ್ಲಿ ಕಲಾವಿದರಾದ ಮಂಡೀರ ಬೋಪಣ್ಣ, ಮಂಡೀರ ಪದ್ಮ ಬೋಪಯ್ಯ, ಕಳ್ಳಿಚಂಡ ಡಿಂಪಲ್, ಹಿನ್ನೆಲೆ ಸಂಗೀತಗಾರ ರಾಜ್ ಭಾಸ್ಕರ್ ಉಪಸ್ಥಿತರಿದ್ದರು.

ಗೃಹ ಸಚಿವ ಆರಗ ಜ್ಞಾನೇಂದ್ರ, ಸಿ.ಟಿ.ರವಿ ವಿರುದ್ಧ ಮಡಿಕೇರಿಯಲ್ಲಿ ಪ್ರತಿಭಟನೆ



ಮಡಿಕೇರಿ ಏ.10– ಬೆಂಗಳೂರಿನ ಜೆ.ಜೆ. ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದ ಚಂದ್ರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಆರಗ ಜ್ಞಾನೇಂದ್ರ ಹಾಗೂ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಅವರುಗಳು ನೀಡಿರುವ ಹೇಳಿಕೆಯನ್ನು ಖಂಡಿಸಿ ಕೊಡಗು ಜಿಲ್ಲಾ ಕಾಂಗ್ರೆಸ್ ಸಮಿತಿ ನಗರದಲ್ಲಿ ಪ್ರತಿಭಟನೆ ನಡೆಸಿತು.

ನಗರ ಪೊಲೀಸ್ ಠಾಣೆ ಎದುರು ಜಮಾಯಿಸಿದ ಕಾಂಗ್ರೆಸ್ ಪ್ರಮುಖರು ರಾಜ್ಯದಲ್ಲಿ ಕೋಮು ಗಲಭೆಗೆ ಪ್ರಚೋದನೆ ನೀಡುವ ರೀತಿಯ ಹೇಳಿಕೆಯನ್ನು ಸಚಿವರು ಹಾಗೂ ಬಿಜೆಪಿ ಮುಖಂಡರು ನೀಡಿದ್ದಾರೆ ಎಂದು ಆರೋಪಿಸಿದರು.

ಆರಗ ಜ್ಞಾನೇಂದ್ರ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಬೇಕೆಂದು ಒತ್ತಾಯಿಸಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ ಮಾತನಾಡಿ, ಚಂದ್ರು ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಚಿವ ಆರಗ ಜ್ಞಾನೇಂದ್ರ ಹಾಗೂ ಸಿ.ಟಿ.ರವಿ ಅವರು ನೀಡಿರುವ ಹೇಳಿಕೆ ನಾಗರೀಕ ಸಮಾಜ ತಲೆ ತಗ್ಗಿಸುವಂತಾಗಿದೆ. ಕೋಮು ದ್ವೇಷ ನಿಯಂತ್ರಿಸಬೇಕಾದವರೆ ಪ್ರಚೋದನೆ ನೀಡುತ್ತಿದ್ದಾರೆ. ಇದು ದೇಶದ್ರೋಹದ ಕೃತ್ಯವಾಗಿದೆ ಎಂದು ಆರೋಪಿಸಿದರು.

ರಾಜಕೀಯ ಲಾಭಕ್ಕಾಗಿ ಸಮಾಜದ ಶಾಂತಿ, ಸೌಹಾರ್ದತೆಗೆ ಭಂಗ ತರುವ ರೀತಿ ನೀಡಿರುವ ಹೇಳಿಕೆ ಭಾಷಾಭಿಮಾನಿಗಳಿಗೆ ನೋವುಂಟುಮಾಡಿದೆ. ಜವಾಬ್ದಾರಿಯುತ ಸ್ಥಾನದಲ್ಲಿರುವುದನ್ನು ಮರೆತು ಸಂವಿಧಾನ ವಿರೋಧಿ ಹೇಳಿಕೆ ನೀಡುವ ಮೂಲಕ ಸಾಮಾಜಿಕ ಶಾಂತಿಯನ್ನು ಕದಡುವ ಪ್ರಯತ್ನದಲ್ಲಿರುವ ಸಚಿವರು ತಕ್ಷಣ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು, ಇವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಧರ್ಮಜ ಉತ್ತಪ್ಪ ಒತ್ತಾಯಿಸಿದರು.

ಕೆಪಿಸಿಸಿ ಪದಾಧಿಕಾರಿಗಳಾದ ಕೆ.ಪಿ.ಚಂದ್ರಕಲಾ, ಟಿ.ಪಿ.ರಮೇಶ್, ಡಿಸಿಸಿ ಉಪಾಧ್ಯಕ್ಷ ಕೆ.ಬಿ.ಸುಜಾ ತಿಮ್ಮಯ್ಯ, ಮಡಿಕೇರಿ ಬ್ಲಾಕ್ ಅಧ್ಯಕ್ಷ ಹೆಚ್.ಎ.ಹಂಸ, ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಎಂ.ಎ.ಉಸ್ಮನ್, ಮಹಿಳಾ ಘಟಕದ ಅಧ್ಯಕ್ಷೆ ಸುರಯ್ಯ ಅಬ್ರಹಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಸ್.ಐ.ಮುನೀರ್ ಅಹಮ್ಮದ್, ಗೌರವ ಕಾರ್ಯದರ್ಶಿ ವಿ.ಪಿ.ಸುರೇಶ್, ಸಾಮಾಜಿಕ ಜಾಲ ತಾಣದ ಅಧ್ಯಕ್ಷ ಸುರಾಜ್ ಹೊಸೂರು, ಮಾಜಿ ಸೈನಿಕ ಘಟಕದ ಅಧ್ಯಕ್ಷ ಬೊಳ್ಳಿಯಂಡ ಗಣೇಶ್, ರಾಜೀವ್ ಗಾಂಧಿ ಪಂಚಾಯತ್ ರಾಜ್ ಸಂಘಟನೆಯ ಅಧ್ಯಕ್ಷ ತೆನ್ನಿರಾ ಮೈನಾ, ಎನ್.ಎಸ್.ಯು.ಐ ಅಧ್ಯಕ್ಷ ಕೆ.ಜಿ.ರೋಷನ್, ಮಡಿಕೇರಿ ನಗರ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಫ್ಯಾನ್ಸಿ ಪಾರ್ವತಿ, ನಗರ ಕಾಂಗ್ರೆಸ್ ಉಪಾಧ್ಯಕ್ಷ ಯಾಕುಬ್, ಜಿ.ಪಂ ಮಾಜಿ ಸದಸ್ಯ ಕೆ.ಎಂ.ಬಾಲಕೃಷ್ಣ, ನಗರಸಭಾ ಮಾಜಿ ಸದಸ್ಯ ಪ್ರಕಾಶ್ ಆಚಾರ್ಯ, ಟಿ.ಹೆಚ್.ಉದಯಕುಮಾರ್, ಕೆ.ಎಂ.ವೆಂಕಟೇಶ್, ಡಿಸಿಸಿ ಸದಸ್ಯ ಲಿಯಾಕತ್ ಆಲಿ, ಕಾನೂನು ಘಟಕದ ಅಧ್ಯಕ್ಷ ಶ್ರೀಧರನ್ ನಾಯಕ್, ಪ್ರಮುಖರಾದ ಪಿ.ಎಲ್.ಸುರೇಶ್, ಬೋಪಣ್ಣ, ಎನ್.ಜಿ.ಅಯ್ಯಪ್ಪ, ಕೆಟೋಳಿ ಮೋಹನ್ ರಾಜ್, ನಾಪಂಡ ಗಣೇಶ್, ಪುಲಿಯಂಡ ಜಗದೀಶ್, ಮುನೀರ್ ಮಾಚರ್, ಕೆ.ಯು. ರಜಾಕ್, ಪುಷ್ಪ ಪೂಣಚ್ಚ, ವಿಕಿತ್ ಕುದುಕುಳಿ, ಕೆ.ಎ.ಆನಂದ, ಸೈಮನ್ ಮತ್ತಿತರರು ಪತ್ರಿಭಟನೆಯಲ್ಲಿ ಪಾಲ್ಗೊಂಡಿದ್ದರು.

ರಸ್ತೆಗಳ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ವಿರಾಜಪೇಟೆ, ಏ.10– ಬಿಟ್ಟಂಗಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಗ್ರಾಮೀಣ ಭಾಗದ ರಸ್ತೆಗಳ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರ 1 ಕೋಟಿ 35 ಲಕ್ಷ ರೂ. ಅನುದಾನ ನೀಡಿದೆ ಎಂದು ಶಾಸಕ ಕೆ.ಜಿ.ಬೋಪಯ್ಯ ಹೇಳಿದರು.

ತಾಲೂಕಿನ ಬಿಟ್ಟಂಗಾಲ ಪಂಚಾಯಿತಿ ವ್ಯಾಪ್ತಿಯ ಬ್ಯಾಂಕ್ ರೋಡ್ ಬಳಿಯ ಕಬ್ಬೆಬಾಣೆ ಕಾಲೋನಿಯಿಂದ ಭಗವತಿ ದೇವಸ್ಥಾನ ಸಂಪರ್ಕಿಸುವ, 15 ಲಕ್ಷ ರೂ ವೆಚ್ಚದಲ್ಲಿ ಅಭಿವೃದ್ಧಿಗೊಳಿಸಿರುವ ಕಾಂಕ್ರಿಟ್ ರಸ್ತೆ ಉದ್ಘಾಟಿಸಿ ಅವರು ಮಾತನಾಡಿದರು. ಈ ರಸ್ತೆ ಅಭಿವೃದ್ಧಿ ಪೂರ್ಣಗೊಳಿಸಲು ಇನ್ನು 10 ಲಕ್ಷ ರೂ. ಹೆಚ್ಚು ಅನುದಾನ ನೀಡಲಾಗಿದೆ. ರಸ್ತೆ ಕಾಮಗಾರಿಗಳು ನಡೆಯುವ ಸಂದರ್ಭ ಗ್ರಾಮಸ್ಥರು ಗಮನ ಹರಿಸಬೇಕು. ಈಗಾಗಲೇ ಕೆಲ ರಸ್ತೆಗಳ ಕಾಮಗಾರಿ ನಡೆದಿದ್ದು, ಉಳಿದಿರುವ ಎಲ್ಲಾ ಗ್ರಾಮಗಳ ರಸ್ತೆಗಳನ್ನು ಅಭಿವೃದ್ಧಿಗೊಳಿಸಲಾಗುವುದು ಎಂದ ಬೋಪಯ್ಯ, ನಂತರ ಬಿಟ್ಟಂಗಾಲದ ಶ್ರೀ ಮುತ್ತಪ್ಪ ದೇವಸ್ಥಾನದ ಬಳಿ 5 ಲಕ್ಷ ರೂ. ಅನುದಾನದಲ್ಲಿ ಅಭಿವೃದ್ಧಿಪಡಿಸಲಾದ ಕಾಂಕ್ರಿಟ್ ರಸ್ತೆ ಉದ್ಘಾಟಿಸಿದರು.

ಈ ಸಂದರ್ಭ ಬಿಟ್ಟಂಗಾಲ ಗ್ರಾಪಂ ಅಧ್ಯಕ್ಷೆ ಟಿ.ಆರ್.ರಮ್ಯಾ, ಸದಸ್ಯರಾದ ಬಿ.ಎನ್.ರಮೇಶ್ (ರತನ್), ನಾಣಮಂಡ ಪದ್ಮವತಿ, ಪಿ.ಆರ್.ಶಾರದ, ಮಾಜಿ ಸದಸ್ಯ ಎಂ.ಎಂ.ಬೋಪಯ್ಯ, ಪಿಡಿಓ ಸುರೇಶ್, ಶಕ್ತಿ ಕೇಂದ್ರದ ಕೆ.ಮಂದಣ್ಣ, ಗ್ರಾಮದ ಪಿ.ಆರ್.ದಾಮೋದರ್, ರಾಮಚ್ಚ, ಜಿಪಂ ಮಾಜಿ ಸದಸ್ಯರಾದ ಶಶಿ ಸುಬ್ರಮಣಿ ಮತ್ತು ಎ.ಮಹೇಶ್, ಪಿ.ರಘುನಾಣಯ್ಯ ಮತ್ತಿತರರಿದ್ದರು.

ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ, ಸಾಧಕರಿಗೆ ಸನ್ಮಾನ



ಸೋಮವಾರಪೇಟೆ, ಏ.10–ರೋಟರಿ ಸಂಸ್ಥೆಯಿಂದ ಇಲ್ಲಿನ ಮಹಿಳಾ ಸಮಾಜದ ಸಭಾಂಗಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಮತ್ತು ಸಾಧಕರಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅಧ್ಯಕ್ಷೆ ಜಲಾ ಕಾಳಪ್ಪ, ಮಹಿಳೆಯರ ಸಾಧನೆಯಲ್ಲಿ ಪುರುಷರ ಪಾತ್ರ ಪ್ರಮುಖವಾಗಿದ್ದು, ಅವರ ಸಹಕಾರ ಇಲ್ಲದಿದ್ದಲ್ಲಿ ಸಾಧನೆ ಕಷ್ಟ. ಹಿಂದೆ ಇದ್ದ ಬಂಧನದಿಂದ ಹೊರ ಬಂದಿರುವ ಮಹಿಳೆ, ಪುರುಷರಷ್ಟೇ ಸಾಧನೆ ಮಾಡುತ್ತಿದ್ದಾಳೆ. ಮಗಳಿಗೆ ಶಿಕ್ಷಣ ನೀಡಿದಲ್ಲಿ ಮನೆಯನ್ನು ಸಲಹುವುದರೊಂದಿಗೆ ಸಮಾಜ ಕಟ್ಟುವ ಕೆಲಸ ಮಾಡುತ್ತಾಳೆ. ಸಮಾಜದಲ್ಲಿ ಹಲವು ಸಾಧಕ ಮಹಿಳೆಯರ ಚಿತ್ರ ನಮ್ಮ ಕಣ್ಣ ಮುಂದಿದ್ದು, ಎಲ್ಲರೂ ಅವರ ಆದರ್ಶಗಳನ್ನು ಪಾಲಿಸುವ ಮೂಲಕ ಮಾದರಿಯಾಗಬೇಕು ಎಂದರು. ಉದ್ಯಮಿ ಹಾಗೂ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಹರಪಳ್ಳಿ ರವೀಂದ್ರ ಮಾತನಾಡಿ, ಸಮಾಜ ಸೇವೆಯಲ್ಲಿ ರೋಟರಿ ಸಂಸ್ಥೆ ಬಲಿಷ್ಠವಾಗಿ ಬೆಳೆದಿದ್ದು, ವಿಶ್ವದ ಹಲವು ರಾಷ್ಟ್ರಗಳಲ್ಲಿ ತನ್ನ ನೆರವಿನ ಹಸ್ತವನ್ನು ಚಾಚಿದೆ. ಸಮಾಜದ ಯಾವುದೇ ಕ್ಷೇತ್ರವನ್ನು ನೋಡಿದರೂ, ಅಲ್ಲಿ ಮಹಿಳೆಯರ ಸಾಧನೆಯನ್ನು ಕಾಣಬಹುದು. ಪ್ರೋತ್ಸಾಹ ನೀಡಿದಲ್ಲಿ ಇನ್ನಷ್ಟು ಸಾಧನೆಗೈಯಲು ಸಾಧ್ಯ ಎಂದರು.

ಇದೇ ಸಂದರ್ಭ ಆರೋಗ್ಯ ಕ್ಷೇತ್ರದಲ್ಲಿ ಕಳೆದ 30 ವರ್ಷಗಳಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಹಿರಿಯ ಶುಶ್ರೂಷಕಿಯರಾದ ಬಿ.ಎಂ.ಅನಿತಾ ಹಾಗೂ ಡಿ.ಎಸ್.ಕಮಲಾ, ಸಾಹಿತಿ ಜಲಾ ಕಾಳಪ್ಪ ಹಾಗೂ ಉದ್ಯಮಿ ಹರಪಳ್ಳಿ ರವೀಂದ್ರ ಅವರು ಸನ್ಮಾನಿಸಲಾಯಿತು. ವೇದಿಕೆಯಲ್ಲಿ ರೋಟರಿ ಸಂಸ್ಥೆಯ ಅಧ್ಯಕ್ಷ ಎಂ.ಎಂ.ಪ್ರಕಾಶ್‌ಕುಮಾರ್, ಕಾರ್ಯದರ್ಶಿ ಡಿ.ಪಿ.ಧರ್ಮಪ್ಪ ಇದ್ದರು.

ಗುಡ್ಡೆಮನೆ ಮಣಿಕುಮಾರ್ ನಿಧನ



ಕುಶಾಲನಗರ, ಏ.10– ಸಮೀಪದ ಗುಡ್ಡೆಹೊಸೂರು ಬೊಳ್ಳೂರು ಗ್ರಾಮದ ನಿವಾಸಿ ದಿವಂಗತ ಗುಡ್ಡೆಮನೆ ಮಂದಣ್ಣ ಅವರ ಪುತ್ರ ಜಿ.ಎಂ.ಮಣಿಕುಮಾರ್(70) ಶನಿವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕಿಯೆ ಮೃತರ ಸ್ವಗ್ರಾಮದಲ್ಲಿ ಭಾನುವಾರ ಮಧ್ಯಾಹ್ನ ನೆರವೇರಿತು. ದಿ.ಮಣಿಕುಮಾರ್ ಅವರ ಭಾವಮೈದ ಕೇಂದ್ರದ ಮಾಜಿ ಸಚಿವರೂ ಆದ ಸಂಸದ ಡಿ.ವಿ.ಸದಾನಂದ ಗೌಡ ಹಾಗೂ ಶಾಸಕರಾದ ಎಂ.ಪಿ.ಅಪ್ಪಚ್ಚುರಂಜನ್, ಕೆ.ಜಿ.ಬೋಪಯ್ಯ ಮೃತರ ನಿವಾಸಕ್ಕೆ ಭೇಟಿ ನೀಡಿ, ಅಂತಿಮ ದರ್ಶನ ಪಡೆದರು.

ಎಸ್.ಸಿದ್ದಪ್ಪ



ಕುಶಾಲನಗರ: ತಾಲೂಕಿನ ತೊರೆನೂರು ಗ್ರಾಮದ ಕಾಡುಹೊಲದಲ್ಲಿ ನೆಲೆಸಿದ್ದ ಹಿರಿಯ ಕೃಷಿಕ ಎಸ್.ಸಿದ್ದಪ್ಪ(96) ಭಾನುವಾರ ಮಧ್ಯಾಹ್ನ ಸ್ವಗೃಹದಲ್ಲಿ ನಿಧನರಾದರು. ಮೃತರು ಮೈಸೂರು ಆಯುಷ್ ಆಸ್ಪತ್ರೆಯ ಕಾರ್ಯದರ್ಶಿಯಾಗಿದ್ದ ಟಿ.ಎಸ್.ಸಿದ್ದಲಿಂಗಪ್ಪ ಸೇರಿದಂತೆ ನಾಲ್ವರು ಪುತ್ರರು ಹಾಗೂ ನಾಲ್ವರು ಪುತ್ರಿಯರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ಮಧ್ಯಾಹ್ನ ಮೃತರ ಸ್ವ ಗ್ರಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರಿಗೆ ವೀರಶೈವ ಸಮಾಜ ಮುಖಂಡರು ಸಂತಾಪ ಸೂಚಿಸಿದ್ದಾರೆ.

ಕಿಸಾನ್ ಸಮ್ಮಾನ್ ನಿಧಿ ಯೋಜನೆ ಅವಧಿ ವಿಸ್ತರಣೆ

ಸೋಮವಾರಪೇಟೆ, ಏ.10–ಸೀಮಿತ ಕೃಷಿ ಭೂಮಿ ಹೊಂದಿರುವ ರೈತರಿಗೆ ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯ ಅವಧಿಯನ್ನು ವಿಸ್ತರಿಸಲಾಗಿದ್ದು, ಇದರ ಪ್ರಯೋಜನವನ್ನು ರೈತರು ಪಡೆದುಕೊಳ್ಳಬೇಕು ಎಂದು ಬಿಜೆಪಿ ಪಕ್ಷದ ಜಿಲ್ಲಾ ಸಹ ವಕ್ತಾರ ಬಿ.ಜೆ.ದೀಪಕ್ ತಿಳಿಸಿದ್ದಾರೆ.

ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2018ರ ಡಿಸೆಂಬರ್‌ನಲ್ಲಿ ಪ್ರಾರಂಭಗೊಂಡ ಕೇಂದ್ರ ಸರ್ಕಾರದ ಈ ಯೋಜನೆಯಡಿಯಲ್ಲಿ ಅರ್ಹ ರೈತರಿಗೆ 10 ಕಂತುಗಳನ್ನು ಯಶಸ್ವಿಯಾಗಿ ವರ್ಗಾಯಿಸಲಾಗಿದೆ. ಈ ಯೋಜನೆಯ 11 ನೇ ಕಂತುಗಳ ದಿನಾಂಕವನ್ನು ಇನ್ನೂ ನಿರ್ಧರಿಸಲಾಗಿಲ್ಲ. ಏಪ್ರಿಲ್ 2022ರ ಒಳಗೆ ಯಾವುದೇ ಸಮಯದಲ್ಲಿ ರೈತರ ಖಾತೆಯಲ್ಲಿ ಕಂತನ್ನು ಜಮಾ ಮಾಡಬಹುದು ಎಂದರು. ಇದೀಗ ಪ್ರಧಾನಮಂತ್ರಿ ಕಿಸಾನ್ ಯೋಜನೆಯೊಂದಿಗೆ ಆಧಾರ್ ಕಾರ್ಡ್‌ಗೆ ಲಿಂಕ್ ಮಾಡಲು ಮೇ 31 ಕೊನೆಯ ದಿನಾಂಕವಾಗಿದೆ. ರೈತರು ಸಮೀಪದ ಸಿಎಸ್‌ಸಿ ಕೇಂದ್ರಕ್ಕೆ ಭೇಟಿ, ಬಯೋಮೆಟ್ರಿಕ್ ಆಧಾರಿತ ದೃಢೀಕರಣವನ್ನು ಪೂರ್ಣಗೊಳಿಸಬೇಕಾಗಿದೆ ಎಂದು ಕೋರಿದರು. ಗೋಷ್ಠಿಯಲ್ಲಿ ಕಿರಗಂದೂರು ಗ್ರಾಮ ಪಂಚಾಯಿತಿ ಅಧ್ಯಕ್ಷ ಎಸ್.ಕೆ.ರಘು, ಕೃಷಿಕ ಸಮಾಜದ ತಾಲೂಕು ಅಧ್ಯಕ್ಷ ಎಸ್.ಪಿ.ಪೊನ್ನಪ್ಪ, ಪಕ್ಷದ ಪ್ರಮುಖರಾದ ಎ.ಎಂ.ಬೋಪಯ್ಯ ಉಪಸ್ಥಿತರಿದ್ದರು.

ಏ.17ಕ್ಕೆ ಜೈ ಜವಾನ್ ಮಾಜಿ ಸೈನಿಕರ ಸಂಘದ ಸಂತೋಷ ಕೂಟ

ಸೋಮವಾರಪೇಟೆ, ಏ.10–ಜೈ ಜವಾನ್ ಮಾಜಿ ಸೈನಿಕರ ಸಂಘದ 8ನೇ ವರ್ಷದ ಸಂತೋಷ ಕೂಟ ಇಲ್ಲಿನ ಕೊಡವ ಸಮಾಜದ ಸಭಾಂಗಣದಲ್ಲಿ ಏ.17ರಂದು ಬೆಳಗ್ಗೆ 10.30ಕ್ಕೆ ನಡೆಯಲಿದೆ ಎಂದು ಸಂಘದ ಪ್ರಧಾನ ಕಾರ್ಯದರ್ಶಿ ಆರ್.ಜಿ.ಬಸಪ್ಪ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿವೃತ್ತ ಕರ್ನಲ್ ಬಿ.ಕೆ.ಅಣ್ಣಯ್ಯ ಹಾಗೂ ನಿವೃತ್ತ ಮೇಜರ್ ಎಂ.ಕೆ.ಮಂದಪ್ಪ ಸಮಾರಂಭದ ಉದ್ಘಾಟಿಸಲಿದ್ದಾರೆ. ಸಂಘದ ಅಧ್ಯಕ್ಷ ಬಿ.ಆರ್.ಈರಪ್ಪ ಅಧ್ಯಕ್ಷತೆ ವಹಿಸಲಿದ್ದಾರೆ. ಇದೇ ಸಂದರ್ಭ ಸಂಘದ ಸದಸ್ಯರಾದ ಎನ್.ಯು. ಚಂದ್ರಕುಮಾರ್, ಹೆಚ್.ಓ.ಬೋಪಯ್ಯ, ಎನ್.ಟಿ.ಪುಟ್ಟಪ್ಪ, ಡಿ.ಎನ್.ಬೋಜಮ್ಮ ಹಾಗೂ ಎಂ.ಡಿ.ಸೀತಮ್ಮ ಅವರನ್ನು ಸನ್ಮಾನಿಸಲಾಗುವುದು. ಎಸ್‌ಎಸ್‌ಎಲ್‌ಸಿ, ಪಿಯುನಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ಸದಸ್ಯರ ಮಕ್ಕಳಿಗೆ ಬಹುಮಾನ ನೀಡಲಾಗುವುದು. ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು ಏ.11ರೊಳಗೆ ಸಂಘದ ಕಚೇರಿಗೆ ಅಂಕಪಟ್ಟಿ ತಲುಪಿಸುವಂತೆ ಮನವಿ ಮಾಡಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ.9483332934 ಸಂಪರ್ಕಿಸಲು ಕೋರಲಾಗಿದೆ.

12ನೇ ರಾಷ್ಟ್ರೀಯ ಪುರುಷರ ಹಾಕಿ ಟೂರ್ನಿ

ರಾಜ್ಯ ತಂಡ ಕ್ವಾರ್ಟರ್ ಫೈನಲ್ ಪ್ರವೇಶ



ಗೋಣಿಕೊಪ್ಪ, ಏ.10– ಮಧ್ಯಪ್ರದೇಶದ ಭೂಪಾಲ್‌ನಲ್ಲಿರುವ ಧ್ಯಾನ್‌ಚಂದ್ ಮೈದಾನದಲ್ಲಿ ಹಾಕಿ ಇಂಡಿಯಾದಿಂದ ನಡೆಯುತ್ತಿರುವ 12ನೇ ರಾಷ್ಟ್ರೀಯ ಪುರುಷರ ಹಾಕಿ ಟೂರ್ನಿಯಲ್ಲಿ ಜಿಲ್ಲೆಯ ಆಟಗಾರರನ್ನೊಳಗೊಂಡ ಕರ್ನಾಟಕ ರಾಜ್ಯ ತಂಡ ಕ್ವಾರ್ಟರ್ ಫೈನಲ್ ಪ್ರವೇಶ ಪಡೆದಿದೆ.

ಭಾನುವಾರ ನಡೆದ ತಂಡದ 2ನೇ ಪಂದ್ಯದಲ್ಲಿ ಆಂಧ್ರಪ್ರದೇಶ ತಂಡವನ್ನು 13–0 ಗೋಲುಗಳಿಂದ ಮಣಿಸಿತು. ಬೊಳ್ಳಪಂಡ ಪಿ.ಸೋಮಣ್ಣ, ಮೂರು ಗೋಲು ಹೊಡೆದು ಮಿಂಚು ಹರಿಸಿದರು. ಐನಂಡ ಆರ್.ನಾಚಪ್ಪ, ಹರೀಶ್ ಮುಗ್ದಲ್, ಬಿದ್ದಾಟಂಡ ಚೆಲ್ಸಿ ಮೇದಪ್ಪ, ಯತೀಶ್ ತಲಾ 2 ಗೋಲು ಹೊಡೆದು ಜೋಡಿ ಗೋಲು ಸರದಾರರು ಎನಿಸಿದರು. ಸೂರ್ಯ, ಪ್ರಣಬ್‌ಗೌಡ ತಲಾ ಒಂದೊಂದು ಗೋಲು ಹೊಡೆದು ಗೆಲುವಿನ ಅಂತರ ಹೆಚ್ಚಿಸಿದರು. ಟೂರ್ನಿಯ ಮೊದಲ ಪಂದ್ಯದಲ್ಲಿ ಉತ್ತರಾಖಂಡ ತಂಡವನ್ನು 9–1 ಗೋಲುಗಳಿಂದ ಸೋಲಿಸಿ ಶುಭಾ ರಂಭ ಮಾಡಿರುವ ರಾಜ್ಯ ತಂಡ ಇದೀಗ ಟೂರ್ನಿಯಲ್ಲಿ 2ನೇ ಗೆಲುವು ದಾಖಲಿಸಿದೆ. ಏ.14ರಂದು ಕ್ವಾರ್ಟರ್ ಫೈನಲ್ ಆಡಲಿದೆ.

ರಾಜ್ಯ ತಂಡದ 18 ಆಟಗಾರರಲ್ಲಿ ಕೊಡಗು ಜಿಲ್ಲೆಯ 12 ಅಟಗಾರರು ತಂಡದಲ್ಲಿದ್ದು, ಕುಂದೀರ ಪಿ.ಶರತ್ ಸೋಮಣ್ಣ ಗೋಲ್ ಕೀಪರ್ ಸ್ಥಾನ ನಿರ್ವಹಣೆ ಜವಾಬ್ದಾರಿ ಹೊತ್ತಿದ್ದಾರೆ. ಉಳಿದಂತೆ ಮುಕ್ಕಾಟೀರ ಆರ್.ಮುತ್ತಣ್ಣ, ಬಿ.ಎಂ.ಲಿಖಿತ್, ಬೊಳ್ಳ ಪಂಡ ಪಿ.ಸೋಮಣ್ಣ, ಜೆ.ಪಿ.ಕುಶ, ನಾಯಮಾಡ ಚಿರಂತ್ ಸೋಮಣ್ಣ, ಐನಂಡ ಆರ್.ನಾಚಪ್ಪ, ಸಿ.ಎಸ್. ಶಮಂತ್, ಬಿದ್ದಾಟಂಡ ಚೆಲ್ಸಿ ಮೇದಪ್ಪ, ಯತೀಶ್ ಕುಮಾರ್, ಸೂರ್ಯ, ದೀಕ್ಷಿತ್, ತರಬೇತುದಾರರಾಗಿ ಕೂತಂಡ ಕೆ.ಪೂಣಚ್ಚ, ವ್ಯವಸ್ಥಾಪಕರಾಗಿ ಕರ್ತಮಾಡ ನಿಖಿ ಗಣಪತಿ ಇದ್ದಾರೆ.

ಮೂರು ದಿನಗಳ ಕರ್ನಾಟಕ ಪಕ್ಷಿ ಹಬ್ಬಕ್ಕೆ ತೆರೆ

ಅಪರೂಪದ ಪಕ್ಷಿಗಳನ್ನು ವೀಕ್ಷಿಸಿದ ಪರಿಸರಪ್ರಿಯರು



ಮಡಿಕೇರಿ, ಏ.10– ಮಡಿಕೇರಿ ನಗರ ಮತ್ತು ಸುತ್ತಲಿನ ಪ್ರದೇಶದಲ್ಲಿ ಮೂರು ದಿನಗಳ ಕಾಲ ಆಯೋಜಿಸಲಾಗಿದ್ದ ಕರ್ನಾಟಕ ಪಕ್ಷಿ ಹಬ್ಬ-2022ಕ್ಕೆ ಭಾನುವಾರ ತೆರೆಬಿದ್ದಿತು.

ಮಡಿಕೇರಿ ನಗರ ಮತ್ತು ಸುತ್ತಲಿನ ಆಯ್ದ ಜಾಗಗಳಲ್ಲಿ ಪಕ್ಷಿ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು. ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ 8 ಜಾಗಗಳನ್ನು ಗುರುತಿಸಿ ಪಕ್ಷಿ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಗಿತ್ತು ಮಡಿಕೇರಿ ಅರಣ್ಯ ಭವನ ಪ್ರದೇಶ, ಗಾಳಿಬೀಡು, ನಿಶಾನೆ ಬೆಟ್ಟ, ಮೊಣ್ಣಂಗೇರಿ, ಬೊಟ್ಟಪ್ಪ ದೇವಸ್ಥಾನದ ಸರಹದ್ದು ಸೇರಿದಂತೆ ಸುತ್ತಲಿನ ಸ್ಥಳಗಳಲ್ಲಿ ಪಕ್ಷಿ ಪ್ರಿಯರು ಪಶ್ಚಿಮಘಟ್ಟ ಪ್ರದೇಶದ ಅಪರೂಪದ ಪಕ್ಷಿಗಳನ್ನು ವೀಕ್ಷಿಸಿ ಸಂತಸಪಟ್ಟರು.

ಭಾನುವಾರ ಪಕ್ಷಿ ವೀಕ್ಷಣೆಯಲ್ಲಿ ಜಿಪಂ ಸಿಇಓ ಭಂವರ್‌ಸಿಂಗ್ ಮೀನಾ, ಮಡಿಕೇರಿ ಅರಣ್ಯ ವಿಭಾಗದ ಉಪ ಸಂರಕ್ಷಣಾಧಿಕಾರಿ ಎ.ಟಿ.ಪೂವಯ್ಯ, ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ಶಿವರಾಮ್ ಬಾಬು, ಕರ್ನಾಟಕ ಪರಿಸರ ಪ್ರವಾಸೋದ್ಯಮ ವ್ಯವಸ್ಥಾಪಕ ನಿರ್ದೇಶಕ ತಡಗಣಿ ವಿ.ಗಣೇಶ್, ಕಾರ್ಯನಿರ್ವಾಹಕ ಸಹಾಯಕಿ ವನಶ್ರೀ, ರಾಷ್ಟ್ರೀಯ ಹಸಿರುಪಡೆ, ಇಕೋ ಕ್ಲಬ್ ಘಟಕದ ಕೊಡಗು ಜಿಲ್ಲಾ ನೋಡಲ್ ಅಧಿಕಾರಿ ಟಿ.ಜಿ.ಪ್ರೇಮಕುಮಾರ್ ಸೇರಿದಂತೆ ಅರಣ್ಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿ ಪಾಲ್ಗೊಂಡಿದ್ದರು.

ಪ್ರಮುಖವಾಗಿ ಹುಲಿ ಕೇಂದ್ರಿತ ವನ್ಯಜೀವಿ ಸಫಾರಿ ಮತ್ತು ಪ್ರವಾಸೋದ್ಯಮದಿಂದ ನವ ತಲೆಮಾರಿನ ವನ್ಯಜೀವಿ ಪ್ರೇಮಿಗಳನ್ನು ಪಕ್ಷಿಗಳ ಸುಂದರ ಲೋಕದ ಕಡೆಗೆ ತರುವ ಉದ್ದೇಶದಿಂದ ಹಕ್ಕಿಹಬ್ಬ ಕಾರ್ಯಕ್ರಮ ಆಯೋಜಿಸಲಾಗಿತ್ತು ಎಂದು ಮಡಿಕೇರಿ ಅರಣ್ಯ ವಿಭಾಗದ ಉಪ ಸಂರಕ್ಷಣಾಧಿಕಾರಿ ಎ.ಟಿ.ಪೂವಯ್ಯ ತಿಳಿಸಿದರು.

ಪ್ರತಿ ವರ್ಷವೂ ರಾಜ್ಯದ ಬೇರೆಬೇರೆ ಸ್ಥಳಗಳಲ್ಲಿ ಹಕ್ಕಿ ಹಬ್ಬ ಆಚರಿಸಿಕೊಂಡು ಬರಲಾಗುತ್ತಿದೆ. ಸ್ಥಳದ ಆಯ್ಕೆ ಸಂದರ್ಭ ವಿಭಿನ್ನ ಭೌಗೋಳಿಕ ಪ್ರದೇಶ, ಜೈವಿಕ ವೈವಿಧ್ಯತೆ, ಬಗೆಬಗೆಯ ಪಕ್ಷಿಗಳು ಇರುವ ಸ್ಥಳಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ. ಮಡಿಕೇರಿ ಪಕ್ಷಿ ಹಬ್ಬದಲ್ಲಿ ಪ್ರತಿ ಗುಂಪಿನವರು 60ಕ್ಕೂ ಹೆಚ್ಚಿನ ವಿವಿಧ ಬಗೆಯ ಪಕ್ಷಿಗಳನ್ನು ಗುರುತಿಸಿ ವೀಕ್ಷಿಸಿದ್ದಾರೆ. ಪ್ರತಿ ವರ್ಷ ಪಕ್ಷಿ ಹಬ್ಬದಲ್ಲಿ ವಿಶೇಷ ಪಕ್ಷಿಯೊಂದರ ಮೇಲೆ ಗಮನ ಕೇಂದ್ರೀಕರಿಸಲಾಗುತ್ತದೆ. ಈ ಬಾರಿ ಬಾಜಾ ಪಕ್ಷಿಯನ್ನು ಗುರುತಿಸಲಾಗಿತ್ತು ಎಂದು ಡಿಎಫ್‌ಓ ಪೂವಯ್ಯ ತಿಳಿಸಿದರು. ಮೂರು ದಿನಗಳ ಕಾಲ ನಡೆದ ಹಕ್ಕಿ ಹಬ್ಬದಲ್ಲಿ ನಾಡಿನ ವಿವಿಧ ಕಡೆಗಳಿಂದ ಪಕ್ಷಿ ತಜ್ಞರು, ಪಕ್ಷಿ ವೀಕ್ಷಕರು ಹಾಗೂ ಪರಿಸರ ಪ್ರೇಮಿಗಳು ಭಾಗವಹಿಸುವ ಮೂಲಕ ಪಕ್ಷಿಗಳ ಜೀವನ ಕ್ರಮದ ಬಗ್ಗೆ ಅಧ್ಯಯನ ನಡೆಸಿದ್ದಾರೆ. ಈ ಹಕ್ಕಿ ಹಬ್ಬವು ಪಶ್ಚಿಮ ಘಟ್ಟದ ವನ್ಯಜೀವಿಗಳ ಅಧ್ಯಯನಕ್ಕೆ ಉತ್ತಮ ಅವಕಾಶ ಕಲ್ಪಿಸಿದೆ ಎಂದು ವನ್ಯಜೀವಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎಂ.ಶಿವರಾಮ್ ಬಾಬು ತಿಳಿಸಿದರು.

ನಿಸರ್ಗ ತಜ್ಞರಾದ ಪ್ರವಾಸೋದ್ಯಮ ಇಲಾಖೆಯ ರಾಹುಲ್ ಆರಾಧ್ಯ, ನಾಗರಾಜ್, ವಿಜಯ್ ಇತರರು ಪಕ್ಷಿಪ್ರಿಯರಿಗೆ ಪಕ್ಷಿಗಳ ಚಲನವನ ಹಾಗೂ ಅವುಗಳ ಆವಾಸ ಸ್ಥಾನದ ಬಗ್ಗೆ ಪೂರಕ ಮಾಹಿತಿ ನೀಡಿದರು.

ಹಕ್ಕಿಹಬ್ಬ ಕಾರ್ಯಕ್ರಮದಲ್ಲಿ ಪಕ್ಷಿಗಳ ಜೀವನ ಕ್ರಮ ಹಾಗೂ ಜೀವ ಪರಿಸರ ಸಂರಕ್ಷಣೆ ಕುರಿತು ಪಕ್ಷಿ ತಜ್ಞ ಡಾ.ಎಸ್.ವಿ.ನರಸಿಂಹನ್, ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ಡೀನ್ ಡಾ.ಸಿ.ಜಿ.ಕುಶಾಲಪ್ಪ ಸೇರಿದಂತೆ ವಿವಿಧ ತಜ್ಞರಿಂದ ಉಪನ್ಯಾಸದೊಂದಿಗೆ ಸಂವಾದ ಕಾರ್ಯಕ್ರಮ ನಡೆಸಿಕೊಡಲಾಯಿತು. ಹಕ್ಕಿಹಬ್ಬದಲ್ಲಿ ಹಕ್ಕಿಗಳ ವೀಕ್ಷಣೆಗೆ ಅವಕಾಶ ನೀಡಲಾಗಿತ್ತು. ಇದರಲ್ಲಿ ದೇಶದ ವಿವಿಧ ಭಾಗಗಳಿಂದ ಸಂಶೋಧಕರು, ವನ್ಯಜೀವಿ ಛಾಯಾಗ್ರಾಹಕರು, ಪೊನ್ನಂಪೇಟೆ ಅರಣ್ಯ ಮಹಾವಿದ್ಯಾಲಯದ ಶಿಕ್ಷಣಾರ್ಥಿಗಳು ಸೇರಿದಂತೆ ಪಕ್ಷಿ ವೀಕ್ಷಕರು, ಪಕ್ಷಿ ಪ್ರಿಯರು ಭಾಗವಹಿಸಿದ್ದರು.

ಮೈಸೂರು ಮಿತ್ರ ವಿಳಾಸ: ನಂದಿನಿ ಗ್ರಾಫಿಕ್ಸ್, ಸಿ.ಹೆಚ್.ಆರ್ ಕಾಂಪ್ಲೆಕ್ಸ್, ಜೋಡಿ ರಸ್ತೆ, ಚಾಮರಾಜನಗರ-571313. ಫ್ಯಾಕ್ಸ್: 08226-222608, ಮೊ. 9242265657 E-mail: chamarajanagar@mysurumithra.com



'ಅನ್ನಭಾಗ್ಯ'ಕ್ಕಿಲ್ಲ ಕಣ್ಗಾವಲು! ಬಡವರ ಅಕ್ಕಿ ಅನ್ಯರ ಪಾಲು

- ಕೊಳ್ಳೇಗಾಲ ತಾಲೂಕಿನಲ್ಲಿ ಅವಿರತವಾಗಿ ನಡೆಯುತ್ತಿದೆ 'ಅನ್ನಭಾಗ್ಯ' ಯೋಜನೆಯ ದುರ್ಬಳಕೆ
- ಮರಣ ಹೊಂದಿದವರ ಹೆಸರಿನ ಪಡಿತರ ದೋಖಾ: ಆಹಾರ ಇಲಾಖೆ ಅಧಿಕಾರಿಗಳಿಂದಲೇ ಅಕ್ರಮ


ವರದಿ: ನಾಗೇಂದ್ರಸ್ವಾಮಿ

ಕೊಳ್ಳೇಗಾಲ, ಏ.10– ಹಸಿದವರಿಗೆ ಅನ್ನ ನೀಡುವ ಮಹತ್ವಾಕಾಂಕ್ಷಿ 'ಅನ್ನಭಾಗ್ಯ' ಯೋಜನೆಯಲ್ಲಿ ಅಕ್ರಮ ನಡೆಯುತ್ತಿದ್ದು, ಆಹಾರ ಇಲಾಖೆ ಅಧಿಕಾರಿಗಳೇ ಇದರಲ್ಲಿ ಶಾಮೀಲಾಗಿರುವುದು ವಿಪರ್ಯಾಸವಾಗಿದೆ.

ಮರಣ ಹೊಂದಿದಂತಹ ಫಲಾನುಭವಿಯ ಪಡಿತರವನ್ನು ಇಲಾಖೆಯ ಅಧಿಕಾರಿಗಳು ಹಾಗೂ ಇತರರು ಪಡೆದು ಅಕ್ರಮವೆಸಗುತ್ತಿರುವುದು ಬಯಲಾಗಿದೆ.

ಮೃತ ಶಿವನಂಜಯ್ಯ ಅಂತ್ಯೋದಯ ಕಾರ್ಡ್ ಫಲಾನುಭವಿ. ಹಾಗಾಗಿ ಅವರಿಗೆ 40ಕೆ.ಜಿ. ಅಕ್ಕಿ ವಿತರಿಸಲಾಗಿದೆ. ಮೃತ ಮನಿಯಮ್ಮ ಅವರಿಗೂ 10ಕೆ.ಜಿ. ಅಕ್ಕಿ 2ಕೆ.ಜಿ. ಗೋಧಿ ವಿತರಿಸಲಾಗಿದೆ ಕೋವಿಡ್‌ನಿಂದ ಸಾವಿಗೀಡಾದ ಸಬೀನಾ ಅವರಿಗೆ 20 ಕೆ.ಜಿ. ಪಡಿತರ ಅಕ್ಕಿ ಹಾಗೂ 2 ಕೆ.ಜಿ. ಗೋಧಿಯನ್ನು ವಿತರಿಸಲಾಗಿದೆ. ಹಾಗಾದರೇ, ಈ ಅಕ್ಕಿಯನ್ನು ಮೃತಪಟ್ಟ ಫಲಾನುಭವಿ ಕುಟುಂಬಕ್ಕೆ ನೀಡಿದರಾ ಎಂದು ಪರಿಶೀಲಿಸಿದರೇ ಅದು ಕೂಡ ಇಲ್ಲ. ಮೃತಪಟ್ಟಿದ್ದರಿಂದ ಇವರ ಹೆಸರಿನಲ್ಲಿ ಪಡಿತರ ನೀಡಲು ಸಾಧ್ಯವಿಲ್ಲವೆಂದು ಕುಟುಂಬದವರಿಗೆ ಜವಾಬೂ ಹೇಳಿ ಕಳುಹಿಸಿದ್ದಾರೆ.

ಆದರೆ, ಇಲಾಖೆ ವೆಬ್‌ಸೈಟ್‌ನಲ್ಲಿ ಮರಣ ಹೊಂದಿದ ಇವರೆಲ್ಲರಿಗೂ ಮಾರ್ಚ್ 31ರಂದು ಬೆಳಗ್ಗೆ 10 ಗಂಟೆಯಿಂದ 11.05 ರತನಕ ಆಹಾರ ಇಲಾಖೆ ನಿರೀಕ್ಷಕರ ಲಾಗಿನ್‌ನಿಂದಲೇ ಪಡಿತರ ವಿತರಿಸಿದಂತೆ ತೋರಿಸಲಾಗಿದೆ. ಹೌದು ಇಂತಹ ಘಟನೆ ತಾಲೂಕಿನ ಹೊಂಡರಬಾಳು ಗ್ರಾಮದಲ್ಲಿ ನಡೆದಿದ್ದು, 2-3 ವರ್ಷದ ಹಿಂದೆ ಸಾವಿಗೀಡಾದವರು, ಗ್ರಾಮ ತೊರೆದವರು, ವೃದ್ಧಾಶ್ರಮದಲ್ಲಿರುವವರಿಗೂ ಸಹಾ ಆಹಾರ ಇಲಾಖೆಯ ಅಧಿಕಾರಿಗಳು ತಮ್ಮ ಲಾಗಿನ್ ಮೂಲಕ ಪಡಿತರ ಅಕ್ಕಿ ವಿತರಿಸುವ ಮೂಲಕ ವಿವಾದಕ್ಕೀಡಾಗಿದ್ದಾರೆ.



ಸೈಯದ್ ನೂರ್ ಅವರು, ನನ್ನ ಪತ್ನಿ ಸಬೀನಾ ಹೆಸರಲ್ಲಿ ರೇಷನ್ ಪಡೆಯುತ್ತಿಲ್ಲ ಎಂದು ಕಾರ್ಡ್ ಪ್ರದರ್ಶಿಸುತ್ತಿರುವುದು.

ಹೊಂಡರಬಾಳು ಗ್ರಾಮದ ನಿವಾಸಿ ಶಿವಲಿಂಗಯ್ಯ 3 ವರ್ಷದ ಹಿಂದೆಯೇ ನಿಧನರಾಗಿದ್ದಾರೆ, ಮನಿಯಮ್ಮ 4 ತಿಂಗಳ ಹಿಂದೆ ನಿಧನರಾಗಿದ್ದಾರೆ, ವರ್ಷದ ಹಿಂದೆ ಕೋವಿಡ್‌ನಿಂದಾಗಿ ನೂರ್ ಅಹಮ್ಮದ್ ಅವರ ಪತ್ನಿ ಸಬೀನಾ ಅವರು ನಿಧನರಾಗಿದ್ದಾರೆ. ಇವರುಗಳೆಲ್ಲರಿಗೂ

"ಮರಣ ಹೊಂದಿದವರಿಗೆ, ಗ್ರಾಮ ತೊರೆದವರು, ವೃದ್ಧಾಶ್ರಮದಲ್ಲಿ ಇರುವವರಿಗೆ ರೇಷನ್ ವಿತರಣೆಯಾಗಿರುವುದು ನನ್ನ ಗಮನಕ್ಕೆ ಬಂದಿಲ್ಲ. ಈ ರೀತಿ ಮರಣ ಹೊಂದಿದವರಿಗೆ ಆಹಾರ ನಿರೀಕ್ಷಕರ ಲಾಗಿನ್ ಮೂಲಕ ರೇಷನ್ ವಿತರಣೆ ಅಕ್ಷಮ್ಯ ಅಪರಾಧ. ಈ ಬೆಳವಣಿಗೆಗೆ ಕಾರಣರಾದವರ ವಿರುದ್ಧ ಪರಿಶೀಲಿಸಿ ಕ್ರಮ ಜರುಗಿಸಲಾಗುವುದು.

-ಯೋಗಾನಂದ, ನಿರ್ದೇಶಕರು, ಆಹಾರ ಇಲಾಖೆ, ಚಾಮರಾಜನಗರ.

"ಗ್ರಾಮದಲ್ಲಿ ಇಲ್ಲದವರಿಗೆ, ನಿಧನರಾದವರಿಗೆ ರೇಷನ್ ವಿತರಿಸಿಲ್ಲ. ಒಂದು ವೇಳೆ ಎಲ್ಲೊ ಸಣ್ಣ, ಪುಟ್ಟ ತಪ್ಪಾಗಿರಬಹುದು. ಇದನ್ನೆಲ್ಲಾ ದೊಡ್ಡದು ಮಾಡಿ ನನಗೆ ತೊಂದರೆ ನೀಡಬೇಡಿ.

-ಬಿಸಿಲಯ್ಯ, ಆಹಾರ ನಿರೀಕ್ಷಕ, ಕೊಳ್ಳೇಗಾಲ- ಯಳಂದೂರು ತಾಲೂಕು.

ಆಹಾರ ಇಲಾಖೆಯ ನಿರೀಕ್ಷಕರಾದ ಬಿಸಿಲಯ್ಯ ಅವರೇ ತಮ್ಮ ಲಾಗಿನ್ ಬಳಸುವ ಮೂಲಕ ಪಡಿತರ ದುರ್ಬಳಕೆಗೆ ಹಾಗೂ ಅಕ್ರಮಕ್ಕೆ ಸಾಥ್ ನೀಡಿದಂತಾಗಿದೆ.

ಕಾರ್ಡ್ ಸಂಖ್ಯೆ 580300225229ರ ಫಲಾನುಭವಿ ಸಿದ್ದಪ್ಪಸ್ವಾಮಿ ಅವರು ತುಮಕೂರಿನಲ್ಲಿ ಮಕ್ಕಳ ಜೊತೆ ವಾಸವಿದ್ದಾರೆ. ಅವರು ಸಹಾ ಪಡಿತರ ಪಡೆದಿಲ್ಲ. ಕಾರ್ಡ್ ಸಂಖ್ಯೆ 580300235024ರ ಫಲಾನುಭವಿ ಬೇಗಂ ಅವರು ತಮ್ಮ ಮಗನ ಮನೆ ಚೆನ್ನೈಗೆ ತೆರಳಿ 2 ತಿಂಗಳಾಗಿದೆ. ಅವರು ಸಹಾ ರೇಷನ್ ಪಡೆದಿಲ್ಲ. ಅದೇ ರೀತಿಯಲ್ಲಿ ವಿಜಯಾಂಬ ಕಾರ್ಡ್ ಸಂಖ್ಯೆ 580300222410 ಅವರು ಸಹಾ ರೇಷನ್ ಪಡೆದಿಲ್ಲ. ಕಾರ್ಡ್ ಸಂಖ್ಯೆ 580300156605 ಫಲಾನುಭವಿ ಲಲಿತಮ್ಮ ಇವರು ಹೊಂಡರಬಾಳು ಗ್ರಾಮದಲ್ಲಿಲ್ಲ, ಅವರು ಕೌದಳ್ಳಿಯ ವೃದ್ಧಾ ಶ್ರಮ ಸೇರಿ 2 ವರ್ಷಗಳೇ ಕಳೆದಿದೆ.

ರಿಯಾಲಿಟಿ ಚೆಕ್

- ಹೊಂಡರಬಾಳು ಗ್ರಾಮದ ಸಬೀನಾ ಅವರ ಕಾರ್ಡ್ ಸಂಖ್ಯೆ 580300238309ರಲ್ಲಿ ಅವರಿಗೆ ಆಹಾರ ನೀಡಿದಂತೆ ಲಾಗಿನ್ ಮೂಲಕ ಅಕ್ರಮ ಎಸಲಾಗಿದೆ. ಅಸಲಿಗೆ ಸಬೀನಾ ಅವರು ಕೋವಿಡ್‌ನಿಂದಾಗಿ ಮರಣ ಹೊಂದಿ ವರ್ಷವೇ ಕಳೆದಿದೆ. ಸಬೀನಾ ಅವರ ಪತಿಯೇ ಹೇಳುವ ಪ್ರಕಾರ ನನ್ನ ಪತ್ನಿ ನಿಧನರಾದ್ದರಿಂದ ರೇಷನ್ ನೀಡಲು ಸಾಧ್ಯವಿಲ್ಲ ಎಂದು ಸಂಬಂಧಿಸಿದವರು ಹೇಳಿದ್ದಾರೆ. ನಾವು ಸಹಾ ರೇಷನ್ ಕೇಳುತ್ತಿಲ್ಲ. ಆದರೆ, ಅದು ದುರ್ಬಳಕೆ ಆಗುತ್ತಿದೆ ಎಂದರೆ ನಿಜಕ್ಕೂ ನಾಚಿಕೆಗೇಡಿನ ಸಂಗತಿ ಎನ್ನುತ್ತಾರೆ.
- ಮನಿಯಮ್ಮ ಅವರ ಕಾರ್ಡ್ ಸಂಖ್ಯೆ 580300138792ರಲ್ಲಿ ಅವರಿಗೂ ಮಾರ್ಚ್ 30ರಲ್ಲಿ ಆಹಾರ ಪದಾರ್ಥ ವಿತರಿಸಿದಂತೆ ತೋರಿಸಲಾಗಿದೆ. ಅಸಲಿಗೆ ಅವರು ನಿಧನರಾಗಿ 4 ತಿಂಗಳಾಯಿತು. ಅವರ ನಿಧನರಾದ ನಂತರ ನಾವುಗಳಾರೂ ಅವರ ಹೆಸರಿನಲ್ಲಿ ರೇಷನ್ ಪಡೆಯುತ್ತಿಲ್ಲ ಎಂದು ಅವರ ಪುತ್ರ ಮೋಹನ್ ಮತ್ತು ಅವರ ಸಂಬಂಧಿಗಳು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.
- 580300156593ರ ಕಾರ್ಡ್ ಸಂಖ್ಯೆಯಲ್ಲಿ ಶಿವನಂಜಯ್ಯ ಎಂಬ ಹೆಸರಿದೆ. ಅವರಿಗೆ ಮಾರ್ಚ್ 30ರಲ್ಲಿ ಅಕ್ಕಿ ನೀಡಲಾಗಿದೆ. ವಾಸ್ತವ ಸಂಗತಿ ಎಂದರೆ ಶಿವಲಿಂಗಯ್ಯ ಅವರು ನಿಧನರಾಗಿ 3 ವರ್ಷಗಳೇ ಕಳೆದಿದೆ ಎನ್ನುತ್ತಾರೆ ಗ್ರಾಮಸ್ಥರು.
- ಕಾರ್ಡ್ ಸಂಖ್ಯೆ 580300168449ರ ಫಲಾನುಭವಿ ಮೀನಾಕ್ಷಮ್ಮ ಅವರು ವಿಕಲಚೇತನರು, ನಾನು 10 ತಿಂಗಳಿಂದ ರೇಷನ್ ಪಡೆದಿಲ್ಲ ಎಂದು 'ಮೈಸೂರು ಮಿತ್ರ'ನಿಗೆ ತಿಳಿಸಿದರು.


ahara.kar.nic.in/csstat/

24). 580300152130 Pushpalatha - PHH(NK)- W/O: ಮಹಾದೇವ ಪ್ರಸಾದ್ ಹೊಂಡರ	10	10
25). 580300140377 Sunitha C - PHH(NK)-W/O ಶಿವಶಂಕರ ಎಸ್ ಹಳೇ ಬೀದಿ	15	15
26). 580300138792 Maneyamma - PHH(NK)- ಪತಿಯ ಹೆಸರು: ಸಿದ್ದಯ್ಯ ಎಸ್.ಸಿ	10	10
27). 580300138480 Pavithra M - PHH(NK)- W/O: ರಘು ಎಮ್ #117 ಎಸ್ ಸಿ ಬೀದಿ	20	20

ಮರಣ ಹೊಂದಿದ ಮನಿಯಮ್ಮ ಅವರಿಗೆ ಪಡಿತರ ವಿತರಿಸಿರುವ ದಾಖಲೆ.

ಆದರೆ, ಇವರೆಲ್ಲರಿಗೂ ಆಹಾರ ನಿರೀಕ್ಷಕರ ಲಾಗಿನ್ ಮೂಲಕ ಸಂಬಂಧಿಸಿದ ನ್ಯಾಯ ಬೆಲೆ ಅಂಗಡಿಯಲ್ಲಿ ಪಡಿತರ ವಿತರಿಸಿದಂತೆ ತೋರುವ ಮೂಲಕ ಆಹಾರ ನಿರೀಕ್ಷಕರೇ ಅಕ್ರಮಕ್ಕೆ ಸಹಕರಿಸಿರುವುದು ನಾನಾ ಸಂಶಯಗಳು ಉಂಟು ಮಾಡಿದ್ದು, ಬಡವರಿಗೆ ತಲುಪಬೇಕಾದ ಪಡಿತರ ದುರ್ಬಳಕೆಗೆ ಇಲ್ಲಿನ ಅಧಿಕಾರಿಗಳೇ ಸಾಥ್ ನೀಡುವ ಮೂಲಕ ಗೋಲ್ ಮಾಲ್ ನಡೆಸಿರುವುದಿಂದ ಸಂಬಂಧಪಟ್ಟ ಅಧಿಕಾರಿಗಳ ಇವರುಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.



ಕೋಳದ ಬೀದಿಯ ಶ್ರೀಕಾಡು ನಾರಾಯಣಸ್ವಾಮಿ ದೇವಸ್ಥಾನದಲ್ಲಿ ಶ್ರೀರಾಮನವಮಿ ಆಚರಿಸಲಾಯಿತು.



ಚಾ.ನಗರದ ಸಿಂಹ ಮೂವಿ ಪ್ಯಾರಡೈಸ್‌ನಲ್ಲಿ ಪಾನಕ, ಮಜ್ಜಿಗೆ ವಿತರಿಸಲಾಯಿತು.



ಹಳ್ಳದ ಬೀದಿಯ ಗಂಗಾಮತಸ್ಥ-ಕುರುಬರ ಬೀದಿಯಲ್ಲಿ ಶ್ರೀರಾಮನ ಭಾವಚಿತ್ರದ ಮೆರವಣಿಗೆ ನಡೆಸಲಾಯಿತು.



ಕೋಳದ ಬೀದಿಯ ಶ್ರೀವೀರಾಂಜನೇಯಸ್ವಾಮಿ ದೇವಾಲಯದಲ್ಲಿ ಮಜ್ಜಿಗೆ, ಪಾನಕ ವಿತರಿಸಲಾಯಿತು.

ರಾಮರಾಜ್ಯ ಪರಿಕಲ್ಪನೆ ಸಾಕಾರಕ್ಕೆ ಬಿಜೆಪಿ ಬದ್ಧ: ಅಮ್ಮನಪುರ ಮಲ್ಲೇಶ್



ಚಾಮರಾಜನಗರ, ಏ.10– ಶ್ರೀರಾಮಚಂದ್ರ ಮಹಾರಾಜರು ರಾಜ್ಯದ ಜನರ ಸುಭಿಕ್ಷೆಗಾಗಿ ಅನೇಕ ಸಂಕಷ್ಟ ಎದುರಿಸಿದ್ದರು. ಅಂತಹ ಆದರ್ಶ ಪುರುಷರ ಜಯಂತಿ ಆಚರಣೆ ಮಾಡುವ ಜೊತೆಗೆ ಬಿಜೆಪಿಯ ರಾಮ ರಾಜ್ಯ ಪರಿಕಲ್ಪನೆಯನ್ನು ಸಾಕಾರಗೊಳಿಸಲು ನಾವೆಲ್ಲರೂ ಬದ್ಧರಾಗೋಣ ಎಂದು ಬಿಜೆಪಿ ರೈತ ಮುಖಂಡ ಅಮ್ಮನಪುರ ಮಲ್ಲೇಶ್ ಹೇಳಿದರು.

ನಗರದ ಬಿ.ರಾಚಯ್ಯ ಜೋಡಿ ರಸ್ತೆಯಲ್ಲಿರುವ ಜಿಲ್ಲಾ ಹೆರಿಗೆ ಆಸ್ಪತ್ರೆಯ ಮುಂಭಾಗದ ನಂದಿನಿ ಡೇರಿಯಲ್ಲಿ ಶ್ರೀರಾಮನವಮಿ ಪ್ರಯುಕ್ತ ನಡೆದ ಕಾರ್ಯಕ್ರಮದಲ್ಲಿ ಸಾರ್ವಜನಿಕರಿಗೆ ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಕುಮಾರ್, ಗೌಡಿಕೆ ಸುರೇಶ್, ಮಹೇಶ್, ಗಜ, ಡೈರಿ ಪ್ರಸಾದ್, ಮಹದೇವಸ್ವಾಮಿ, ನಂದೀಶ್, ಜಯಂತ್, ಸಿದ್ದು, ಹೇಮಂತ್ ಇತರರು ಇದ್ದರು.

ಜಿಲ್ಲೆಯಾದ್ಯಂತ ರಾಮ ನಾಮ ಸ್ಮರಣೆ



ಚಾಮರಾಜನಗರ, ಏ.10– ಶ್ರೀರಾಮನವಮಿಯನ್ನು ಜಿಲ್ಲೆಯಾದ್ಯಂತ ಭಾನುವಾರ ಶ್ರದ್ಧಾ-ಭಕ್ತಿಯಿಂದ ಆಚರಿಸಲಾಯಿತು. ಜಿಲ್ಲೆಯ ಚಾಮರಾಜನಗರ, ಕೊಳ್ಳೇಗಾಲ, ಹನೂರು, ಯಳಂದೂರು ಹಾಗೂ ಗುಂಡ್ಲುಪೇಟೆ ಸೇರಿದಂತೆ ವಿವಿಧ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ಕೈಂಕರ್ಯಗಳು ನಡೆಸಲಾಯಿತು. ಬಳಿಕ, ಎಲ್ಲೆಡೆ ಪಾನಕ, ಮಜ್ಜಿಗೆ, ಕೋಸಂಬರಿ ವಿತರಿಸಲಾಯಿತು.

ಶ್ರೀಕಾಡುನಾರಾಯಣಸ್ವಾಮಿ ದೇಗುಲ: ಚಾಮರಾಜನಗರದ ಕೋಳದ ಬೀದಿಯಲ್ಲಿರುವ ಶ್ರೀಕಾಡು ನಾರಾಯಣಸ್ವಾಮಿ ದೇವಸ್ಥಾನದಲ್ಲಿ ಶ್ರೀರಾಮನವಮಿ ಆಚರಿಸಲಾಯಿತು. ದೇಗುಲದ ಆವರಣದಲ್ಲಿ ಶ್ರೀರಾಮಚಂದ್ರನ ಭಾವಚಿತ್ರವಿಟ್ಟು ವಿವಿಧ ಬಗೆಯ ಹೂಗಳಿಂದ ಅಲಂಕರಿಸಿ ಪೂಜಿಸಲಾಯಿತು. ನಂತರ ಶ್ರೀನಾರಾಯಸ್ವಾಮಿಗೆ ಮಹಾ ಮಂಗಳಾರತಿಯೊಂದಿಗೆ ವಿಶೇಷ ಪೂಜಾ ಕಾರ್ಯಗಳು ನಡೆಯಿತು. ಭಕ್ತರಿಗೆ ಶ್ರೀರಾಮನವಮಿ ಅಂಗವಾಗಿ ಮಜ್ಜಿಗೆ, ಪಾನಕ, ಕೋಸಂಬರಿ ವಿತರಿಸಲಾಯಿತು.

ರಾಮ, ಹನುಮನಿಗೆ ಪೂಜೆ: ಶ್ರೀರಾಮ ನವಮಿ ಅಂಗವಾಗಿ ನಗರದ ಕೋಳದ ಬೀದಿಯಲ್ಲಿರುವ ಶ್ರೀವೀರಾಂಜನೇಯಸ್ವಾಮಿ ದೇವಾಲಯದಲ್ಲಿ ಹನುಮನಿಗೆ ವಿಶೇಷ ಅಲಂಕಾರ ಮಾಡಿ ಶ್ರೀರಾಮ ದೇವರಿಗೆ ವಿವಿಧ ಬಗೆಯ ಹೂ, ತುಳಸಿ ಹಾಗೂ ವೀಳ್ಯದೆಲೆ ಅಲಂಕಾರ ಮಾಡಿ ಪೂಜಿಸಲಾಯಿತು. ಭಕ್ತಾದಿಗಳು ಬೆಳಗ್ಗೆಯಿಂದಲೇ ಆಗಮಿಸಿ ರಾಮನ ಬಂಟ ಹನುಮನನ್ನು ಭಜಿಸಿ ಜೈ ಶ್ರೀರಾಮ ಘೋಷದೊಂದಿಗೆ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು. ಭಕ್ತಾದಿಗಳಿಗೆ ಶ್ರೀರಾಮನವಮಿ ಅಂಗವಾಗಿ ಮಜ್ಜಿಗೆ, ಪಾನಕ ಕೋಸಂಬರಿಯನ್ನು ಸಹ ವಿತರಿಸಲಾಯಿತು.



ಚಾಮರಾಜನಗರ ಶಂಕರಪುರ ಬಡಾವಣೆಯ ಶ್ರೀರಾಮ ಮಂದಿರದಲ್ಲಿ ಶ್ರೀರಾಮ ನವಮಿ ಅಂಗವಾಗಿ ವಿಶೇಷ ಪೂಜೆ ನಡೆಯಿತು.

ರಾಮ ಮಂದಿರದಲ್ಲಿ ಶ್ರೀರಾಮನವಮಿ ಆಚರಣೆ: ನಗರದ ಹಳ್ಳದ ಬೀದಿಯ ಗಂಗಾ ಮತಸ್ಥ-ಕುರುಬರ ಬೀದಿ ರಾಮ ಮಂದಿರದಲ್ಲಿ ಶ್ರೀರಾಮನವಮಿ ಅಂಗವಾಗಿ ವಿಶೇಷ ಪೂಜೆ ನೆರವೇರಿಸಲಾಯಿತು.

ಇದೇ ಸಂದರ್ಭದಲ್ಲಿ ಅಲಂಕೃತ 4 ಚಕ್ರದ ಬಂಡಿಯಲ್ಲಿ ಶ್ರೀಸೀತಾ-ರಾಮರ ಭಾವಚಿತ್ರವನ್ನಿಟ್ಟು ಪ್ರಮುಖ ಬೀದಿಗಳಲ್ಲಿ ಉತ್ಸವ ನಡೆಸಲಾಯಿತು. ಮೆರವಣಿಗೆಯಲ್ಲಿ ಭಾಗವಹಿಸಿದ್ದ ಯುವಕರು ತಮ್ಮ ಆರಾಧ್ಯ ಶ್ರೀರಾಮನ ಪರ ಜಯ ಘೋಷಗಳನ್ನು ಕೂಗುತ್ತ, ಪರಸ್ಪರ ಬಣ್ಣಗಳನ್ನು ಎರಚಾಡಿ ಸಂಭ್ರಮಿಸಿದರು. ನಂತರ ನೆರೆದಿದ್ದ ಭಕ್ತರಿಗೆ ಪಾನಕ, ಮಜ್ಜಿಗೆ ಹಾಗೂ ಅನ್ನ ಸಂತರ್ಪಣೆ ಮಾಡಲಾಯಿತು.

ಮುಖಂಡರಾದ ಸಿ.ಪಿ.ಹುಚ್ಚೇಗೌಡ, ಸಿ.ಎನ್.ಪ್ರಕಾಶ್, ಶ್ರೀನಿವಾಸ ಮಾಸ್ತರ್, ಕಾರ್ ನಾಗೇಶ್, ಶ್ರೀನಿವಾಸಗೌಡ, ಮಹೇಶ್, ನಟರಾಜು ಹಾಗೂ ಬೀದಿಯ ಮುಖಂಡರು ಭಾಗವಹಿಸಿದ್ದರು.

ಸಿಂಹ ಮೂವಿ ಪ್ಯಾರಡೈಸ್: ನಗರದ ನಂಜನಗೂಡು ರಸ್ತೆಯಲ್ಲಿರುವ ಸಿಂಹ ಮೂವಿ ಪ್ಯಾರಡೈಸ್‌ನಲ್ಲಿ ಶ್ರೀರಾಮನವಮಿಯ ಪ್ರಯುಕ್ತ ಹಾಗೂ ಪುನೀತ್‌ರಾಜ್ ಕುಮಾರ್ ಅವರ ಜೇಮ್ಸ್ ಚಿತ್ರದ 25ನೇ ದಿನದ ಸಂಭ್ರಮದ ಕಾರ್ಯಕ್ರಮದಲ್ಲಿ ಪುನೀತ್‌ರಾಜ್ ಕುಮಾರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು.

ಚಿತ್ರ ಮಂದಿರದ ಮಾಲೀಕ ಎ.ಜಯಸಿಂಹ ಮಾತನಾಡಿ, ಜಿಲ್ಲೆಯಲ್ಲಿ ಹುಟ್ಟಿದ ಕಲಾವಿದ ಡಾ.ರಾಜ್‌ಕುಮಾರ್, ಅವರ ಪ್ರೀತಿಯ ಮಗ ಪುನೀತ್‌ರಾಜ್ ಕುಮಾರ್ (ಅಪ್ಪು) ಅವರ ಜೇಮ್ಸ್ ಚಿತ್ರವು ಜಿಲ್ಲೆಯ ಉತ್ತಮ ಪ್ರದರ್ಶನ ನೀಡಿದೆ ಅದಲ್ಲದೇ ನಮ್ಮ ಚಿತ್ರ ಮಂದಿರದಲ್ಲಿ ಚಿತ್ರ ತೆರೆಕಂಡ ದಿನದಿಂದ ಉತ್ತಮ ಗಳಿಕೆಯಾಗಿದೆ ಎಂದರು.

ಶ್ರೀರಾಮ ನವಮಿ ಅಂಗವಾಗಿ ಚಿತ್ರ ಮಂದಿರಕ್ಕೆ ಬರುವ ಪ್ರೇಕ್ಷಕರಿಗೆ ಹಾಗೂ ಸಾರ್ವಜನಿಕರಿಗೆ ಪಾನಕ, ಕೋಸಂಬರಿ ಮತ್ತು ಮಜ್ಜಿಗೆ ನೀಡಲಾಗುತ್ತಿದೆ ಎಂದು ತಿಳಿದರು. ಈ ಸಂದರ್ಭದಲ್ಲಿ ಕನ್ನಡರತ್ನ ಡಾ.ರಾಜ್‌ಕುಮಾರ್, ಪುನೀತ್ ರಾಜ್ ಕುಮಾರ್ ಅಭಿಮಾನಿ ಚಾ.ಹ.ಶಿವರಾಜ್ ಅವರನ್ನು ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಶ್ರೀನಿವಾಸ್, ಅಪ್ಪು ಅಭಿಮಾನಿಗಳು ಮಣಿ ಇತರರು ಭಾಗವಹಿಸಿದ್ದರು.

ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವಕ್ಕೆ ಚಾಲನೆ



ಬೇಗೂರು, ಏ.10(ಕಿರಣ್)– ಶ್ರೀರಾಮ ಮಂದಿರ ಬ್ರಾಹ್ಮಣ ಮಂಡಳಿಯಿಂದ ಸೀತಾ ಕಲ್ಯಾಣ ಮಹೋತ್ಸವ ಹಾಗೂ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವಕ್ಕೆ ಚಾಲನೆ ನೀಡಲಾಯಿತು.

ವಾರಗಳ ಕಾಲ ನಡೆಯುವ ಕಾರ್ಯಕ್ರಮದಲ್ಲಿ ಮೊದಲ ದಿನ ಶ್ರೀರಾಮನವಮಿ ಪ್ರಯುಕ್ತ ಗ್ರಾಮದಲ್ಲಿ ಶ್ರೀರಾಮನ ಭಾವಚಿತ್ರದ ಮೆರವಣಿಗೆ ಮಾಡಲಾಯಿತು. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ರಾಮ ಮಂದಿರದಲ್ಲಿ ಪೂಜೆ ನಡೆಯಲಿದ್ದು, ಏ. 14ರಂದು ಸಂಜೆ 5 ಗಂಟೆಗೆ ಸೀತಾ ಕಲ್ಯಾಣ ಮಹೋತ್ಸವ 15ರ ಶುಕ್ರವಾರ ಶ್ರೀರಾಮರ ಪಟ್ಟಾಭಿಷೇಕ 16ರ ಶನಿವಾರ ಹನುಮಂತೋತ್ಸವ ನಡೆಯುವುದು. ಎಲ್ಲಾ ಕಾರ್ಯಕ್ರಮಗಳನ್ನು ಶ್ರೀರಂಗಪಟ್ಟಣದ ವೇ.ಬ್ರ.ಶ್ರೀ ರಘುರಾಮಭಟ್ಟರು ಮತ್ತು ವೇ.ಬ್ರ.ಶ್ರೀ ರವಿಕಿರಣ್ ಹಾಗೂ ಕೆ.ಸಿ.ಗುರುನಂದನ್ ಅವರ ನೇತೃತ್ವ ವಹಿಸಲಿದ್ದಾರೆ. ಶ್ರೀರಾಮನವಮಿ ನಿತ್ಯಪೂಜೆ ಹಾಗೂ ಹನುಮಂತೋತ್ಸವ ಪೂಜೆಯನ್ನು ಬೇಗೂರು ಶಿವಶಂಕರರಾವ್ ನಡೆಸಿಕೊಡುವರು ಎಂದು ಮಂದಿರದ ಮಂಡಳಿ ಅವರು ತಿಳಿಸಿದ್ದಾರೆ.

ಬದನಗುಪ್ಪೆಯಲ್ಲಿ ಕಾಂಗ್ರೆಸ್ ಮುಖಂಡರಿಂದ ಮತಯಾಚನೆ



ಬದನಗುಪ್ಪೆ, ಏ.10(ಮಲ್ಲಣ್ಣ)– ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಚುನಾವಣೆ ನಿರ್ದೇಶಕ ಸ್ಥಾನಕ್ಕಾಗಿ ಸ್ಪರ್ಧಿಸಿರುವ ಬದನಗುಪ್ಪೆ ಕ್ಷೇತ್ರದ ಅಭ್ಯರ್ಥಿ ಎಂ.ಬಿ. ಗುರುಸ್ವಾಮಿ ಪರ ತಾಲೂಕಿನ ಬದನಗುಪ್ಪೆ ಗ್ರಾಮದ ಶ್ರೀಕಾಳೇಶ್ವರ ದೇವಾಲಯದಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಅವರು ಕಾಂಗ್ರೆಸ್ ಕಾರ್ಯಕರ್ತರ ಜೊತೆಗೂಡಿ ಪೂಜೆ ಸಲ್ಲಿಸುವ ಮೂಲಕ ಬದನಗುಪ್ಪೆ, ಮರಿಯಾಲ, ಮರಿಯಾಲಹುಂಡಿ, ಮೇಲಾಜಿಪುರ ಗ್ರಾಮಗಳಲ್ಲಿ ಮತಯಾಚಿಸಿದರು. ಬಳಿಕ ಮಾತನಾಡಿದ ಅವರು, ಅಭ್ಯರ್ಥಿ ಗುರುಸ್ವಾಮಿ ಮುತ್ತಿಗೆ ಗ್ರಾಮದವನಾಗಿದ್ದು, ರೈತ ಕುಟುಂಬದ ಹಿನ್ನೆಲೆಯಲ್ಲಿ ಬಂದವನಾಗಿದ್ದು, ರೈತರ ಸಮಸ್ಯೆಗಳನ್ನು ಹತ್ತಿರದಿಂದ ಬಲ್ಲವನಾಗಿದ್ದೇನೆ. ನಾನು ಮೈಸೂರಿನವನು ಎಂದುಕೊಂಡು, ಕೆಲವರು ಅಪಪ್ರಚಾರ ಮಾಡುತ್ತಿದ್ದಾರೆ. ನಾನು ಮೈಸೂರಿನಲ್ಲಿ ವ್ಯಾವಹಾರಿಕವಾಗಿ ವಾಸವಾಗಿದ್ದು, ಜಮೀನು, ಮನೆ, ಮತದಾನ ಮಾಡುವುದು ನಮ್ಮ ಗ್ರಾಮದಲ್ಲೇ, ಮತದಾರರು ಯಾವುದೇ ಅಪಪ್ರಚಾರಕ್ಕೆ ಕಿವಿಗೊಡಬಾರದು ಎಂದರು.

ಎಸ್‌ಟಿ ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ಪು.ಶ್ರೀನಿವಾಸನಾಯಕ, ಜಿಪಂ ಮಾಜಿ ಅಧ್ಯಕ್ಷ ಸಿ.ಎ.ಮಹದೇವಶೆಟ್ಟಿ, ದಳಪತಿ ವೀರತಪ್ಪ, ಗ್ರಾಪಂ ಸದಸ್ಯರು, ಮುಖಂಡರಾದ ಬಿ.ಪಿ.ನಾಗರಾಜಮೂರ್ತಿ, ಮಹೇಶ್ ಕುದರ್, ಕೆಲ್ಲಂಬಳ್ಳಿ ಸೋಮಶೇಖರ್, ಕಾಂಗ್ರೆಸ್ ಮುಖಂಡರು, ಗ್ರಾಮಸ್ಥರು, ಕಾರ್ಯಕರ್ತರು ಹಾಜರಿದ್ದರು.

ವಿನಯಶ್ರೀಗೆ ಪಿಎಚ್.ಡಿ



ಚಾಮರಾಜನಗರ, ಏ.10(ಎಸ್‌ಎಸ್)– ಮೈಸೂರಿನ ಕೇಂದ್ರೀಯ ಆಹಾರ ತಂತ್ರಜ್ಞಾನ ಸಂಶೋಧನಾ ಕೇಂದ್ರ (ಸಿಎಫ್‌ಟಿಆರ್‌ಐ)ದಲ್ಲಿ ಎಸ್. ವಿನಯಶ್ರೀ ಅವರು ಡಾಕ್ಟರೇಟ್ ಪಡೆದಿದ್ದಾರೆ. ಡಾ. ಪ್ರಸನ್ನ ವಾಸು ಅವರ ಮಾರ್ಗದರ್ಶನದಲ್ಲಿ ಜೀವ ರಸಾಯನ ಶಾಸ್ತ್ರದ ವಿಷಯದಲ್ಲಿ ಸಂಶೋಧನೆ ಮಾಡಿ ವಿನಯಶ್ರೀ ಡಾಕ್ಟರೇಟ್ ಪಡೆದಿದ್ದಾರೆ.

ಡಾಕ್ಟರೇಟ್ ಪಡೆದಿರುವ ಎಸ್.ವಿನಯಶ್ರೀ ಅವರು ಚಾಮರಾಜನಗರ ತಾಲೂಕಿನ ಹರವೆ ಗ್ರಾಮದ ಸತ್ಯೇಂದ್ರಸ್ವಾಮಿ, ಶೀಲಾ ದಂಪತಿಯ ಪುತ್ರಿ.

ಚಾಮರಾಜನಗರ ಎಪಿಎಂಸಿ ಚುನಾವಣೆ

ಅಧಿಕಾರಕ್ಕಾಗಿ ಕೈ-ಕಮಲ ಗುದ್ದಾಟ



ಚಾಮರಾಜನಗರ, ಏ.10(ಎಸ್‌ಎಸ್)– ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ)ಯ ನಿರ್ದೇಶಕ ಸ್ಥಾನಕ್ಕೆ ಇದೇ ತಿಂಗಳ 17ರಂದು ಚುನಾವಣೆ ನಡೆಯಲಿದೆ. ಚುನಾವಣೆಗೆ ದಿನ ಹತ್ತಿರವಾಗುತ್ತಿದ್ದಂತೆಯೇ ದಿನದಿಂದ ದಿನಕ್ಕೆ ಪ್ರಚಾರದ ಭರಾಟೆ ಹೆಚ್ಚಾಗುತ್ತಿದೆ.

ಎಪಿಎಂಸಿ ಚುನಾವಣೆ ಯಾವುದೇ ರಾಜಕೀಯ ಪಕ್ಷದ ಚಿಹ್ನೆಯ ಮೇಲೆ ನಡೆಯುವ ಚುನಾವಣೆ ಅಲ್ಲ. ಆದರೂ, ಸಹ ಅಭ್ಯರ್ಥಿಗಳು ಒಂದಲ್ಲಾ ಒಂದು ರಾಜಕೀಯ ಪಕ್ಷಗಳೊಂದಿಗೆ ಗುರುತಿಸಿಕೊಂಡಿರುವುದರಿಂದ ಆ ಪಕ್ಷದ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ. ಹೀಗಾಗಿ ಈ ಚುನಾವಣೆಯೂ ಸಹ ಒಂದು ರೀತಿಯಲ್ಲಿ ರಾಜಕೀಯವಾಗಿ ಪರಿವರ್ತನೆ ಆಗಿದೆ.

ಚುನಾವಣೆ ನಡೆಯಲಿರುವ 12 ಕ್ಷೇತ್ರಗಳಿಗೆ ಕಾಂಗ್ರೆಸ್ ಹಾಗೂ ಬಿಜೆಪಿ ಬೆಂಬಲಿತ ಅಭ್ಯರ್ಥಿಗಳು ಚುನಾವಣೆಗೆ ಸ್ಪರ್ಧಿಸಿರುವುದರಿಂದ ಈ ಎರಡೂ ಪಕ್ಷಗಳು ಹೆಚ್ಚು ಸ್ಥಾನ ಗೆದ್ದು, ಅಧಿಕಾರ ಗಿಟ್ಟಿಸಲು ಇನ್ನಿಲ್ಲದ ಪ್ರಯತ್ನಗಳನ್ನು ನಡೆಸುತ್ತಿವೆ. ಆಯಾಯ ಪಕ್ಷಗಳ ಮುಖಂಡರು ತಮ್ಮ ಪಕ್ಷದ ಬೆಂಬಲಿತ ಅಭ್ಯರ್ಥಿಯನ್ನು ಗೆಲ್ಲಿಸಲು ಪಣತೊಟ್ಟಿದ್ದಾರೆ. ಇದಕ್ಕಾಗಿ ಉರಿಬಿಸಿಲನ್ನೂ ಸಹ ಲೆಕ್ಕಿಸದೇ ಮತ ಯಾಚನೆಯಲ್ಲಿ ತೊಡಗಿದ್ದಾರೆ.

ತಮ್ಮ ಕ್ಷೇತ್ರದ ವ್ಯಾಪ್ತಿಗೆ ಬರುವ ಪ್ರಸಿದ್ಧಿ ಪಡೆದಿರುವ ದೇವಸ್ಥಾನ ಹಾಗೂ ಆಯಾಯ ಗ್ರಾಮದ ಪ್ರಮುಖ ದೇವಾಲಯದಲ್ಲಿ ಪೂಜೆ ಸಲ್ಲಿಸುವ ಮೂಲಕ ಅಭ್ಯರ್ಥಿಗಳು ಮತಯಾಚನೆ ಆರಂಭಿಸುತ್ತಿದ್ದಾರೆ. ಪಕ್ಷದ ಮುಖಂಡರು ಹಾಗೂ ಆಯಾಯ ಗ್ರಾಮದ ಮುಖಂಡರು ಮತದಾನದ ಹಕ್ಕು ಪಡೆದಿರುವವರ ಮನೆ ಮನೆಗೆ ತೆರಳಿ ಮತ ಯಾಚನೆ ಮಾಡುತ್ತಿದ್ದಾರೆ. ಬೆಳಗ್ಗೆಯಿಂದ ರಾತ್ರಿವರೆಗೆ ಮತಬೇಟೆ ನಡೆಯುತ್ತಿದೆ.

ಕಳೆದ ಅವಧಿಯಲ್ಲಿ ಚಾಮರಾಜನಗರ ಎಪಿಎಂಸಿಯ ಅಧಿಕಾರವನ್ನು ಕಾಂಗ್ರೆಸ್ ಬೆಂಬಲಿತರು 'ಕೈ' ವಶ ಪಡಿಸಿಕೊಳ್ಳುತ್ತಿದ್ದರು. ಆ ವೇಳೆ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿತ್ತು ಎಪಿಎಂಸಿಯಲ್ಲಿ ಮತ್ತೆ 'ಕೈ' ಬಲಗೊಳ್ಳಬೇಕು ಎಂದು ಆ ಪಕ್ಷದ ಮುಖಂಡರು ಅವಿರತ ಪ್ರಯತ್ನದಲ್ಲಿ ತೊಡಗಿದ್ದಾರೆ. ಈಗ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರದಲ್ಲಿ ಇರುವುದು ಬಿಜೆಪಿ ಮುಖಂಡರ ಹುಮ್ಮಸ್ಸು ಹೆಚ್ಚಲು ಕಾರಣವಾಗಿದೆ.

ಅಭ್ಯರ್ಥಿಗಳ ವಿವರ

1. ಚಾಮರಾಜನಗರ-ಸಾಮಾನ್ಯ- ಮನೋಜ್‌ಪಟೇಲ್ ಎಂ., ಪಿ.ಸಿದ್ದರಾಜು. 2. ಬದನಗುಪ್ಪೆ- ಹಿಂದುಳಿದ 'ಅ'ವರ್ಗ- ಗುರುಸ್ವಾಮಿ ಎಂ.ಬಿ., ಸಿ.ಬಿ.ಸೂರ್ಯಕುಮಾರ್. 3. ಹರವೆ- ಹಿಂದುಳುದ 'ಬ' ವರ್ಗ- ಎಂ.ಗಿರೀಶ್, ಎಂ.ಗುರುಸ್ವಾಮಿ, ಮಹದೇವ ಪ್ರಸಾದ್. 4. ಉಡಿಗಾಲ- ಮಹಿಳೆ- ನಿಂಗಮ್ಮಣಮ್ಮ, ಪ್ರೇಮ, ಮಂಜುಳ. 5. ಅಮಚವಾಡಿ- ಸಾಮಾನ್ಯ- ರವಿಕುಮಾರ್, ವಿ.ಕೆ.ರಾಜಶೇಖರ್‌ಮೂರ್ತಿ. 6. ಹರದನಹಳ್ಳಿ- ಸಾಮಾನ್ಯ- ಹೆಚ್.ಎನ್.ಮಹದೇವಸ್ವಾಮಿ, ಬಿ.ವಿ.ಶಿವಕುಮಾರ್. 7. ನಾಗವಳ್ಳಿ- ಸಾಮಾನ್ಯ- ಎ.ಎಸ್.ಪ್ರದೀಪ್, ಜೆ.ಎನ್.ಶಿವಕುಮಾರ್.8. ಹೊಂಗನೂರು- ಸಾಮಾನ್ಯ- ಜಿ.ಪಿ.ಮೋಹನ್ ಕುಮಾರ್, ಜಿ.ಎಂ.ರವಿಶಂಕರ್‌ಮೂರ್ತಿ. 9. ಉಮ್ಮತ್ತೂರು- ಮಹಿಳೆ- ಕಲಾವತಿ, ನಂಜಮ್ಮಣಿ.

ಪುರುಷರು– 1,11,635
ಮಹಿಳೆಯರು– 38,029
ಒಟ್ಟು ಮತದಾರರು – 1,49,664
ಒಳಪಡುವ ಗ್ರಾಮಗಳು– 340
ಒಟ್ಟು ಮತಗಟ್ಟೆಗಳು–135

ಚುನಾವಣೆಯಲ್ಲಿ ತಮ್ಮ ಪಕ್ಷದ ಬೆಂಬಲಿತ ಅಭ್ಯರ್ಥಿಗಳನ್ನು ಗೆಲ್ಲಿಸಿ, ಸರ್ಕಾರ ನಾಮನಿರ್ದೇಶನ ಮಾಡುವ ನಿರ್ದೇಶಕರ ಬೆಂಬಲದೊಂದಿಗೆ ಅಧಿಕಾರ ಹಿಡಿಯಲು ಬಿಜೆಪಿ ಮುಖಂಡರು ಶ್ರಮಿಸುತ್ತಿದ್ದಾರೆ.

ಚುನಾಚಣೆ ದಿನಾಂಕ ಹತ್ತಿರವಾಗುತ್ತಿದ್ದಂತೆಯೇ ಪ್ರಚಾರವೂ ಸಹ ದಿನದಿಂದ ದಿನಕ್ಕೆ ರಂಗೇರುತ್ತಿದೆ. ಮತದಾರ ಮಾತ್ರ ತನ್ನ ಮತ ಯಾರಿಗೆ ಎಂಬ ಗುಟ್ಟನ್ನು ಬಿಟ್ಟುಕೊಡದೇ ಮೌನವಹಿಸಿದ್ದು, ಫಲಿತಾಂಶ ತೀವ್ರ ಕುತೂಹಲ ಕೆರಳಿಸಿದೆ.

ಚಾಮರಾಜನಗರ ಎಪಿಎಂಸಿ ಒಟ್ಟು 14 ಕ್ಷೇತ್ರಗಳನ್ನು ಒಳಗೊಂಡಿದೆ. ಇದರಲ್ಲಿ ಏ.17ರಂದು ಬೆಳಗ್ಗೆ 7ರಿಂದ ಸಂಜೆ 4 ಗಂಟೆಯವರೆಗೆ 12 ಕ್ಷೇತ್ರಗಳಿಗೆ ಮತದಾನ ನಡೆಯಲಿದೆ. ಇನ್ನುಳಿದ ತೆಂಗು ಬೆಳೆಗಾರರ ಕ್ಷೇತ್ರಕ್ಕೆ ಬುಧವಾರ ಚುನಾವಣೆ ನಡೆದಿದೆ. ಟಿಎಪಿಸಿಎಂಎಸ್ ಕ್ಷೇತ್ರಕ್ಕೆ ಮತದಾನ ನಡೆಯುವ ದಿನಾಂಕ ಇನ್ನೂ ನಿಗದಿ ಆಗಿಲ್ಲ.

ಗಂಡು ಹುಲಿ ಕಳೇಬರ ಪತ್ತೆ



ಬೇಗೂರು, ಏ.10(ಕಿರಣ್)– ಗುಂಡ್ಲುಪೇಟೆ ತಾಲೂಕಿನ ಬೇಗೂರು ಸಮೀಪದ ಓಂಕಾರ್ ವಲಯದ ಕುರುಬರಹುಂಡಿ ಸಮೀಪದ ಬರಗಿ ಬೀಟ್‌ನ ಆರದೇವನಕಟ್ಟೆ ಪ್ರದೇಶದಲ್ಲಿ ಗಂಡು ಹುಲಿಯ ಕಳೇಬರ ಪತ್ತೆಯಾಗಿದೆ.

ಸುಮಾರು 6 ವರ್ಷದ ವಯೋಮಾನ ಹುಲಿ ಇದ್ದಾಗಿದ್ದು, ಸರಹದ್ದಿಗಾಗಿ ಮತ್ತೊಂದು ಹುಲಿಯೊಡನೆ ಕಾದಾಟ ನಡೆಸಿದಾಗ ತೀವ್ರ ಗಾಯಗೊಂಡು ಸಾವನ್ನಪ್ಪಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಪಶುವೈದ್ಯ ಡಾ.ವಾಸಿಂ ಅಕ್ರಂ ಹುಲಿಯ ಮರಣೋತ್ತರ ಪರೀಕ್ಷೆ ನಡೆಸಿದರು. ಬಳಿಕ, ಸ್ಥಳದಲ್ಲಿಯೇ ಹುಲಿಯ ಅಂತ್ಯಕ್ರಿಯೆ ನಡೆಸಲಾಯಿತು. ಸ್ಥಳಕ್ಕೆ ಹುಲಿ ಯೋಜನೆಯ ನಿರ್ದೇಶಕ ಡಾ.ಪಿ.ರಮೇಶ್‌ಕುಮಾರ್, ಓಂಕಾರ್ ವಲಯದ ಆರ್‌ಎಫ್‌ಓ ನಾಗೇಂದ್ರ ನಾಯ್ಕ, ಹಿಮಗಿರಿ ವನ್ಯಜೀವಿ ಹಿತರಕ್ಷಣಾ ಸಂಸ್ಥೆಯ ರಘುರಾಮ್, ನಾಗರಾಜು ಸೇರಿದಂತೆ ಹಲವರು ಇದ್ದರು.

ಡಾಟಾ ಎಂಟ್ರಿ ಆಪರೇಟರ್‌ಗಳ ಸೇವೆಗೆ ಅರ್ಜಿ ಆಹ್ವಾನ

ಮೈಸೂರು, ಏ.10– ಕಂದಾಯ ಇಲಾಖೆ ವತಿಯಿಂದ ಮೈಸೂರು ಜಿಲ್ಲೆಯಲ್ಲಿ 11 ವಿಧಾನಸಭಾ ಕ್ಷೇತ್ರಗಳ ಶಾಖೆಯಲ್ಲಿ ಡಾಟಾ ಎಂಟ್ರಿ ಆಪರೇಟರ್ಗಳ ಸೇವೆಯನ್ನು ಒದಗಿಸಲು ಇ–ಪ್ರಕ್ಯೂರ್ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಟೆಂಡರ್ ದಾಸ್ತಾವೇಜನ್ನು ಏ.28ರೊಳಗಾಗಿ ಅಪ್ಲೋಡ್ ಮಾಡಲು ತಿಳಿಸಲಾಗಿದೆ. ಆಸಕ್ತರು http://eporoc.karnataka.gov.in.websiteನಿಂದ ಅರ್ಜಿಯನ್ನು ಡೌನ್ ಲೋಡ್ ಮಾಡಿಕೊಂಡು ಆನ್‌ಲೈನ್ ಮೂಲಕ ಭಾಗವಹಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾಧಿಕಾರಿಗಳ ಕಚೇರಿಯ ಚುನಾವಣಾ ಶಾಖೆಯನ್ನು ಸಂಪರ್ಕಿಸಬಹುದು ಎಂದು ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಒಂದನೇ ಪುಟದಿಂದ

ಅಭಿಯಾನಕ್ಕೆ ತೊಡಕು

ಬೂಸ್ಟರ್ ಡೋಸ್ ನೀಡುವುದಕ್ಕೆ ಅನುಮತಿ ನೀಡಲಾಗಿದೆ. ದೇಶದಾದ್ಯಂತ ಇಂದಿನಿಂದ ಬೂಸ್ಟರ್ ಡೋಸ್ ನೀಡಲು ಖಾಸಗಿ ಆಸ್ಪತ್ರೆಗಳು ಸಜ್ಜಾಗಿದ್ದವು. ಆದರೆ, ಕಳೆದ ರಾತ್ರಿ ಸರ್ಕಾರ ಬೂಸ್ಟರ್ ಡೋಸ್‌ವೊಂದಕ್ಕೆ 225 ರೂ. ಹಾಗೂ ಸೇವಾ ಶುಲ್ಕ ಮಾತ್ರ ತೆಗೆದು ಕೊಳ್ಳುವಂತೆ ಆದೇಶ ಹೊರಡಿಸಿದೆ. ಈಗಾಗಲೇ ದುಪ್ಪಟ್ಟು ಬೆಲೆ ನೀಡಿ ಬೂಸ್ಟರ್ ಡೋಸ್ ಖರೀದಿಸಿ ಅಭಿಯಾನ ಆರಂಭಿಸಲು ಸಿದ್ಧತೆ ಮಾಡಿಕೊಂಡಿದ್ದ ಖಾಸಗಿ ಆಸ್ಪತ್ರೆಗಳು ಕಳೆದ ರಾತ್ರಿ ಸರ್ಕಾರ ತೆಗೆದುಕೊಂಡ ನಿರ್ಧಾರದಿಂದ ಪೇಚಿಗೆ ಸಿಲುಕಿವೆ.

ಸರ್ಕಾರದ ಹೊಸ ಆದೇಶಕ್ಕಾಗಿ ಕಾಯುತ್ತೇವೆ: ಬೂಸ್ಟರ್ ಡೋಸ್ ದರ ನಿಗಧಿ ಮಾಡಿರುವುದಕ್ಕೆ ಸಂಬಂಧಿಸಿದಂತೆ 'ಮೈಸೂರು ಮಿತ್ರ'ನೊಂದಿಗೆ ಖಾಸಗಿ ಆಸ್ಪತ್ರೆಗಳ ಪ್ರತಿನಿಧಿಗಳು ಮಾತನಾಡಿ, ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯ ನಿರ್ದೇಶನ ಮೇರೆಗೆ 18 ವರ್ಷ ಮೇಲ್ಪಟ್ಟವರಿಗೆ ಬೂಸ್ಟರ್ ಡೋಸ್ ನೀಡಲು ಸಿದ್ಧತೆ ಮಾಡಿ ಕೊಳ್ಳಲಾಗಿತ್ತು. ಇಂದಿನಿಂದ (ಏ.10) ಅಭಿಯಾನ ಆರಂಭಿಸಲು ಅದಕ್ಕಾಗಿ ಔಷಧ ಕಂಪನಿಗಳು ನಿಗದಿ ಮಾಡಿರುವ ದರದಲ್ಲೇ ಬೂಸ್ಟರ್ ಡೋಸ್ ಖರೀದಿಸಲಾಗಿತ್ತು. ಆದರೆ, ಸರ್ಕಾರ ಕಳೆದ ರಾತ್ರಿ ಬೂಸ್ಟರ್ ಡೋಸ್ ದರ ನಿಗದಿ ಮಾಡಿರು ವುದು ಆಸ್ಪತ್ರೆಗಳಿಗೆ ಭಾರಿ ಪ್ರಮಾಣದ ನಷ್ಟವನ್ನುಂಟು ಮಾಡುತ್ತಿದೆ. ಹೆಚ್ಚು ದರ ಕೊಟ್ಟು ಬೂಸ್ಟರ್ ಡೋಸ್ ಖರೀದಿಸಿ, ಕಡಿಮೆ ದರಕ್ಕೆ ನೀಡುವುದು ಎಷ್ಟು ಸರಿ. ಈ ಹಿನ್ನೆಲೆ ಯಲ್ಲಿ ಸರ್ಕಾರ ಕೂಡಲೇ ದರ ಮರು ಪರಿಶೀಲನೆ ಮಾಡಿ, ಖಾಸಗಿ ಆಸ್ಪತ್ರೆಗಳು ಬೂಸ್ಟರ್ ಡೋಸ್ ಖರೀದಿಸಿರುವ ದರಕ್ಕೆ ಅನುಗುಣವಾಗಿ ಹೊಸ ದರ ನಿಗದಿ ಮಾಡುವಂತೆ ಮನವಿ ಮಾಡಲಾಗಿದೆ ಎಂದು ತಿಳಿಸಿದರು. ಕಳೆದ 2 ದಿನಗಳಿಂದ ಸರ್ಕಾರಿ ರಜೆ ಇರುವುದರಿಂದ ಕೋ–ವಿನ್ ಅಪ್ಲಿಕೇಶನ್ ಸ್ಥಗಿತಗೊಂಡಿದೆ. ನಾಳೆ(ಏ.11) ಅಪ್ಲಿಕೇಶನ್ ಸರಿಯಾಗಲಿದೆ. ಆ ನಂತರ 18 ವರ್ಷ ಮೇಲ್ಪಟ್ಟವರು ಬೂಸ್ಟರ್ ಡೋಸ್ ಪಡೆದುಕೊಳ್ಳಲು ಹೆಸರು ನೋಂದಾಯಿಸುವ ಪ್ರಕ್ರಿಯೆ ಆರಂಭಗೊಳ್ಳಲಿದೆ ಎಂದರು.

ಜಿಲ್ಲೆಯಲ್ಲಿ 4,78,972 ಮಂದಿಗೆ ಬೂಸ್ಟರ್ ಡೋಸ್ ಗುರಿ: ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಕೆ.ಹೆಚ್. ಪ್ರಸಾದ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ. ಸರ್ಕಾರದ ಸೂಚನೆ ಮೇರೆಗೆ ಖಾಸಗಿ ಆಸ್ಪತ್ರೆಗಳಿಗೆ ಬೂಸ್ಟರ್ ಡೋಸ್ ನೀಡಲಾಗಿದೆ. ಇದರೊಂದಿಗೆ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಮತ್ತು ನಿಗದಿತ ಸರ್ಕಾರಿ ಆಸ್ಪತ್ರೆಗಳಲ್ಲಿ ಆರೋಗ್ಯ ಕಾರ್ಯಕರ್ತರು, ಮುಂಚೂಣಿ ಕಾರ್ಯಕರ್ತರು ಹಾಗೂ 60 ವರ್ಷ ಮೇಲ್ಪಟ್ಟ ಹಿರಿಯ ನಾಗರಿಕರಿಗೆ ಬೂಸ್ಟರ್ ಡೋಸ್ ನೀಡಲಾ ಗುತ್ತಿದೆ. ಬೂಸ್ಟರ್ ಡೋಸ್ ಪಡೆಯಲು ಎರಡನೇ ಡೋಸ್ ಕೋವಿಡ್ ಲಸಿಕೆ ಪಡೆದು 9 ತಿಂಗಳಾಗಿರಬೇಕೆಂಬ ಮಾನದಂಡವಿದೆ. ಮೈಸೂರು ಜಿಲ್ಲೆಯಲ್ಲಿ 18 ವರ್ಷದ ಮೇಲ್ಪಟ್ಟ 4,78,972 ಮಂದಿಗೆ ಬೂಸ್ಟರ್ ಡೋಸ್ ನೀಡುವ ಗುರಿ ಹೊಂದಲಾಗಿದೆ.

ಮತ್ತೆ ಮರುಕಳಿಸುತ್ತಿದೆ

ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಪ್ರತಿ ಜಿಲ್ಲೆಯಲ್ಲಿ 75 ಅಮೃತ ಸರೋವರಗಳನ್ನು (ಕೆರೆಗಳು) ರಚಿಸುವಲ್ಲಿ ಭಾಗವಹಿಸುವಂತೆ ಅವರು ಕೇಳಿಕೊಂಡರು.

ರೈತರು ಬಲಿಷ್ಠವಾದಷ್ಟು ಭಾರತ ಹೆಚ್ಚು ಸಮೃದ್ಧವಾಗುತ್ತದೆ: ರೈತರು ಎಷ್ಟು ಬಲಿಷ್ಠರಾಗುತ್ತಾ ಹೋಗುತ್ತಾರೋ, ಹಾಗೇ ನವ ಭಾರತವು ಹೆಚ್ಚು ಸಮೃದ್ಧವಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

ಪಿಎಂ ಕಿಸಾನ್ ಸಮ್ಮಾನ್ ನಿಧಿ ಮತ್ತು ಇತರೆ ಕೃಷಿ ಸಂಬಂಧಿತ ಯೋಜನೆಗಳ ಕುರಿತು ಟ್ವೀಟ್ ಮಾಡಿದ ಅವರು, ಪಿಎಂ ಕಿಸಾನ್ ಸಮ್ಮಾನ್ ನಿಧಿ ಮತ್ತು ಇತರ ಕೃಷಿ ಸಂಬಂಧಿತ ಯೋಜನೆಗಳು ಕೋಟಿಗಟ್ಟಲೆ ಉಳುಮೆದಾರರಿಗೆ ಹೊಸ ಶಕ್ತಿಯನ್ನು ನೀಡುತ್ತಿವೆ ಎಂದು ಮಾಹಿತಿ ನೀಡಿದರು. ನಮ್ಮ ರೈತ ಸಹೋದರ ಸಹೋದರಿಯರ ಬಗ್ಗೆ ದೇಶ ಹೆಮ್ಮೆಪಡುತ್ತದೆ. ಅವರು ಬಲಿಷ್ಠರಾಗಿದಷ್ಟು, ನವ ಭಾರತವು ಹೆಚ್ಚು ಸಮೃದ್ಧವಾಗಿರುತ್ತದೆ. ಪ್ರಧಾನಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಮತ್ತು ಕೃಷಿಗೆ ಸಂಬಂಧಿಸಿದ ಇತರ ಯೋಜನೆಗಳು ದೇಶದ ಕೋಟ್ಯಂತರ ರೈತರಿಗೆ ಹೊಸ ಶಕ್ತಿಯನ್ನು ನೀಡುತ್ತಿರುವುದು ನನಗೆ ಖುಷಿ ತಂದಿದೆ ಎಂದು ಟ್ವೀಟ್ ಮಾಡಿದ್ದಾರೆ. 11.3 ಕೋಟಿ ರೈತರ ಬ್ಯಾಂಕ್ ಖಾತೆಗಳಿಗೆ 1.82 ಲಕ್ಷ ಕೋಟಿ ರೂ.ವನ್ನು ನೇರವಾಗಿ ವರ್ಗಾ ಯಿಸಲಾಗಿದೆ ಎಂದು ಹೇಳುವ ಗ್ರಾಫಿಕ್ ಅನ್ನು ಪ್ರಧಾನಿ ಟ್ವಿಟ್ಟರ್‌ನಲ್ಲಿ ಹಂಚಿಕೊಂಡಿದ್ದಾರೆ.

ಪಂಡಿತರು ಕಾಶ್ಮೀರಕ್ಕೆ ವಾಪಸ್

ಕಡೆಗಳಿಗೆ ವಲಸೆ ಹೋಗಿದ್ದರು. 2021–21ರಲ್ಲಿ ವಿವಿಧ ಇಲಾಖೆಗಳಲ್ಲಿ 841 ಕಾಶ್ಮೀರಿ ಪಂಡಿತರನ್ನು ಸರ್ಕಾರ ನೇಮಕ ಮಾಡಿಕೊಳ್ಳುವ ಮೂಲಕ ಅವರು ವಾಪಸ್ ಆಗಲು ಸರ್ಕಾರ ಪ್ರೋತ್ಸಾಹ ನೀಡುತ್ತಿದೆ, 2021–22 ರಲ್ಲಿ 1,264 ಕಾಶ್ಮೀರಿ ಪಂಡಿತರನ್ನು ನೇಮಕಾತಿ ಮಾಡಿಕೊಳ್ಳಲಾಗಿದೆ. 2015ರ ಪ್ರಧಾನ ಮಂತ್ರಿ ಅಭಿವೃದ್ಧಿ ಪ್ಯಾಕೇಜ್ ಅಡಿಯಲ್ಲಿ 3000 ಸರ್ಕಾರಿ ಉದ್ಯೋಗಗಳನ್ನು ವಲಸೆ ಹೋಗಿರುವ ಕಾಶ್ಮೀರಿ ಪಂಡಿತರಿಗಾಗಿ ನೀಡಲಾಗಿತ್ತು. ಈವರೆಗೂ 2,828 ವಲಸಿರ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿದ್ದು, 1,913 ಮಂದಿಯನ್ನು ನೇಮಕ ಮಾಡಿಕೊಳ್ಳಲಾಗಿದೆ. ಇನ್ನೂ 915 ಮಂದಿಯ ದಾಖಲೆಗಳ ಪರಿಶೀಲನೆ ಕಾರ್ಯ ನಡೆಯಬೇಕಿದೆ.

ಚಂದ್ರು ಹತ್ಯೆ: ತನಿಖೆ ಸಿಐಡಿಗೆ

ಬಂದರೆ ಸಾಕು. ಹೀಗಾಗಿ ಸಿಐಡಿ ತನಿಖೆಗೆ ಕೊಡಬೇಕೆಂದು ಹೇಳಿದ್ದೇನೆ. ಇಂದು ಬಹುತೇಕ ಕಮಿಷನರ್ ಅವರು ಡಿಜಿಗೆ ಪತ್ರ ಬರೆದು ಸಿಐಡಿಗೆ ವಹಿಸುತ್ತಾರೆ ಎಂದು ತಿಳಿಸಿದ್ದಾರೆ. ರಾಜ್ಯ ಪ್ರವಾಸ ಕುರಿತು ಮಾತನಾಡಿದ ಮುಖ್ಯಮಂತ್ರಿಗಳು, ಮುಂಬರುವ ರಾಜ್ಯ ವಿಧಾನಸಭಾ ಚುನಾವಣಾ ಪೂರ್ವತಯಾರಿಗೆ ಬಿಜೆಪಿ ಸಕಲ ಸಿದ್ಧತೆ ಮಾಡಿ ಕೊಳ್ಳುತ್ತಿದೆ. 3 ತಂಡದಲ್ಲಿ ರಾಜ್ಯ ಪ್ರವಾಸ ಮಾಡಲಾಗುತ್ತದೆ ಎಂದಿದ್ದಾರೆ.

ಬೂತ್ ಮತ್ತು ಜಿಲ್ಲಾ ಮಂಡಲ ಮಟ್ಟದಲ್ಲಿ ಪ್ರವಾಸ ನಡೆಯಲಿದ್ದು, ಜಿಲ್ಲಾ ಮಟ್ಟದ ಕಾರ್ಯಕರ್ತರ ಸಭೆ ಮಾಡುತ್ತೇವೆ. ಎಲ್ಲರೂ ಎರಡೆರಡು ದಿನ ಮೂರು ವಿಭಾಗದಲ್ಲಿ 3 ತಂಡದಲ್ಲಿ ಪ್ರವಾಸ ನಡೆಯಲಿದೆ. ಈ ಪ್ರವಾಸದಲ್ಲಿ ಮಾಜಿ ಸಿಎಂ ಯಡಿಯೂರಪ್ಪ, ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಬಿಜೆಪಿ ರಾಜ್ಯಾಧ್ಯಕ್ಷ ನಳೀನ್‌ಕುಮಾರ್ ಕಟೀಲ್ ಸೇರಿದಂತೆ ಎಲ್ಲಾ ನಾಯಕರು ಇರುತ್ತಾರೆ ಎಂದು ಮಾಹಿತಿ ನೀಡಿದರು.

ಪ್ರಧಾನಿ ಮೋದಿಗೆ ಆಹ್ವಾನ

ಭಾರತದಲ್ಲಿ ಹುಟ್ಟಿದ ಪ್ರಾಚೀನ ದೈಹಿಕ, ಮಾನಸಿಕ, ಆಧ್ಯಾತ್ಮಿಕ ಅಭ್ಯಾಸವಾದ ಯೋಗವನ್ನು ವಿಶ್ವಮಾನ್ಯ ಮಾಡಲು 2014ರಲ್ಲಿ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ನಿರ್ಣಯ ಮಂಡಿಸಿದಾಗ 179 ರಾಷ್ಟ್ರಗಳು ಸಮ್ಮತಿಸಿದ್ದವು. 2015ರಿಂದ ಜೂ.21ನ್ನು ವಿಶ್ವ ಯೋಗ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದರು. ಹಂಗಾಮಿ ಮೇಯರ್ ಸುನಂದಾ ಪಾಲನೇತ್ರ, ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್, ಬೆಂಗಳೂರಿನ ಅಂತಾರಾಷ್ಟ್ರೀಯ ಯೋಗ ಶಿಕ್ಷಣ ತಜ್ಞ ಡಾ.ಎಂ.ವಿ.ಶ್ರೀಧರ್, ಜಿಲ್ಲಾ ಆಯುಷ್ ಅಧಿಕಾರಿ ಡಾ.ಸೀತಾಲಕ್ಷ್ಮಿ, ಮೈಸೂರು ಜಿಎಸ್‌ಎಸ್ ಯೋಗ ಪ್ರತಿಷ್ಠಾನದ ಶ್ರೀಹರಿ, ಮೈಸೂರು ಯೋಗ ಫೆಡರೇಷನ್‌ನ ಡಾ. ಬಿ.ಪಿ.ಮೂರ್ತಿ, ಭಾರತ್ ಸ್ವಾಭಿಮಾನ್ ಟ್ರಸ್ಟ್‌ನ ಶಶಿಕುಮಾರ್, ಎಸ್‌ಪಿವೈಎಸ್‌ಎಸ್‌ನ ಗೋಪಾಲಕೃಷ್ಣ, ಯೋಗ ಸ್ಪೋರ್ಟ್ಸ್ ಫೌಂಡೇಷನ್‌ನ ಡಾ.ಪಿ.ಎನ್.ಗಣೇಶ್‌ಕುಮಾರ್, ವೇದವ್ಯಾಸ ಯೋಗ ಪ್ರತಿಷ್ಠಾನದ ಡಾ.ಕೆ.ರಾಘವೇಂದ್ರ ಪೈ ಇನ್ನಿತರರು ಉಪಸ್ಥಿತರಿದ್ದರು.

ಇಂದು ಪಾಕಿಸ್ತಾನ ಪ್ರಧಾನಿ ಆಯ್ಕೆ

ಸದಸ್ಯರು ಮತ್ತೆ ಸೋಮವಾರ ಸೇರಲಿದ್ದು ಮಧ್ಯಾಹ್ನ 2 ಗಂಟೆಯ ಬಳಿಕ ಪ್ರಧಾನಿಯ ಆಯ್ಕೆ ನಡೆಯಲಿದೆ ಎಂದಿದ್ದಾರೆ. ಪಾಕಿಸ್ತಾನದ ನೂತನ ಪ್ರಧಾನ ಮಂತ್ರಿ ಸ್ಥಾನಕ್ಕೆ ಪಿಎಂಎಲ್–ಎನ್ ಪಕ್ಷದ ಅಧ್ಯಕ್ಷ ಶೆಹಬಾಜ್ ಷರೀಫ್ ಮತ್ತು ಮಾಜಿ ಆಡಳಿತರೂಢ ತೆಹ್ರಿಕ್–ಇ– ಇನ್ಸಾಫ್ ಪಕ್ಷದಿಂದ ಶಾ ಮೊಹಮ್ಮದ್ ಖುರೇಷಿ ನಾಮ ಪತ್ರ ಸಲ್ಲಿಸಿದ್ದಾರೆ. ನ್ಯಾಷನಲ್ ಅಸೆಂಬ್ಲಿಯಿಂದ ನಾಮಪತ್ರ ಸಲ್ಲಿಕೆಗೆ ನಿಗದಿಪಡಿಸಲಾದ ಗಡುವಿನಲ್ಲಿ 70 ವರ್ಷದ ಶೆಹಬಾಜ್ ಷರೀಫ್ ,ನೂತನ ಪ್ರಧಾನಿ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದಾರೆ ಎಂದು ದಿ ಎಕ್ಸ್ ಪ್ರೆಸ್ ಟ್ರಿಬ್ಯೂನ್ ವರದಿ ಮಾಡಿದೆ. ಪಿಎಂಎಲ್–ಎನ್ ಪಕ್ಷದ ಹಿರಿಯ ಮುಖಂಡರಾದ ಖಾವಾಜ ಅಸಿಫ್ ಮತ್ತು ರಾಣಾ ತನ್ವೀರ್ ಶೆಹಬಾಜ್ ಷರೀಫ್ ಹೆಸರನ್ನು ಅನುಮೋದಿಸಿದರೆ, ಮಾಜಿ ವಿದೇಶಾಂಗ ಸಚಿವ ಶಾ ಮೊಹಮ್ಮದ್ ಖುರೇಷಿ, ತಮ್ಮ ಪಕ್ಷದ ಅಭ್ಯರ್ಥಿಯ ಹೆಸರನ್ನು ಅನುಮೋದಿಸಿದರು.

ಸಿಐಡಿ ತನಿಖೆಗೆ

ಈ ಸಂಬಂಧ ಕಲಬುರಗಿಯ ಚೌಕ್ ಠಾಣೆಯಲ್ಲಿ ಏ.9ರಂದು ಎಫ್‌ಐಆರ್ ದಾಖ ಲಾಗಿದೆ. ನ್ಯಾಯಯುತವಾಗಿ ಪರೀಕ್ಷೆ ಬರೆದವರು ಇದ್ದಾರೆ. ಕಷ್ಟಪಟ್ಟು ಪರೀಕ್ಷೆ ಬರೆದವರು ಇದ್ದಾರೆ. ಏ.7ರಂದು ನಮ್ಮ ಕೈಗೆ ಸಿಕ್ಕಿದ ಓಎಂಆರ್ ಶೀಟ್‌ಗೂ ಅಸಲಿ ಶೀಟ್‌ಗೂ ಟ್ಯಾಲಿ ಆಗುತ್ತಿಲ್ಲ. ವಿರೇಶ್ ಎಂಬ ಅಭ್ಯರ್ಥಿಯನ್ನು ಈಗಾಗಲೇ ವಿಚಾರಣೆಗೆ ವಶಕ್ಕೆ ಪಡೆಯ ಲಾಗಿದೆ. ಸತ್ಯಾಸತ್ಯತೆ ಹೊರತರಲು ವಿಚಾರಣೆ ನಡೆಯುತ್ತಿದೆ. 21 ಮಾರ್ಕ್ಸ್‌ಗೆ ಉತ್ತರ ಬರೆಯ ದವನಿಗೆ 100 ಮಾರ್ಕ್ಸ್ ಬಂದಿದೆ ಎನ್ನುವ ಬಗ್ಗೆಯೂ ತನಿಖೆ ನಡೆಸಲಾಗುತ್ತಿದೆ ಎಂದರು.

ಕೈವಾರ ಸದ್ಗುರು ನಾರೇಯಣಯೋಗಿಗಳ ಕುರಿತ ರಾಷ್ಟ್ರೀಯ ವಿಚಾರಗೋಷ್ಠಿ

ಶಾಂತಿ–ಸಹಿಷ್ಣುತೆ ಇಲ್ಲದೆ ಸಮಾಜದ ಅಭಿವೃದ್ಧಿ ಅಸಾಧ್ಯ

'ಕೈವಾರ ತಾತಯ್ಯನವರ ಚಿಂತನೆಗಳು' ಕೃತಿ ಬಿಡುಗಡೆಗೊಳಿಸಿ ಮಾಜಿ ಸಚಿವ ಎಂ.ಆರ್.ಸೀತಾರಾಮ್ ಅಭಿಮತ



ಮೈಸೂರಿನ ಮಾನಸ ಗಂಗೋತ್ರಿಯ ಲಲಿತ ಕಲೆಗಳ ಕಾಲೇಜು ಸಭಾಂಗಣದಲ್ಲಿ ಭಾನುವಾರ 'ಕೈವಾರ ತಾತಯ್ಯನವರ ಚಿಂತನೆಗಳು' ಕೃತಿಯನ್ನು ಮಾಜಿ ಸಚಿವ ಎಂ.ಆರ್.ಸೀತಾರಾಮ್ ಬಿಡುಗಡೆಗೆ ಮಾತನಾಡಿದರು.

ಮೈಸೂರು,ಏ.10(ಪಿಎಂ)– ಪ್ರಸ್ತುತ ನಮ್ಮ ಸಮಾಜದಲ್ಲಿ ಜನಸಮುದಾಯಗಳನ್ನು ಇಬ್ಭಾಗ ಮಾಡುವ ಕೆಲಸಗಳೇ ಹೆಚ್ಚಾ ಗುತ್ತಿದ್ದು, ಶಾಂತಿ–ಸಹಿಷ್ಣುತೆ ಇಲ್ಲವಾದರೆ ಯಾವುದೇ ಸಮಾಜದ ಅಭಿವೃದ್ಧಿ ಅಸಾಧ್ಯ. ಇದನ್ನೇ ಕೈವಾರ ತಾತಯ್ಯನವರು ತಮ್ಮ ಚಿಂತನೆಗಳಲ್ಲಿ ಹೇಳಿದ್ದಾರೆ ಎಂದು ಮಾಜಿ ಸಚಿವರೂ ಆದ ಎಂ.ಎಸ್.ರಾಮಯ್ಯ ಶಿಕ್ಷಣ ಸಂಸ್ಥೆಗಳ ಉಪಾಧ್ಯಕ್ಷ ಎಂ.ಆರ್. ಸೀತಾರಾಮ್ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಸ ಗಂಗೋತ್ರಿಯ ಲಲಿತ ಕಲೆಗಳ ಕಾಲೇಜು ಸಭಾಂಗಣದಲ್ಲಿ ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯ, ಶ್ರೀ ಯೋಗಿನಾರೇಯಣ ಯತೀಂದ್ರರ ಪ್ರಚಾರ ಸಭಾದ ಜಂಟಿ ಆಶ್ರಯದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಕೈವಾರ ಸದ್ಗುರು ನಾರೇಯಣಯೋಗಿಗಳ ಪರಿಚಯ ಮತ್ತು ಆತ್ಮಬೋಧೆ ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಡಾ.ಟಿ.ರಮೇಶ್ ಸಂಪಾದಕತ್ವದ 'ಕೈವಾರ ತಾತಯ್ಯನವರ ಚಿಂತನೆಗಳು' ಕೃತಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಇಂದು ನಮ್ಮ ಸಮಾಜದಲ್ಲಿ ಸಹಿಷ್ಣುತೆ ಕಳೆದುಕೊಳ್ಳುತ್ತಿದ್ದೇವೆ. ಒಬ್ಬರು ಮತ್ತೊಬ್ಬರನ್ನು ಸಹಿಸಿಕೊಳ್ಳುವ ತಾಳ್ಮೆ, ಮನೋಭಾವ ಇಲ್ಲವಾಗುತ್ತಿದೆ. ನಮ್ಮ ತಂದೆ ದಿವಂಗತ ಎಂ.ಎಸ್.ರಾಮಯ್ಯನವರು ಕೈವಾರ ಕ್ಷೇತ್ರದಲ್ಲಿ ಪ್ರತಿವರ್ಷ ಸರ್ವಧರ್ಮ ಸಮ್ಮೇಳನ ಏರ್ಪಾಡು ಮಾಡುತ್ತಿದ್ದರು. ಸಮಾಜದಲ್ಲಿ ಸಾಮರಸ್ಯ ಮೂಡಿಸುವುದು ಇದರ ಉದ್ದೇಶವಾಗಿತ್ತು ಸಮಾಜದಲ್ಲಿ ಸಾಮರಸ್ಯ ಮೂಡಿದರೆ ಮಾತ್ರ ಶಾಂತಿ ನೆಲೆಸಿ, ಅಭಿವೃದ್ಧಿ ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಶಾಂತಿ, ಸಹಿಷ್ಣುತೆ, ಪ್ರೀತಿ–ವಿಶ್ವಾಸವಿಲ್ಲದ ಯಾವುದೇ ಬೋಧನೆ, ಉಪದೇಶ ವ್ಯರ್ಥ. ನಮ್ಮ ನಿತ್ಯದ ಜೀವನದಲ್ಲಿ ಪರಸ್ಪರ ಪ್ರೀತಿ–ವಿಶ್ವಾಸದಿಂದ ಬದುಕುವುದಕ್ಕೆ ಮೊದಲ ಆದ್ಯತೆ ನೀಡಬೇಕಿದೆ. ಕಳೆದ 6 ವರ್ಷಗಳಿಂದ ಯುವ ಜನತೆಗೆ ಹೆಚ್ಚು ಉದ್ಯೋಗಾವಕಾಶ ದೊರೆಯುತ್ತಿಲ್ಲ. ನಿರುದ್ಯೋಗ ಸಮಸ್ಯೆ ತಾಂಡವಾಡುತ್ತಿದೆ. ಇದರಿಂದ ಬಹುತೇಕ ಯುವ ಜನತೆ ದಾರಿ ತಪ್ಪುವಂತೆ ಆಗುತ್ತಿದೆ. ಇಂದು ಬಿಡುಗಡೆಗೊಂಡ ಕೃತಿ ಯುವ ಜನತೆಗೆ ಮಾರ್ಗ ದರ್ಶಕವಾಗಲಿದೆ ಎಂದು ಹೇಳಿದರು.

ಮನೆ ಮತ್ತು ನೆರೆಹೊರೆ ಸೇರಿದಂತೆ ಸಮಾಜದ ಪ್ರತಿ ಹಂತದಲ್ಲೂ ನಾವು ಪ್ರೀತಿ–ವಿಶ್ವಾಸದಿಂದ ನಡೆದುಕೊಳ್ಳಬೇಕು. ಆಗ ಮಾತ್ರ ದೇಶದ ಅಭಿವೃದ್ಧಿ ಸಾಧ್ಯವಾಗಲಿದ್ದು, ಜೊತೆಗೆ ದೇಶ ಉನ್ನತ ಮಟ್ಟಕ್ಕೂ ತಲುಪಲಿದೆ. ಇಂದು ಪ್ರತಿನಿತ್ಯ ಮಾಧ್ಯಮಗಳಲ್ಲಿ ನೋಡುತ್ತಿದ್ದು, ಸಮಾಜವನ್ನು ಇಬ್ಭಾಗ ಮಾಡುವ ಕೆಲಸಗಳೇ ಹೆಚ್ಚಾಗಿ ನಡೆಯುತ್ತಿವೆ. ಸಮಾಜದಲ್ಲಿ ಸಾಮರಸ್ಯ ಮರೀಚಿಕೆಯಾಗುತ್ತಿದೆ. ಪರಸ್ಪರ ಪ್ರೀತಿಸುವ ಹಾಗೂ ಶಿಕ್ಷಣಕ್ಕೆ ಒತ್ತು ನೀಡುವುದು ಸಮಾಜ ಗುರಿಯಾಗಬೇಕು. ಸಮಾಜ ಸರಿ ದಾರಿಯಲ್ಲಿ ಸಾಗಿ ಶಾಂತಿ ಸಾಮರಸ್ಯ ಮೂಡಿಸಲು ಯಾರಾದರೂ ಮುಂದಾಳತ್ವ ವಹಿಸುವ ತುರ್ತು ಅನಿವಾರ್ಯತೆ ಇದೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಕೈವಾರ ತಾತಯ್ಯನವರ ಫೋಟೋಗೆ ಪುಷ್ಪನಮನ ಸಲ್ಲಿಸಿ, ಉದ್ಘಾಟನೆ ನೆರವೇರಿಸಿದ ಶ್ರೀಕ್ಷೇತ್ರ ಕೈವಾರದ ಯೋಗಿನಾರೇಯಣ ಮಠದ ಧರ್ಮಾಧಿಕಾರಿ ಡಾ.ಎಂ.ಆರ್.ಜಯರಾಮ್, ಕೈವಾರ ತಾತಯ್ಯನವರ ಪರಿಚಯದೊಂದಿಗೆ ಪ್ರವಚನ ನೀಡಿದರು. ಇಂದು ಶ್ರೀರಾಮನವಮಿಯ ಮಹಾಪುಣ್ಯ ದಿನ. 'ರಾ' ಅಂದರೆ ಅಂತರಂಗದಲ್ಲಿರುವ ಕಲ್ಮಷ ಹೊರಗೆ ಹಾಕುವುದೆಂದು ಅರ್ಥ. 'ಮ' ಎಂದರೆ ಆಚೆ ಇರುವ ಕಲ್ಮಷ ಒಳಗೆ ತೆಗೆದುಕೊಳ್ಳದಿರುವುದು. ಅಂದರೆ ಮುಕ್ತಿ ಕೊಡುವವನೇ ರಾಮ ಎಂದು ಅವರು ಹೇಳಿದರು.

ಮನಶುದ್ಧಿ ಇಲ್ಲದೇ ಎಷ್ಟೇ ಯಜ್ಞ–ಯಾಗ, ಮಂತ್ರ ಹೇಳಿದರೂ ಮೋಕ್ಷ ದೊರೆಯುವುದಿಲ್ಲ ಎಂಬ ಸತ್ಯದ ಮಾತನ್ನು ತಾತಯ್ಯ ಹೇಳಿದ್ದಾರೆ. ಅವರು ಐದು ರಾಮನಾಮ ಸ್ಮರಣೆಯನ್ನು ನೀಡಿದ್ದಾರೆ. ಬುದ್ಧನ ಇಡೀ ಸಿದ್ಧಾಂತವನ್ನು ಒಂದು ಸಾಲಿನಲ್ಲಿ ಕೊಟ್ಟ ಕೀರ್ತಿ ತಾತಯ್ಯನವರಿಗೆ ಸಲ್ಲುತ್ತದೆ. ಕೈವಾರ ಒಂದು ಪುಣ್ಯಭೂಮಿ. 18ನೇ ಶತಮಾನದಲ್ಲಿ ಇದೇ ಪುಣ್ಯ ಭೂಮಿಯಲ್ಲಿ ತಾತಯ್ಯನವರ ಜನನವಾಯಿತು. ಸಾಮಾಜಿಕ ಪರಿವರ್ತನೆಗೆ ಅವರ ಕೊಡುಗೆ ಅಪಾರ. ಅವರ ಚಿಂತನೆಗಳು ಪ್ರಸ್ತುತ ಕಾಲಮಾನಕ್ಕೆ ಅತ್ಯಂತ ಪ್ರಸ್ತುತ ಎಂದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿಶ್ರಾಂತ ಕುಲಪತಿ ಪ್ರೊ.ಪಿ.ವೆಂಕಟರಾಮಯ್ಯ ಮಾತನಾಡಿ, 110 ವರ್ಷಗಳ ಕಾಲ ಬದುಕಿದ್ದ ಮಹಾನ್ ಸಂತರು ಕೈವಾರ ತಾತಯ್ಯ ಅವರು ದಾರ್ಶನಿಕರು, ಕವಿಗಳು ಹಾಗೂ ಬಹು ಮುಖ್ಯವಾಗಿ ಸಮಾಜ ಸುಧಾರಕರು. 'ಎಲ್ಲರ ಹುಟ್ಟು ಒಂದೇ ರೀತಿಯಲ್ಲಿ ಆಗುವ ಹಿನ್ನೆಲೆಯಲ್ಲಿ ಯಾರೂ ಮೇಲೂ ಅಲ್ಲ ಯಾರೂ ಕೀಳೂ ಅಲ್ಲ' ಎಂಬ ಅವರ ಸಂದೇಶದಲ್ಲಿ ಮಾನವ ಅರಿತು ಕೊಳ್ಳುವುದು ಸಾಕಷ್ಟು ಇದೆ ಎಂದು ಹೇಳಿದರು.

ನಮ್ಮ ಸಮಾಜದಲ್ಲಿ ಸಾಕಷ್ಟು ಸಮಾಜ ಸುಧಾರಕರು ಜನ್ಮತಾಳಿ ಸಮಾಜವನ್ನು ತಿದ್ದಿದ್ದಾರೆ. ಅದಾಗ್ಯೂ ನಮ್ಮ ಸಮಾಜದಲ್ಲಿ ಅಸಮಾನತೆ ಜೀವಂತವಾಗಿಯೇ ಉಳಿದಿದೆ. ಒಂದು ವೇಳೆ ಈ ಎಲ್ಲಾ ಮಹನೀಯರು ಜನಿಸದಿದ್ದರೆ, ನಮ್ಮ ಸಮಾಜದ ಪರಿಸ್ಥಿತಿ ಊಹಿಸಿಕೊಳ್ಳಲು ಅಸಾಧ್ಯವಾಗುತ್ತಿತ್ತು ಎಂದು ಆತಂಕ ವ್ಯಕ್ತಪಡಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಪ್ರಾಚ್ಯವಿದ್ಯಾ ಸಂಶೋಧನಾಲಯದ ವಿಶ್ರಾಂತ ನಿರ್ದೇಶಕ ಡಾ. ಎಸ್.ಶಿವರಾಜಪ್ಪ ಉದ್ಯಮಿ ಡಾ.ವಿ.ಕೆ. ಜಗದೀಶ್‌ಬಾಬು, ಬೆಂಗಳೂರು ಉತ್ತರ ವಿವಿಯ ಕುಲಪತಿ ಡಾ.ನಿರಂಜನ ವಾನಳ್ಳಿ, ಕೆಎಸ್‌ಐಐಡಿಸಿ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ, ಮೈಸೂರು ವಿವಿ ಕುಲಸಚಿವ ಪ್ರೊ.ಆರ್.ಶಿವಪ್ಪ, ರೈಟ್ಸ್ ಸಂಸ್ಥೆಯ ಹಿರಿಯ ಡಿಜಿಎಂ ಎಂ.ಜಿ. ಸುದೀಪ್, 'ಕೈವಾರ ತಾತಯ್ಯನವರ ಚಿಂತನೆಗಳು' ಕೃತಿ ಸಂಪಾದಕ ಡಾ.ಟಿ.ರಮೇಶ್, ಪ್ರಚಾರ ಸಭಾದ ಪ್ರಧಾನ ಸಂಚಾಲಕ ಹೆಚ್.ಎ. ವೆಂಕಟೇಶ್ ಮತ್ತಿತರರು ಹಾಜರಿದ್ದರು.

ಸಮಾಜ ಸುಧಾರಣೆ ಚಿಂತನೆಗಳಿಂದ ಕೈವಾರ ತಾತಯ್ಯನವರು ಪ್ರಸ್ತುತ

ಕೆಎಸ್‌ಐಐಡಿಸಿ ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ ಸ್ಮರಣೆ

ಮೈಸೂರು,ಏ.10(ಪಿಎಂ)– ಕೈವಾರ ತಾತಯ್ಯನವರು ತಮ್ಮ ಸಮಾಜ ಸುಧಾರಣೆ ಚಿಂತನೆಗಳಿಂದ ಇಂದಿಗೂ ಪ್ರಸ್ತುತ ಎಂದು ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಗಮದ (ಕೆಎಸ್‌ಐಐಡಿಸಿ) ವ್ಯವಸ್ಥಾಪಕ ನಿರ್ದೇಶಕ ಡಾ.ಎಂ.ಆರ್.ರವಿ ಸ್ಮರಿಸಿದರು.

'ಕೈವಾರ ತಾತಯ್ಯನವರ ಚಿಂತನೆಗಳು' ಕೃತಿ ಬಿಡುಗಡೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು, 30 ವರ್ಷಗಳ ಹಿಂದೆ ನನಗೆ ತಾತಯ್ಯನವರ ಪರಿಚಯವಾಯಿತು. ಆಗ ನಾನು ಮೇಸ್ತ್ರಿಯಾಗಿ ಕೆಲಸ ಮಾಡುತ್ತಿದ್ದೆ. ಈ ವೇಳೆ ಮೈಸೂರಿನಿಂದ ಚಿಂತಾಮಣಿಗೆ ವರ್ಗಾವಣೆ ಆಯಿತು. ಚಿಂತಾಮಣಿಗೆ ಮಗ್ಗುಲಲ್ಲೇ ಕೈವಾರ ಕ್ಷೇತ್ರವಿದೆ. ವಿದ್ಯಾರ್ಥಿಗಳೊಂದಿಗೆ ಈ ಕ್ಷೇತ್ರಕ್ಕೆ ಭೇಟಿ ನೀಡುತ್ತಿದ್ದೆ. ಈ ಸಂದರ್ಭದಲ್ಲಿ ತಾತಯ್ಯನವರ ಬಗ್ಗೆ ಅರಿತುಕೊಂಡೆ ಎಂದರು.

ಬಳಿಕ ಪುಸ್ತಕಗಳ ಮೂಲಕ ಹೆಚ್ಚು ತಿಳಿದುಕೊಂಡೆ. ಅತ್ಯಂತ ಆತ್ಮೀಯವಾಗಿ ನಾರಾಯಣಪ್ಪ ಎಂದೂ ಅವರನ್ನು ಕರೆಯಲಾಗುತ್ತದೆ. ಕೈವಾರ ಈಗ ಅತ್ಯಂತ ಪವಿತ್ರ ಯಾತ್ರಾ ಸ್ಥಳವಾಗಿ ಮಾರ್ಪಟ್ಟಿದೆ. ಜೊತೆಗೆ ಪ್ರೇಕ್ಷಣೀಯ ಸ್ಥಳವೂ ಆಗಿದೆ ಎಂದು ಹೇಳಿದರು.

12ನೇ ಶತಮಾನದ ಎಲ್ಲಾ ವಚನಕಾರರು ಕಾಯಕ ಸಮಾಜದಿಂದ ಬಂದವರು. ಕಾಯಕದಿಂದಲೇ ಅತ್ಯುತ್ತಮ ಜೀವನ ಮೌಲ್ಯಗಳನ್ನು ಸಮಾಜಕ್ಕೆ ನೀಡಿದರು. ಅಲ್ಲದೆ, ನುಡಿದಂತೆ ನಡೆದು ತೋರಿಸಿದರು. ಅಂತೆಯೇ ತಾತಯ್ಯನವರು ಸಾಮಾನ್ಯನಾಗಿ ಅಸಾಮಾನ್ಯರಾಗಿ ಬೆಳೆದವರು. ಸಮಾಜದಲ್ಲಿನ ಏರು–ಪೇರು, ತಾರತಮ್ಯ, ಅಸಮಾನತೆ ವಿರುದ್ಧ ಮನಸ್ಸು ಮಿಡಿಯುವುದೇ ನಿಜವಾದ ಮನಷ್ಯತ್ವ. ಅಂತಹ ಮೌಲ್ಯಯುತ ಬದುಕನ್ನು ಸಾಮಾನ್ಯ ಬಳೆ ವ್ಯಾಪಾರಿಯಾಗಿದ್ದ ತಾತಯ್ಯನವರಲ್ಲಿ ಕಾಣಬಹುದು. ಆದರೆ ನಾವಿಂದು ಉನ್ನತ ಶಿಕ್ಷಣ ಪಡೆದರೂ ಅಂತಹ ಮೌಲ್ಯಾಧಾರಿತ ಜೀವನ ನಡೆಸುವಲ್ಲಿ ಹಿಂದೆ ಉಳಿದಿದ್ದೇವೆ ಎಂದು ವಿಷಾದಿಸಿದರು. ಸಣ್ಣ ಕಾಯಕ ಮಾಡಿಕೊಂಡು ಸಮಾಜದ ಅಂಕುಡೊಂಕು ತಿದ್ದುವ ಮೂಲಕ ತಾತಯ್ಯನವರು ಆದರ್ಶವಾದ ಮಾರ್ಗ ಹಾಕಿಕೊಟ್ಟಿದ್ದಾರೆ. ನಮ್ಮ ಕೆಲಸ ಆ ಮಾರ್ಗದಲ್ಲಿ ಸಾಗುವುದಷ್ಟೇ. ಆದರೆ ಕೇವಲ ಮಾರ್ಗದಲ್ಲಿ ಸಾಗಲು ನಾವು ಸಿದ್ಧರಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರೊ.ಸಿ.ಎನ್. ಶ್ರೀನಾಥ್ ಅವರಿಗೆ 'ಯತೀಂದ್ರ ಶ್ರೀ' ಪ್ರಶಸ್ತಿ ಪ್ರದಾನ



ಮೈಸೂರು, ಏ.9(ಜಿಎ)– ಮೈಸೂರಿನ ಮಾನಸ ಗಂಗೋತ್ರಿಯ ಲಲಿತ ಕಲೆಗಳ ಕಾಲೇಜು ಸಭಾಂಗಣದಲ್ಲಿ ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯ, ಶ್ರೀ ಯೋಗಿನಾರೇಯಣ ಯತೀಂದ್ರರ ಪ್ರಚಾರ ಸಭಾದ ಜಂಟಿ ಆಶ್ರಯದಲ್ಲಿ ಭಾನುವಾರ ಸಂಜೆ ಆಯೋಜಿಸಿದ್ದ ಕೈವಾರ ಸದ್ಗುರು ನಾರೇಯಣಯೋಗಿಗಳ ಪರಿಚಯ ಮತ್ತು ಆತ್ಮಬೋಧೆ, ರಾಷ್ಟ್ರೀಯ ವಿಚಾರಗೋಷ್ಠಿಯಲ್ಲಿ ಭಾಗವಹಿಸಿದ ಅವರು ಧ್ವನ್ಯಾಲೋಕ ಅಧ್ಯಕ್ಷ ಪ್ರೊ.ಸಿ.ಎನ್. ಶ್ರೀನಾಥ್ ಅವರಿಗೆ 'ಯತೀಂದ್ರ ಶ್ರೀ' ಪ್ರಶಸ್ತಿ ಪ್ರದಾನ ಮಾಡಲಾಯಿತು.

ನಂತರ ಮಾತನಾಡಿದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಗಳು, ಇಂದಿನ ಈ ಕಾರ್ಯಕ್ರಮ ಎರಡು ಬಾರಿ ನಿಗದಿಯಾಗಿ ಆಹ್ವಾನ ಪತ್ರಿಕೆ ಮುದ್ರಣವಾಗಿ ಕಾರಣಾಂತರದಿಂದ ರದ್ದಾಗಿತ್ತು. ಆದರೇ ಕೈವಾರ ತಾತಯ್ಯ ಅವರ ಇಚ್ಛೆ ಅನಿಸುತ್ತದೆ.ರಾಮನವಮಿಯ ದಿನವೇ ಇತಂಹ ವಿಶೇಷ ಕಾರ್ಯಕ್ರಮ ನಡೆದಿದೆ ಎಂದರು.

ಭಾರತಿಯ ಪರಂಪರೆಯಲ್ಲಿ ಸಾಧನೆ ಮತ್ತು ಮೋಕ್ಷ ಪಡೆಯಲು ಹಲವಾರು ಮಾರ್ಗಗಳಿವೆ ಅದರಂತೆ ಕೈವಾರ ತಾತಯ್ಯ ಅವರು ಭಕ್ತಿ ಮಾರ್ಗವನ್ನು ಅನುಸರಿಸಿದರು. ಜೀವನದಲ್ಲಿ ಒಂದು ಘಟನೆ ಜೀವನವನ್ನು ಬದಲಾಯಿಸುತ್ತದೆ ಎಂಬುದಕ್ಕೆ ಕೈವಾರ ತಾತಯ್ಯನವರ ಜೀವನವೇ ಸಾಕ್ಷಿ. ಭಕ್ತಿ ಮಾರ್ಗವನ್ನು ಆಯ್ಕೆ ಮಾಡಿಕೊಂಡಿಕೊಳ್ಳುವುದರ ಮೂಲಕ ಮೋಕ್ಷಕ್ಕೆ ಸೂಕ್ತ ಮಾರ್ಗ ಎಂದು ಅವರು ಇದನ್ನು ಆಯ್ಕೆ ಮಾಡಿಕೊಂಡಿದ್ದರು ಎಂದರು.

ಕಾರ್ಯಕ್ರಮದಲ್ಲಿ ಶ್ರೀಕ್ಷೇತ್ರ ಕೈವಾರ ಧರ್ಮಾಧಿಕಾರಿ ಡಾ.ಎಂ.ಆರ್. ಜಯರಾಮ್, ವಿಜ್ಞಾನ ಫೌಂಡೇಶನ್ ಫಾರ್ ಸೈನ್ಸ್ ಟೆಕ್ನಾಲಾಜಿ ಅಂಡ್ ರೀಸರ್ಚ್ ಕುಲಪತಿ ಪ್ರೊ.ಪಿ. ನಾಗಭೂಷಣ್, ಇತಿಹಾಸ ತಜ್ಞ ಪ್ರೊ.ಎಂ.ವಿ. ಶ್ರೀನಿವಾಸ್, ಹಿರಿಯ ಪತ್ರಕರ್ತ ಕೆ. ಶಿವಕುಮಾರ್, ಗುಲ್ಬರ್ಗ ವಿವಿ ವಿಶ್ರಾಂತ ಕುಲಪತಿ ಡಾ.ಎಸ್.ಆರ್. ನಿರಂಜನ, ಮೈಸೂರು ವಿವಿ ಕುಲಸಚಿವ ಆರ್.ಶಿವಪ್ಪ ಮೈಸೂರು ವಿವಿ ಗಾಂಧಿ ಅಧ್ಯಯನ ಸಂಸ್ಥೆ ನಿರ್ದೇಶಕ ಡಾ.ಎಂ.ಎಸ್. ಶೇಖರ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಡಾ. ಚೈತ್ರ ನಾರಾಯಣ, ನಿವೃತ್ತ ಇಂಜಿನಿಯರ್ ಕೆ.ಪಾಂಡುರಂಗಯ್ಯ, ಶ್ರೀ ಯೋಗಿನಾರೇಯಣ ಯತೀಂದ್ರರ ಪ್ರಚಾರ ಸಭಾ ಪ್ರಧಾನ ಸಂಚಾಲಕ ಹೆಚ್.ಎ. ವೆಂಕಟೇಶ್ ಹಾಗೂ ಮೈಸೂರು ವಿವಿ ಪ್ರಾಚ್ಯವಿದ್ಯಾ ಸಂಶೋಧನಾಲಯ ನಿರ್ದೇಶಕ ಡಾ.ಕೆ.ವಿ. ರಾಮಪ್ರಿಯ ಸೇರಿದಂತೆ ಮತ್ತಿತರರಿದ್ದರು.

ಆತ್ಮರಕ್ಷಣೆಗಾಗಿ ಬಂದೂಕು ತರಬೇತಿ: ಸಿಎಆರ್‌ಡಿಸಿಪಿ ಶಿವರಾಜು



ಮೈಸೂರು,ಏ.10(ಎಂಟಿವೈ)– ಸಮಾಜಘಾತುಕ ಶಕ್ತಿಗಳಿಂದ ಆಗುವ ಅನಾಹುತಗಳನ್ನು ತಪ್ಪಿಸಲು ಹಾಗೂ ಆತ್ಮರಕ್ಷಣೆ ಮಾಡಿಕೊಳ್ಳಲು ನಾಗರಿಕರು ಬಂದೂಕು ತರಬೇತಿ ಪಡೆದುಕೊಳ್ಳಬೇಕು ಎಂದು ಮೈಸೂರು ಸಿಟಿ ಸಿವಿಲಿಯನ್ ರೈಫಲ್ ಅಸೋಸಿಯೇಷನ್ ಕಾರ್ಯದರ್ಶಿಗಳೂ ಆದ ಸಿಎಆರ್‌ಡಿಸಿಪಿ ಶಿವರಾಜು ಸಲಹೆ ನೀಡಿದ್ದಾರೆ.

ಮೈಸೂರು ನಗರ ಪೊಲೀಸ್ ಸ್ಪೋರ್ಟ್ಸ್ ಕ್ಲಬ್‌ನಲ್ಲಿ ನಡೆದ ನಾಗರಿಕ ಬಂದೂಕು ತರಬೇತಿ ಶಿಬಿರದ ಸಮಾರೋಪ ಸಮಾರಂಭದಲ್ಲಿ ಬಂದೂಕು ತರಬೇತಿ ಪಡೆದವರಿಗೆ ಪ್ರಮಾಣ ಪತ್ರ ವಿತರಿಸಿದ ಬಳಿಕ ಮಾತನಾಡಿದ ಅವರು, ನಾಗರಿಕರಿಗೆ ಪೊಲೀಸ್ ಇಲಾಖೆ ವತಿಯಿಂದಲೇ ಬಂದೂಕು ತರಬೇತಿ ನೀಡುವ ಕಾರ್ಯಾಗಾರವನ್ನು ಮೊದಲಿನಿಂದಲೂ ನಡೆಸುತ್ತಾ ಬಂದಿದೆ. ಸಮಾಜಘಾತುಕ ಶಕ್ತಿಗಳಿಂದ ರಕ್ಷಣೆ ಪಡೆಯಲು ಬಂದೂಕು ಬಳಸುವ ಬಗೆ ಕುರಿತು ತರಬೇತಿ ಪಡೆದುಕೊಳ್ಳುವುದು ಸೂಕ್ತ ಆಸಕ್ತರು ಕಾರ್ಯಾಗಾರದಲ್ಲಿ ಪಾಲ್ಗೊಳ್ಳಬಹುದಾಗಿದೆ ಎಂದರು.

ಸಾರ್ವಜನಿಕರ ಪ್ರಾಣ ಮತ್ತು ಆಸ್ತಿ ರಕ್ಷಣೆ ಮಾಡುವುದು ಪೊಲೀಸರ ಕರ್ತವ್ಯವಾಗಿದ್ದು ಈ ನಿಟ್ಟಿನಲ್ಲಿ ನಿಮ್ಮ ಆತ್ಮರಕ್ಷಣೆಗೆ ತರಬೇತಿಯನ್ನು ನೀಡಲಾಗಿದೆ. ಕಾರ್ಯಾಗಾರದಲ್ಲಿ ರೈಫಲ್ ಬಳಸುವ ನೀತಿ, ನಿಯಮಗಳನ್ನು ತಿಳಿಸಲಾಗುತ್ತದೆ. ಈ ತರಬೇತಿಯನ್ನು ಜನವರಿ ಅಥವಾ ಫೆಬ್ರವರಿಯಲ್ಲಿ ನಡೆಸಲಾಗುತ್ತದೆ. ಒಂದು ಬ್ಯಾಚ್‌ನಲ್ಲಿ 40 ಜನರಿಗೆ ಅವಕಾಶ ನೀಡಲಾಗುತ್ತದೆ. ನುರಿತ ತರಬೇತುದಾರರಿಂದ ಕಾರ್ಯಾಗಾರ ನಡೆಸಲಾಗುತ್ತದೆ. ಸಾರ್ವಜನಿಕರು ಇದರ ಸದುಪಯೋಗವನ್ನು ಪಡೆದುಕೊಂಡು ಉತ್ತಮ ಜೀವನ ನಡೆಸಬೇಕೆಂದು ಸಲಹೆ ನೀಡಿದರು.

ಕಾರ್ಯಾಗಾರದಲ್ಲಿ ಉತ್ತಮ ಪ್ರದರ್ಶನ ನೀಡಿ ಪ್ರಥಮ ಸ್ಥಾನ ಪಡೆದ ಅಭಿರಾಜ್, ದ್ವಿತೀಯ ಸ್ಥಾನ ಪಡೆದ ಹಿದಾಯತ್ ಉಲ್ಲಾ ಶರೀಫ್, ತೃತೀಯ ಸ್ಥಾನ ಪಡೆದ ಮಂಜುನಾಥ್ ಎಸ್.ಗೌಡ ಅವರಿಗೆ ಟ್ರೋಫಿ ವಿತರಿಸಲಾಯಿತು. ಅಲ್ಲದೆ, ತರಬೇತಿ ಪಡೆದ ಎಲ್ಲರಿಗೂ ಪ್ರಮಾಣ ಪತ್ರ ನೀಡಲಾಯಿತು. ಇದೇ ವೇಳೆ ಬಂದೂಕು ತರಬೇತಿ ಪಡೆದ ನಾಡನಹಳ್ಳಿ ರವಿ, ಮಂಜುನಾಥ್ ಎಸ್.ಗೌಡ ಕಾರ್ಯಾಗಾರದಲ್ಲಿ ಬಂದೂಕು ಬಳಸುವುದರ ತರಬೇತಿ ಪಡೆದ ಬಗ್ಗೆ ವಿವರಿಸಿದರು.

ಸಮಾರಂಭದಲ್ಲಿ ಮೈಸೂರು ಸಿಟಿ ಸಿವಿಲಿಯನ್ ರೈಫಲ್ ಅಸೋಸಿಯನ್ ಜಂಟಿ ಕಾರ್ಯದರ್ಶಿ ಹಾಗೂ ಸಿಎಆರ್ ಎಸಿಪಿ ಹೆಚ್.ವಿ.ವೀರಣ್ಣ, ಶಸ್ತ್ರಾಗಾರದ ಉಸ್ತುವಾರಿ ಇನ್‌ಸ್ಪೆಕ್ಟರ್ ರಾಮು, ತರಬೇತುದಾರರಾದ ಶ್ರೀಧರ್, ಮಾದೇಗೌಡ, ಹೇಮಂತ್‌ಕುಮಾರ್, ಸಂಯೋಜಕರಾದ ಚನ್ನಬಸವಯ್ಯ ಉಪಸ್ಥಿತರಿದ್ದರು. ವಾಣಿಶ್ರೀ ಭಟ್ ಪ್ರಾರ್ಥಿಸಿದರೆ, ಸ್ಫೂರ್ತಿರಾಜ್ ವಿವೇಕ್ ಸ್ವಾಗತಿಸಿದರು. ಹಿತೈಷಿ ಭಟ್ ವಂದಿಸಿದರು.

ಸಾಹಿತ್ಯ ಸಮ್ಮೇಳನಗಳಲ್ಲಿ ರಾಜಕೀಯ ಸಾಹಿತ್ಯ ಇರಬೇಕು


ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಅಭಿಪ್ರಾಯ

'ಸಿಪಿಕೆ ಎಂಬತ್ತರ ತುಂಬು ತಳಕು', 'ಕುವೆಂಪು ಕುರಿತು ಕೆಲ ಹೆಜ್ಜೆ ಗುರುತು' ಕೃತಿಗಳ ಬಿಡುಗಡೆ

ಮೈಸೂರು, ಏ.9(ಜಿಎ)– ಸಾಹಿತ್ಯ ಸಮ್ಮೇಳನಗಳಲ್ಲಿ ರಾಜಕೀಯ ಸಾಹಿತ್ಯ ಅಳವಡಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್. ವಿಶ್ವನಾಥ್ ಅವರು ಅಭಿಪ್ರಾಯಪಟ್ಟಿದ್ದಾರೆ.

ವಿಜಯನಗರದಲ್ಲಿರುವ ಜಿಲ್ಲಾ ಸಾಹಿತ್ಯ ಭವನದಲ್ಲಿ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಸಂವಹನ : ಪ್ರಕಾಶಕರು ವತಿಯಿಂದ ಏರ್ಪಡಿಸಿದ್ದ ಸಮಾರಂಭದಲ್ಲಿ ಹಿರಿಯ ಸಾಹಿತಿ ಡಾ.ಸಿ.ಪಿ. ಕೃಷ್ಣಕುಮಾರ್ ಅವರ 83ನೇ ಹುಟ್ಟುಹಬ್ಬದ ಆಚರಣೆ ಹಿನ್ನೆಲೆಯಲ್ಲಿ ಸಾಹಿತಿ ಭೈರವಮೂರ್ತಿ ಅವರ ಸಂಪಾದಕತ್ವದ 'ಸಿಪಿಕೆ ಎಂಬತ್ತರ ತುಂಬು ತಳಕು' ಹಾಗೂ ಸಿಪಿಕೆ ಅವರು ಬರೆದಿರುವ 'ಕುವೆಂಪು ಕುರಿತು ಕೆಲ ಹೆಜ್ಜೆಗುರುತು' ಕೃತಿಗಳನ್ನು ವಿಧಾನ ಪರಿಷತ್ ಸದಸ್ಯ ಅಡಗೂರು ಎಚ್. ವಿಶ್ವನಾಥ್ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ನಾನು ವಿದ್ಯಾರ್ಥಿ ದೆಸೆಯಿಂದ ಸಿಪಿಕೆ ಮತ್ತು ದೇಜಗೌ ಅವರನ್ನು ನೋಡುತ್ತ ಬಂದಿದ್ದೇನೆ. ಅವರು ಕನ್ನಡ ಚಳುವಳಿಗಳಲ್ಲಿ ಮುಂಚೂಣಿಯಲ್ಲಿ ಪಾಲ್ಗೊಳ್ಳುತ್ತಿದ್ದರು.



ಅದರಲ್ಲೂ ಸಿಪಿಕೆ ಅವರು ಕುವೆಂಪು ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ನೇರ, ಸರಳ ಮತ್ತು ಯಾವುದೇ ಗೊಂದಲಕ್ಕೊಳಗಾಗದೆ ಪುಸ್ತಕಗಳನ್ನು ಬರೆಯುತ್ತ ಬಂದಿದ್ದಾರೆ. ಎಂದ ಅವರು ನನ್ನ ಮತಸಂತೆ ಪುಸ್ತಕವನ್ನು ಅಂದಿನ ಲೋಕಸಭೆ ಚುನಾವಣೆಯ ಒತ್ತಡದ ನಡುವೆ ಫಲಿತಾಂಶಕ್ಕೆ 15 ದಿನ ಬಾಕಿ ಇರುವಂತೆ ಬರೆದು ಮುಗಿಸಿದೆ. ಅದಕ್ಕೆ ಮುನ್ನುಡಿಯನ್ನು ಸಿಪಿಕೆ ಅವರೇ ಬರೆದುಕೊಟ್ಟರು ಎಂದು ಸ್ಮರಿಸಿದರು.

ಕರ್ನಾಟಕ ರಾಜ್ಯದಲ್ಲಿ ಅನೇಕ ಬಗೆಯ ಸಾಹಿತ್ಯಗಳಿದ್ದು, ಅವುಗಳಿಗೆ ಸಾಹಿತ್ಯ ಸಮ್ಮೇಳನಗಳಲಿ ಹೆಚ್ಚು ಒತ್ತು ನೀಡಲಾಗುತ್ತಿದೆ. ಆದರೆ ರಾಜಕೀಯ ಸಾಹಿತ್ಯಕ್ಕೂ ಸಾಹಿತ್ಯ ಲೋಕದಲ್ಲಿ ಅವಕಾಶ ಕಲ್ಪಿಸಬೇಕು. ಅದರಲೂ ರಾಜ್ಯ, ಜಿಲ್ಲಾ, ತಾಲೂಕು ಮಟ್ಟದ ಸಾಹಿತ್ಯ ಸಮೇಳನಗಳಲ್ಲಿ ವಿಶೇಷ ಆದ್ಯತೆ ನೀಡಬೇಕು. ಏಕೆಂದರೆ ನಾವು ಜನತಂತ್ರ ವ್ಯವಸ್ಥೆಯಲ್ಲಿ ಬದುಕುತ್ತಿದ್ದೇವೆ. ಆದರೆ ಇಂದಿನ ಯುವ ಪೀಳಿಗೆಗೆ ನಾವು ಯಾವ ವ್ಯವಸ್ಥೆಯಡಿ ಜೀವನ ನಡೆಸುತ್ತಿದ್ದೇವೆ ಎಂಬ ಅರಿವೆ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದ ಅವರು ಇತ್ತೀಚಿನ ದಿನಗಳಲ್ಲಿ ರಾಜಕಾರಣ ಮತ್ತು ರಾಜಕಾರಣಿ ಎಂದರೆ ವೈಲಿಗೆ ಎಂಬ ಭಾವನೆಯಲ್ಲಿ ಜನ ನೋಡುತ್ತಿದ್ದಾರೆ. ಆದ್ದರಿಂದ ಸಾಹಿತಿಗಳು ರಾಜಕಾರಣ ಮತ್ತು ಆಡಳಿತದ ಬಗ್ಗೆ ಬರೆಯಬೇಕು ಎಂದರು.

ಗ್ರಾಮ ಪಂಚಾಯಿತಿ ಹಾಗೂ ಲೋಕಸಭಾ ಸದಸ್ಯರು ತಮ್ಮ ರಾಜಕೀಯದ ಅನುಭವಗಳನ್ನು ರಾಜಕೀಯ ಸಾಹಿತ್ಯದ ಮೂಲಕ ತಿಳಿಸಬೇಕು. ಅದಕ್ಕಾಗಿ ನಾನು ಎಂಎಲ್‌ಸಿ ಅನುದಾನದಡಿಯಲ್ಲಿ ಸುಮಾರು 50ಲಕ್ಷ ರೂ. ಗಳನ್ನು ನೀಡುವಂತೆ ವಿಶೇಷವಾಗಿ ಅನುಮತಿ ಕೇಳಿದ್ದೇನೆ ಎಂದ ಅವರು ನಾನು ಸಹ ಕೆಲ ಪುಸ್ತಕಗಳನ್ನು ಬರೆದಿದ್ದೇನೆ ಅದಕ್ಕೆ ನಮ್ಮನ್ನು ಸಾಹಿತಿಗಳು ಎಂದು ಸಂಭೋದಿಸಬೇಡಿ. ಅದರಿಂದ ಸಾಹಿತ್ಯ ಲೋಕಕ್ಕೆ ಅವಮಾನವಾಗುತ್ತದೆ. ಸಾಹಿತಿಗಳು ಎಂದರೆ ಅದಕ್ಕೆ ಶ್ರೇಷ್ಠ ಸ್ಥಾನವಿದೆ ಎಂದು ಅಡಗೂರು ಹೆಚ್. ವಿಶ್ವನಾಥ್ ತಿಳಿಸಿದರು.

ಹಿರಿಯ ಸಾಹಿತಿ ಸಿಪಿಕೆ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡಿಕೆರೆ ಗೋಪಾಲ್, ವಿದ್ವಾಂಸ ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್, ವಿಮರ್ಶಕ ಪ್ರೊ.ಸಿ. ನಾಗಣ್ಣ, ಸಾಹಿತ್ಯ ಲೋಕ ಅಧ್ಯಕ್ಷ ಡಾ.ವೈ.ಡಿ. ರಾಜಣ್ಣ, ಸಂವಹನ ಪ್ರಕಾಶನ ಮಾಲೀಕ ಡಿ.ಎನ್. ಲೋಕಪ್ಪ ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

> "ರಾಜ್ಯದಲ್ಲಿ ಅನ್ನವನ್ನು ಕಸಿದುಕೊಳ್ಳುವ ಕೆಲಸ ನಡೆಯುತ್ತಿದ್ದು, ಮನುಷ್ಯತ್ವ ಮಾಯವಾಗುತ್ತಿದೆ. ಆದರಿಂದ ಸಾಹಿತಿಗಳು ಈ ವಿಚಾರಗಳ ಬಗ್ಗೆ ಬಹಿರಂಗವಾಗಿ ಬರೆಯಬೇಕು. ಏಕೆಂದರೆ ಒಂದು ಬಂದೂಕಿಗಿಂತ ಪೆನ್‌ಗೆ ಬಹಳ ಶಕ್ತಿಯಿದೆ. ರಾಜ್ಯದ ಪ್ರಸ್ತುತ ವಿದ್ಯಮಾನದಿಂದ ವೈಯಕ್ತಿಯವಾಗಿ ಬಹಳ ನೋವನ್ನು ಅನುಭವಿಸುತ್ತಿದ್ದೇನೆ.
> - ಅಡಗೂರು ಹೆಚ್. ವಿಶ್ವನಾಥ್, ವಿಧಾನ ಪರಿಷತ್ ಸದಸ್ಯರು

ಸಂವಿಧಾನ ದೇಶದ ಶ್ರೇಷ್ಠ ಗ್ರಂಥ: ಹೆಚ್.ವಿಶ್ವನಾಥ್



ಹುಣಸೂರು, ಏ.10(ಕೆಕೆ)– ಸಂವಿಧಾನ ದೇಶದ ಶ್ರೇಷ್ಠ ಗ್ರಂಥ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಬಾಬು ಜಗಜೀವನರಾಂ ಜಯಂತಿ ಅಂಗವಾಗಿ ಹುಣಸೂರು ತಾಲೂಕು ಆಡಳಿತ ಆಯೋಜಿಸಿದ್ದ ನವರಾತ್ರೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸಂವಿಧಾನದಲ್ಲಿ ಎಲ್ಲಾ ಜಾತಿ, ಧರ್ಮ, ಭಾಷೆಗಳ ಪ್ರಾಂತ್ಯಗಳಲ್ಲಿ ವಾಸ ಮಾಡುವ ಮತ್ತು ವಿವಿಧ ಸಂಸ್ಕೃತಿ, ಆಚರಣೆ, ಸಂಪ್ರದಾಯಗಳನ್ನೊಳಗೊಂಡ ಎಲ್ಲಾ ತರಹದ ಜನಸಾಮಾನ್ಯರಿಗೆ ಸಮಾನತೆ, ಸೋದರತೆ, ಪ್ರೀತಿ ಗೌರವಗಳಿಂದ ಹಕ್ಕುಗಳನ್ನು ಕಲ್ಪಿಸಿಕೊಡಲಾಗಿದೆ. ರಾಷ್ಟ್ರದ ಪ್ರಧಾನಿಗೂ ಒಂದೇ ಓಟು, ಕೂಲಿ ಮಾಡುವ ವ್ಯಕ್ತಿಗೂ ಒಂದೇ ಓಟು. ಸಮಾನ ಹಕ್ಕುಗಳನ್ನು ಕಲ್ಪಿಸಿಕೊಟ್ಟಿರುವುದು ನಮ್ಮ ಸಂವಿಧಾನ ಎಂದರು.

ಬೇರೆ ಧರ್ಮಗಳಲ್ಲಿ ಆ ಧರ್ಮಗಳಿಗೆ ಒಳಪಡುವ ಧರ್ಮ ಗ್ರಂಥಗಳು ಆ ಧರ್ಮದ ಜನರಿಗೆ ಮಾತ್ರ ಸೀಮಿತವಾಗಿರುತ್ತವೆ. ಆದರೆ ಭಾರತ ಸಂವಿಧಾನ ಎಲ್ಲಾ ಜಾತಿ, ಧರ್ಮಗಳನ್ನು ಮೀರಿ ಮನುಕುಲದ 12ನೇ ಶತಮಾನದ ಅನುಭವ ಮಂಟಪದ ಸಮಾನತೆ, ಸಾಮಾಜಿಕ ನ್ಯಾಯ, ಶಿಕ್ಷಣ, ಸ್ವತಂತ್ರ, ಪ್ರೀತಿ ಗೌರವಗಳಿಂದ ಬದುಕುವ ಅವಕಾಶಗಳನ್ನು ಕಲ್ಪಿಸಿಕೊಟ್ಟಿದೆ. ಇಂತಹ ಶ್ರೇಷ್ಠ ಗ್ರಂಥವನ್ನು ಶೋಷಿತ ಸಮುದಾಯಗಳ ಸಮಾನತೆಗೆ ಹೋರಾಟ ಮಾಡಿದ ಡಾ.ಬಿ.ಆರ್.ಅಂಬೇಡ್ಕರ್ ರಚಿಸಿರುವುದು ಇಡೀ ಪ್ರಪಂಚಕ್ಕೆ ಮಾದರಿಯಾಗಿದೆ. ಇಂತಹ ಸಮಾನತೆ ಸಾರುವ ಸಂವಿಧಾನದಡಿ ನಾವು ಇಂದು ಬದುಕಲು ಸಾಧ್ಯವಾಗುತ್ತಿದೆ ಎಂದರು.

ಚಿಂತಕ ನವೀನ್ ರೈ ಮಾತನಾಡಿ, ಈ ಭೂಮಿ, ಆಕಾಶ ಇರುವರೆಗೂ ಡಾ.ಬಿ.ಆರ್.ಅಂಬೇಡ್ಕರ್ ಜೀವಂತವಾಗಿರುತ್ತಾರೆ. ಅವರನ್ನು ಯಾವುದೇ ಧರ್ಮ, ಜಾತಿ, ವರ್ಗ, ಸಮುದಾಯಗಳು ಮರೆಯುವಂತಿಲ್ಲ. ಸಂವಿಧಾನದಲ್ಲಿ ದಲಿತರಿಗೆ ಮಾತ್ರವಲ್ಲ ಪ್ರತಿಯೊಬ್ಬರಿಗೂ ಅವರವರದೆ ಆದ ಪ್ರಾತಿನಿಧ್ಯ, ಮೀಸಲಾತಿ ಕಲ್ಪಿಸಿಕೊಟ್ಟಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ದಲಿತ ಮುಖಂಡರಾದ ಹರಿಹರ ಆನಂದಸ್ವಾಮಿ, ಬಸವಲಿಂಗಯ್ಯ, ನಿಂಗರಾಜ್ ಮಲ್ಲಾಡಿ, ನಾಗರಾಜ ಮಲ್ಲಾಡಿ, ದೇವರಾಜ ಒಡೆಯರ್, ಶಿವಕುಮಾರ್, ಕೆಂಪರಾಜು, ವಕೀಲರಾದ ಪುಟ್ಟರಾಜು, ಕುರುಬ ಸಂಘದ ಅಧ್ಯಕ್ಷ ಡಿ.ಕೆ.ಕುನ್ನೇಗೌಡ, ತಹಶೀಲ್ದಾರ್ ಡಾ.ಅಶೋಕ್, ಇಓ ಗಿರೀಶ್, ಸಮಾಜ ಕಲ್ಯಾಣಾಧಿಕಾರಿ ಮೋಹನ್ ಕುಮಾರ್, ಇನ್ಸ್‌ಪೆಕ್ಟರ್ ರವಿ, ಅಬಕಾರಿ ನಿರೀಕ್ಷಕ ನಾಗಲಿಂಗಸ್ವಾಮಿ, ಸಹಕಾರ ಇಲಾಖೆ ಭರತ್, ಕೆಲವು ಗ್ರಾಪಂ ಅಧ್ಯಕ್ಷರು, ಮಹಿಳೆಯರು, ವಿದ್ಯಾರ್ಥಿಗಳು, ನೂರಾರು ಮಂದಿ ಇದ್ದರು. ಕಲಾವಿದೆ ವಸಂತ ಕಲಾ ತಂಡದಿಂದ ಜಾಗೃತಿ ಗೀತೆ ಹಾಡಲಾಯಿತು. ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಸದಸ್ಯರಾದ ಎಸ್.ಜಯರಾಮು ಕಾರ್ಯಕ್ರಮ ನಿರೂಪಿಸಿದರು.



ರಾಮನವಮಿ ಅಂಗವಾಗಿ ಬೆಟ್ಟದಪುರದ ರಾಮೋತ್ಸವ ಸಮಿತಿಯಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಶ್ರೀರಾಮ ದೇವರ ಮೆರವಣಿಗೆ ಮಾಡಲಾಯಿತು. ಅಲ್ಲದೇ ದೇವಾಲಯದಲ್ಲಿ ಬ್ರಾಹ್ಮಣರ ಸಂಘದಿಂದ ವಿಶೇಷ ಪೂಜೆ ನೆರವೇರಿಸಿ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಈ ವೇಳೆ ಸಮಿತಿಯ ಪ್ರಭಾ, ನಾಗರಾಜ್, ಸತೀಶ್, ಶ್ರೀಕಂಠ, ಶ್ರೀರಾಮು, ನಟರಾಜ್, ಶಶಿಧರ್ ಸೇರಿದಂತೆ ಇನ್ನಿತರರಿದ್ದರು.



ಹೆಚ್.ಡಿ.ಕೋಟೆ ತಾಲೂಕಿನ ಹೊಮ್ಮರಗಹಳ್ಳಿ ಸರ್ಕಾರಿ ಕನ್ನಡ ಮತ್ತು ಆಂಗ್ಲ ಮಾಧ್ಯಮ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 20 ವರ್ಷಗಳ ಕಾಲ ಅಡುಗೆ ಸಹಾಯಕಿಯಾಗಿ ಕಾರ್ಯ ನಿರ್ವಹಿಸಿ ನಿವೃತ್ತರಾದ ದುಂಡಮ್ಮ ಅವರನ್ನು ಸನ್ಮಾನಿಸಿ ಬೀಳ್ಕೊಡಲಾಯಿತು. ಈ ವೇಳೆ ಶಾಲಾ ಮುಖ್ಯಶಿಕ್ಷಕ ಬಿ.ಎನ್.ನಾಗಾರ್ಜುನ, ದುಂಡಮ್ಮನವರ ಪತಿ ಮರಿಚಿಕ್ಕಯ್ಯ, ಎಸ್‌ಡಿಎಂಸಿ ಸದಸ್ಯರಾದ ಹನುಮಂತ ನಾಯಕ, ಬಸವಣ್ಣ, ನಾಗೇಶ್, ಶಿವಕುಮಾರ್, ಶಿಕ್ಷಕರಾದ ಮಹಾದೇವಿ.ಎಸ್, ಮತೀನ ಜಹಾಜ್, ಮಂಗಳಮ್ಮ.ಜಿ, ಸಾವಿತ್ರಿಬಾಯಿ, ಆಲಮೇಲ, ವೇದಾವತಿ ಎಂ, ತಾರ ಕೆ.ಸಿ, ಚಿತ್ರಾವತಿ ಪಿ.ಟಿ, ಶಶಿಕಲಾ ಹಾಗೂ ಮುಖ್ಯ ಅಡುಗೆ ಸಿಬ್ಬಂದಿ ರಾಜೇಶ್ವರಿ.ಆರ್, ಸಹಾಯಕ ಅಡುಗೆ ಸಿಬ್ಬಂದಿ ನಾಗಮ್ಮ ಹಾಗೂ ಮಕ್ಕಳು ಉಪಸ್ಥಿತರಿದ್ದರು.

ಹೆಚ್.ಡಿ.ಕೋಟೆಯಲ್ಲಿ ಅದ್ಧೂರಿ ಶ್ರೀರಾಮನವಮಿ



ಹೆಚ್.ಡಿ.ಕೋಟೆ, ಏ.10(ಮಂಜು)– ಶ್ರೀರಾಮ ನವಮಿ ಅಂಗವಾಗಿ ಪಟ್ಟಣದಲ್ಲಿ ಶ್ರೀರಾಮ, ಲಕ್ಷ್ಮಣ, ಸೀತೆ ಹಾಗೂ ಹನುಮಂತನ ಮೂರ್ತಿಗಳನ್ನು ಮೆರವಣಿಗೆ ಮಾಡಲಾಯಿತು.

ಪಟ್ಟಣದ ಶ್ರೀವರದರಾಜಸ್ವಾಮಿ ದೇವಸ್ಥಾನ ಆವರಣದಿಂದ ಹೊರಟ ಮೆರವಣಿಗೆ 1ನೇ ಮುಖ್ಯರಸ್ತೆ ಹಾಗೂ 2ನೇ ಮುಖ್ಯರಸ್ತೆಯಲ್ಲಿ ಸಾಗಿತು. ಈ ವೇಳೆ ಬಜರಂಗದಳ, ಬಿಜೆಪಿ ಹಾಗೂ ಹಿಂದೂ ಪರಿಷತ್ ಮುಖಂಡರು ಭಾಗವಹಿಸಿದ್ದರು.

ಬಜರಂಗದಳ ಮುಖ್ಯಸ್ಥ ಮಹದೇವಪ್ಪ ಮಾತನಾಡಿ, ಶ್ರೀರಾಮ ನವಮಿಯಂದು ಶ್ರೀರಾಮ ತತ್ವವು ಎಂದಿಗಿಂತಲೂ ಸಾವಿರಪಟ್ಟು ಹೆಚ್ಚು ಭೂಮಿಯಲ್ಲಿ ಕಾರ್ಯ ನಿರತವಾಗಿರುತ್ತದೆ ಎಂದರು. ಈ ದಿನ ರಾಮ ನಾಮ ಜಪ, ಶ್ರೀರಾಮನ ಉಪಾಸನ ಮಾಡುವುದರಿಂದ ಪ್ರಯೋಜನ ಪಡೆಯಬಹುದು ಎಂದರು.

ಈ ವೇಳೆ ಭಕ್ತರಿಗೆ ಮಜ್ಜಿಗೆ, ಪಾನಕ ಹಾಗೂ ಪ್ರಸಾದ ವಿತರಿಸಲಾಯಿತು. ಈ ಸಂದರ್ಭ ತಿರುಮಲಾಚಾರ್, ಹೆಚ್.ಸಿ. ಗುರುಸ್ವಾಮಿ, ಸುಧಾಕರ್, ವಿನಯ್, ನಾಗೇಶ, ಕೆ.ಎನ್.ಮಹೇಶ್, ರಾಜು, ನಂದೀಶ, ಸತೀಶ, ಸುರೇಶ, ಮಹದೇವಸ್ವಾಮಿ ಇದ್ದರು.

ಪುರ ಶಾಲೆಗೆ ಕ್ರೀಡಾ ಉಪಕರಣ ಕೊಡುಗೆ



ಹಂಪಾಪುರ, ಏ.10(ರಾಜೇಶ್)– ಇಲ್ಲಿನ ಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಮೈಸೂರಿನ ವಿಜಯ ನಗರ ರೈಲ್ವೆ ಬಡಾವಣೆಯ 'ವಿಧಾತ್ರಿ' ಮಹಿಳಾ ಸಂಘದಿಂದ ಕ್ರೀಡೋಪಕರಣ ವಿತರಿಸಲಾಯಿತು.

ಪುರ ಶಾಲೆಯ ಮುಖ್ಯಶಿಕ್ಷಕಿ ಜ್ಯೋತಿ ಅವರ ನೇತೃತ್ವದಲ್ಲಿ ಆಯೋಜಿಸಿದ್ದ ಕಾರ್ಯಕ್ರಮವನ್ನು ವಿಧಾತ್ರಿ ಮಹಿಳಾ ಸಂಘದ ಅಧ್ಯಕ್ಷೆ ವೀಣಾ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಮಕ್ಕಳ ಸರ್ವತೋಮುಖ ದೈಹಿಕ ಮತ್ತು ಮಾನಸಿಕ ಸದೃಢತೆಗೆ ಕ್ರೀಡೆ ಬಹುಮುಖ್ಯ. ಆಟದಿಂದ ಪಾಠ ಎಂದು ಹೇಳುವಂತೆ ಆಟ ಮಕ್ಕಳಿಗೆ ಕಲಿಕೆಯ ಎಲ್ಲಾ ಸ್ತರಗಳನ್ನು ಕಲಿಸಿಕೊಡುತ್ತದೆ ಎಂದರು.

ಹಂಪಾಪುರ ಕ್ಲಸ್ಟರ್ ಸಿಆರ್‌ಪಿ ಸುನೀತಾ ಮಾತನಾಡಿ, ಕ್ರೀಡೆ ಮಕ್ಕಳ ಜೀವನಶೈಲಿ ಪ್ರಬಲವಾಗಿ ರೂಪುಗೊಳಿಸುತ್ತದೆ. ಮುಂದೆ ಮಕ್ಕಳು ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಲು ಅವರಿಗೆ ಉತ್ತಮ ಮಾರ್ಗದರ್ಶನ ಹಾಗೂ ಇಂಥಹ ಕ್ರೀಡೋಪಕರಣಗಳ ಅವಶ್ಯಕತೆ ತುಂಬಾ ಇರುತ್ತದೆ ಎಂದರು.

ಮುಖ್ಯಶಿಕ್ಷಕಿ ಜ್ಯೋತಿ ಮಾತನಾಡಿದರು. ಶಾಲಾ ಶಿಕ್ಷಕರಾದ ದೀಪಾ, ಅಂಬುಜಾ ಬಾಯಿ, ದಿನೇಶ, ವೇದಾವತಿ ಹಾಗೂ ಎಸ್.ಡಿ.ಎಂ.ಸಿ. ಸದಸ್ಯರು, ಪೋಷಕ ವೃಂದ ಉಪಸ್ಥಿತರಿದ್ದರು.

ಹುಣಸಹಳ್ಳಿ ಡೈರಿ ಅಧ್ಯಕ್ಷೆ, ಉಪಾಧ್ಯಕ್ಷೆ ಅವಿರೋಧ ಆಯ್ಕೆ



ಸರಗೂರು, ಏ.10(ನಾಗೇಶ್)– ತಾಲೂಕಿನ ಹುಣಸಹಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರಾಗಿ ಸರೋಜಮ್ಮ, ಉಪಾಧ್ಯಕ್ಷರಾಗಿ ಮಂಗಳಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಹಕಾರ ಸಂಘದ ಆವರಣದಲ್ಲಿ ನಡೆದ ಚುನಾವಣೆ ಪ್ರಕ್ರಿಯೆಯಲ್ಲಿ ಅಧ್ಯಕ್ಷ ಸ್ಥಾನಕ್ಕೆ ಸರೋಜಮ್ಮ, ಉಪಾಧ್ಯಕ್ಷ ಸ್ಥಾನಕ್ಕೆ ಮಂಗಳಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರು ನಾಮಪತ್ರ ಸಲ್ಲಿಸ ಹಿನ್ನೆಲೆ ಯಲ್ಲಿ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ ಪಿಡಿಓ ಅವಿನಾಶ್ ಘೋಷಿಸಿದರು. ಈ ವೇಳೆ ನಿರ್ದೇಶಕರಾದ ಸಣ್ಣತಾಯಮ್ಮ, ಲತಾ, ವಿಜಿ, ನಾಗಮ್ಮ, ಮಲ್ಲಿಗಮ್ಮ, ಸುಂದ್ರಮ್ಮ, ಸಂಘದ ಕಾರ್ಯದರ್ಶಿ ಸುನಂದ, ಗ್ರಾಮಸ್ಥರು ಹಾಜರಿದ್ದರು.

ತಿ.ನರಸೀಪುರದಲ್ಲಿ ಶ್ರೀರಾಮನವಮಿಯಂದು ಮಾಂಸ ಮಾರಾಟ



ತಿ.ನರಸೀಪುರ, ಏ.10(ಎಸ್‌ಕೆ)– ಶ್ರೀರಾಮ ನವಮಿ ಹಿನ್ನೆಲೆ ಭಾನುವಾರ ರಾಜ್ಯ ಸರ್ಕಾರ ರಾಜ್ಯಾದ್ಯಂತ ಮಾಂಸ ಮಾರಾಟ ನಿಷೇಧಿಸಿದ್ದರೂ, ಪಟ್ಟಣದ ಪುರಸಭಾ ವ್ಯಾಪ್ತಿಗೆ ಮಾತ್ರ ಯಾವುದೇ ಆದೇಶ ಅನ್ವಯವಾಗಿಲ್ಲ. ಮಾಂಸ ಮಾರಾಟ ಗಾರರು ಯಾವುದೇ ಅಳುಕಿಲ್ಲದೇ ಮಾಂಸ ಮಾರಾಟದಲ್ಲಿ ನಿರತರಾಗಿದ್ದು ಕಂಡು ಬಂತು.

ಪುರಸಭೆಯಿಂದ ಭಾನುವಾರ ಮಾಂಸ ಮಾರಾಟ ನಿಷೇಧ ಮಾಡಿರುವ ಬಗ್ಗೆ ಮೊದಲೇ ಅರಿವು ಮೂಡಿಸದ ಹಿನ್ನೆಲೆಯಲ್ಲಿ ಮಾಂಸ ಮಾರಾಟ ನಡೆಯಿತಾದರೂ, ರಾಮ ನವಮಿ ಹಿನ್ನೆಲೆಯಲ್ಲಿ ಖರೀದಿ ಮಾಡುವವರ ಸಂಖ್ಯೆ ಕಡಿಮೆ ಇತ್ತು. ಪುರಸಭೆ ಅಧಿಕಾರಿಗಳ ಬೇಜವಾಬ್ದಾರಿತನದಿಂದಾಗಿ ಶ್ರೀರಾಮ ನವಮಿಯಂದು ಸಹ ಮಾರಾಟ ನಡೆಯಿತು. ಪುರಸಭೆ ಅಧಿಕಾರಿಗಳು ಮಾಂಸ ಮಾರಾಟ ಮಾಡದಂತೆ ಮಾರಾಟಗಾರರಿಗೆ ಸೂಚನೆ ನೀಡಿರಲಿಲ್ಲ. ಭಾನುವಾರವಾದ್ದರಿಂದ ಹೆಚ್ಚಿನ ಪ್ರಮಾಣದಲ್ಲಿ ಮಾಂಸ ಮಾರಾಟವಾಗುವ ನಿರೀಕ್ಷೆಯೊಂದಿಗೆ ಹೆಚ್ಚು ಮೇಕೆ ಮರಿಗಳನ್ನು ಕಾದು ಖರೀದಿದಾರರ ಬರುವಿಕೆಗೆ ಕಾಯ್ದು ಕುಳಿತ ಮಾರಾಟಗಾರರು ನಿರಾಶೆ ಅನುಭವಿಸುವಂತಾಯಿತು.

ಶ್ರೀರಾಮ ನವಮಿಗೆ ಮಾಂಸ ಮಾರಾಟ ಮಾಡಬಾರದು ಎನ್ನುವುದು ನಮಗೆ ಗೊತ್ತಿರಲಿಲ್ಲ. ಭಾನುವಾರವಾದ್ದರಿಂದ ಹೆಚ್ಚಿನ ಮಾರಾಟ ನಿರೀಕ್ಷೆ ಮಾಡಿದ್ದೆವು. ಆದರೆ ಖರೀದಿ ಮಾಡಲು ಗ್ರಾಹಕರೇ ಬರದೇ ನಷ್ಟ ಅನುಭವಿಸುವಂತಾಯಿತು. ಅಧಿಕಾರಿಗಳು ಮೊದಲೇ ತಿಳಿಸಿದ್ದರೆ ನಾವು ಮಾಂಸ ಮಾರಾಟ ಮಾಡುತ್ತಿರಲಿಲ್ಲ ಎಂದು ಮಾಂಸ ಮಾರಾಟಗಾರರೊಬ್ಬರು 'ಮೈಸೂರು ಮಿತ್ರ'ನಿಗೆ ತಿಳಿಸಿದರು. ಒಟ್ಟಾರೆ ಪುರಸಭೆ ಬೇಜವಾಬ್ದಾರಿಯಿಂದಾಗಿ ಶ್ರೀರಾಮ ನವಮಿಯಂದು ಮಾಂಸ ಮಾರಾಟಕ್ಕೆ ಅವಕಾಶ ಮಾಡಿಕೊಟ್ಟದ್ದು ಮಾತ್ರ ವಿಪರ್ಯಾಸ.

ಆಸ್ತಿ ವಿವಾದ: ಅಣ್ಣನಿಂದ ತಮ್ಮನ ಕೊಲೆ



ನಂಜನಗೂಡು, ಏ.10– ಆಸ್ತಿ ವಿಚಾರದಲ್ಲಿ ಸಹೋದರರ ನಡುವೆ ಶುರುವಾದ ಗಲಾಟೆ ತಮ್ಮನ ಕೊಲೆಯಲ್ಲಿ ಅಂತ್ಯವಾಗಿರುವ ಘಟನೆ ನಂಜನಗೂಡು ತಾಲೂಕಿನ ಮೆಲ್ಲಹಳ್ಳಿ ಗ್ರಾಮದಲ್ಲಿ ನಡೆದಿದೆ.

ತಾಲೂಕಿನ ಮೆಲ್ಲಹಳ್ಳಿ ಗ್ರಾಮದ ಗೋವಿಂದ ನಾಯಕ(35) ಕೊಲೆಯಾದ ದುರ್ದೈವಿ. ಹತ್ಯೆ ನಂತರ ಅಣ್ಣ ರಂಗಸ್ವಾಮಿ ನಾಪತ್ತೆಯಾಗಿದ್ದಾನೆ. ಜಾಗದ ವಿಚಾರದಲ್ಲಿ ಅಣ್ಣ ತಮ್ಮಂದಿರ ನಡುವೆ ಆಗಾಗ್ಗೆ ಗಲಾಟೆ ನಡೆಯುತ್ತಿತ್ತು. ಈ ವೇಳೆ ಗ್ರಾಮಸ್ಥರು ಮಧ್ಯಪ್ರವೇಶಿಸಿ ಗಲಾಟೆ ಶಮನಗೊಳಿಸುತ್ತಿದ್ದರು. ನಿನ್ನೆಯೂ ಸಹ ಇದೇ ವಿಚಾರದಲ್ಲಿ ಗಲಾಟೆ ನಡೆದಿದೆ. ಗ್ರಾಮಸ್ಥರು ಇಬ್ಬರನ್ನೂ ಸಮಾಧಾನಪಡಿಸಿದ್ದಾರೆ. ಆದರೆ ಮನೆ ಮುಂದೆ ಇದ್ದ ಶೌಚಾಲಯದ ಬಾಗಿಲು ಬೀಗ ಮುರಿದಿದ್ದಾನೆಂದು ಕ್ಯಾತೆ ತೆಗೆದ ಅಣ್ಣ ರಂಗಸ್ವಾಮಿ ತಡರಾತ್ರಿ ಮಲಗಿದ್ದ ತಮ್ಮ ಗೋವಿಂದ ನಾಯಕನ ಮೇಲೆ ಮಚ್ಚಿನಿಂದ ಹಲ್ಲೆ ನಡೆಸಿದ್ದಾನೆ. ರಕ್ತದ ಮಡುವಿನಲ್ಲಿದ್ದ ಗೋವಿಂದ ನಾಯ್ಕನನ್ನು ಮೈಸೂರಿನ ಕೆ.ಆರ್.ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದೊಯ್ಯುವ ವೇಳೆ ಆತ ಸಾವನ್ನಪ್ಪಿದ್ದಾನೆ. ಈ ಸಂಬಂಧ ದೊಡ್ಡಕವಲಂದೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಘಟನೆ ನಡೆದ ಸ್ಥಳಕ್ಕೆ ದೊಡ್ಡಕವಲಂದೆ ಠಾಣೆ ಎಸ್‌ಐ ಮಹೇಂದ್ರ ಭೇಟಿ ನೀಡಿ ಪರಿಶೀಲಿಸಿ, ಆರೋಪಿ ರಂಗಸ್ವಾಮಿ ಬಂಧನಕ್ಕೆ ಜಾಲ ಬೀಸಿದ್ದಾರೆ.

ಒಂದನೇ ಪುಟದಿಂದ

ರೋಪ್ ವೇ ಅನಗತ್ಯ

ಅವರು ಹೇಳಿದ್ದು, ಅದೊಂದು ಅಂತಾರಾಷ್ಟ್ರೀಯ ಮಟ್ಟದ ಒಳ್ಳೆಯ ಹೋಟೆಲ್ ಆಗಬಹುದು. ಇನ್ನು ದೇವಾಲಯದ ಬಳಿ ಭಕ್ತರಿಗೆ ಉತ್ತಮ ರೀತಿಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಇನ್ನಿತರ ಸೌಕರ್ಯಗಳನ್ನು ಕಲ್ಪಿಸಿಕೊಟ್ಟರೆ ಸಾಕು. ಇನ್ಯಾವುದೇ ರೀತಿಯ ಕಟ್ಟಡಗಳು ಬರದಂತೆ ನಿಗಾ ವಹಿಸಿ ಬೆಟ್ಟವನ್ನು ರಕ್ಷಣೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿ. ಯಾವುದೇ ಅನಧಿಕೃತ ಕಟ್ಟಡಗಳಿಗೆ ಅವಕಾಶ ಕೊಡದೆ ಪರಿಸರ ಕಾಪಾಡಬೇಕು. ರೋಪ್ ವೇ ನಿರ್ಮಾಣದಿಂದ ಬೆಟ್ಟಕ್ಕೆ ಅಪಾಯವಾಗುವುದರಿಂದ ಜಿಲ್ಲಾ ಉಸ್ತುವಾರಿ ಸಚಿವರು ಈ ಬಗ್ಗೆ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕು. ಈ ನಿಟ್ಟಿನಲ್ಲಿ ನಾನೂ ಪತ್ರ ಬರೆದಿದ್ದೇನೆ ಎಂದರು ತಿಳಿಸಿದರು.

ಬಿಜೆಪಿ ಅತ್ಯಂತ ಪ್ರಬಲ ಪಕ್ಷ: ರಾಜ್ಯದಲ್ಲಿ ಇನ್ನೊಂದು ವರ್ಷದಲ್ಲಿ ವಿಧಾನಸಭಾ ಚುನಾವಣೆ ಬರಲಿದ್ದು, ಕೆಲ ಆಯ್ದ ಕ್ಷೇತ್ರಗಳಲ್ಲಿ ಮಾತ್ರ ಜೆಡಿಎಸ್ ಸ್ಪರ್ಧೆ ನೀಡಲಿದ್ದು, ಉಳಿದ ಕ್ಷೇತ್ರಗಳಲ್ಲೆಲ್ಲಾ ಬಿಜೆಪಿ ಹಾಗೂ ಕಾಂಗ್ರೆಸ್ ನಡುವೆ ಹೋರಾಟ ನಡೆಯುತ್ತದೆ. ಅಧಿಕಾರ ನಡೆಸುತ್ತಿರುವ ಬಿಜೆಪಿ ಸಂಘಟನೆ ದೃಷ್ಟಿಯಲ್ಲಿ ಬಹಳ ಮುಂದಿದೆ. ಹಿಂದಿನ ಲೋಕಸಭಾ ಚುನಾವಣೆಯಲ್ಲಿ 25 ಸ್ಥಾನದಲ್ಲಿ ಗೆದ್ದರೆ, ಕಳೆದ ವಿಧಾನಸಭಾ ಚುನಾವಣೆಯಲ್ಲಿ ಅತೀ ದೊಡ್ಡಪಕ್ಷವಾಗಿ ಹೊರಹೊಮ್ಮಿತ್ತು. ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಸರ್ಕಾರದ ಕಚ್ಚಾಟ, ಆಡಳಿತ ವೈಫಲ್ಯದಿಂದ ಬೇಸತ್ತು ಹಲವು ಶಾಸಕರು ಹೊರಬಂದು ಬಿಜೆಪಿಯೊಂದಿಗೆ ಸೇರಿದ್ದರಿಂದ ಸರ್ಕಾರ ರಚನೆಯಾಯಿತು. ಈಗ ಬಿಜೆಪಿ ಬಹಳ ಎತ್ತರಕ್ಕೆ ಬೆಳೆದಿದೆ. ವಿರೋಧ ಪಕ್ಷಗಳು ಬೆಲೆ ಏರಿಕೆ ಎಂದು ಕಿರುಚಾಡಿದರೂ ವಾಸ್ತವ ಅರಿತ ಜನ ಪಂಚರಾಜ್ಯಗಳ ಚುನಾವಣೆಯಲ್ಲಿ ಬಿಜೆಪಿಯನ್ನು ಬೆಂಬಲಿಸಿದರು. ಕೋವಿಡ್ ನಿರ್ವಹಣೆ ಬಗ್ಗೆ ಜನರಲ್ಲಿ ಅರಿವಿತ್ತು. ಕರ್ನಾಟಕದಲ್ಲೂ ಬಿಜೆಪಿ ಉತ್ತಮ ರೀತಿಯಲ್ಲಿ ಪರಿಸ್ಥಿತಿ ನಿಬಾಯಿಸಿದೆ. ಮೇಕೆದಾಟು ವಿಚಾರವಾಗಿ ವಾಸ್ತವ ತಿಳಿದಿದ್ದರೂ ಅನಗತ್ಯ ವಿಪಕ್ಷಗಳಿಂದ ಗೊಂದಲ ಸೃಷ್ಟಿಸಲಾಗುತ್ತಿದೆ. ಮುಖ್ಯಮಂತ್ರಿಗಳ ನೇತೃತ್ವದಲ್ಲಿ ಸರ್ವಪಕ್ಷಗಳ ನಿಯೋಗ ಪ್ರಧಾನಿಯವರನ್ನು ಭೇಟಿಯಾಗಿ ಯೋಜನೆ ಅಗತ್ಯವನ್ನು ಮನದಟ್ಟು ಮಾಡಬೇಕೆಂದು ಹೇಳಿದರು.

ಬಿಜೆಪಿಗೆ ಮಾತ್ರ ಅವಕಾಶ: ರಾಷ್ಟ್ರಮಟ್ಟದಲ್ಲಿ ಜನಾದೇಶ ಪಡೆದು ಸರ್ಕಾರ ರಚಿಸುವ ಅವಕಾಶವಿರುವುದು ಬಿಜೆಪಿಗೆ ಮಾತ್ರ. ಕಾಂಗ್ರೆಸ್‌ಗೆ ನಾಯಕತ್ವೇ ಇಲ್ಲ. ಮುಂದಿನ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಆಯಾಯ ರಾಜ್ಯಗಳ ಪ್ರಾದೇಶಿಕ ಪಕ್ಷಗಳೇ ಸೇರಿ ಹೋರಾಟ ನಡೆಸಬೇಕೇ ಹೊರತು ಬೇರೆ ಯಾವುದೇ ರಾಷ್ಟ್ರೀಯ ಪಕ್ಷಕ್ಕೆ ಆ ಶಕ್ತಿ ಇಲ್ಲ. ಉತ್ತರ ಪ್ರದೇಶ, ಬಿಹಾರ, ಪಶ್ಚಿಮ ಬಂಗಾಳ, ಒರಿಸ್ಸಾ, ಪಂಜಾಬ್, ಮಹಾರಾಷ್ಟ್ರ, ದಕ್ಷಿಣದ ತಮಿಳುನಾಡು, ಕೇರಳ, ಆಂಧ್ರ, ತೆಲಂಗಾಣ ಹೀಗೆ ಯಾವ ರಾಜ್ಯಗಳಲ್ಲೂ ಕಾಂಗ್ರೆಸ್ ಶಕ್ತಿ ಕಳೆದುಕೊಂಡಿದೆ ಎಂದು ತಿಳಿಸಿದರು.

ಸರಗೂರಲ್ಲಿ ಶ್ರದ್ಧಾಭಕ್ತಿಯ ರಾಮನವಮಿ



ಸರಗೂರು, ಏ.10– ಪಟ್ಟಣದಲ್ಲಿ ವಿಪ್ರ ಸಮಾಜದಿಂದ ಶ್ರೀರಾಮ ನವಮಿಯನ್ನು ಶ್ರದ್ಧಾಭಕ್ತಿಯಿಂದ ಆಚರಿಸಲಾಯಿತು.

ರಾಮನವಮಿ ಅಂಗವಾಗಿ ಪಟ್ಟಣದ ಬ್ರಾಹ್ಮಣರ ಶ್ರೀರಾಮ ಮಂದಿರವನ್ನು ಶುಚಿಗೊಳಿಸಿ, ತಳಿರು ತೋರಣ ಕಟ್ಟಿ ಬಣ್ಣ ಬಣ್ಣದ ರಂಗೋಲೆಯಿಂದ ಅಲಂಕರಿಸಲಾಗಿತ್ತು. ಬಳಿಕ ಶ್ರೀರಾಮ, ಲಕ್ಷ್ಮಣ, ಸೀತೆ ಹಾಗೂ ಹನುಮಂತ ದೇವರಿಗೆ ವಿಶೇಷ ಪೂಜೆ ಸಲ್ಲಿಸಿ, ಮಹಾಮಂಗಳಾರತಿ ನೆರವೇರಿಸಲಾಯಿತು. ಬಳಿಕ ನೆರೆದಿದ್ದ ಭಕ್ತರು ಸರದಿ ಸಾಲಿನಲ್ಲಿ ದೇವರ ದರ್ಶನ ಪಡೆದು ಪುನೀತರಾದರು. ಅಲ್ಲದೇ ಮಹಿಳೆಯರು ದೇವರನಾಮ ಹಾಡಿ ಭಕ್ತಿ ಸಮರ್ಪಿಸಿದರು. ನಂತರ ಭಕ್ತರಿಗೆ ಮಜ್ಜಿಗೆ, ಪಾನಕ, ಕೋಸಂಬರಿ ಪ್ರಸಾದ ವಿತರಿಸಲಾಯಿತು. ಈ ವೇಳೆ ವೇದಮಾತಾ ಶ್ರೀಗಾಯಿತ್ರಿ, ಬ್ರಾಹ್ಮಣ ಸಮಾಜದ ತಾಲೂಕು ಅಧ್ಯಕ್ಷ ಶಂಭುಮೂರ್ತಿ, ಪುರೋಹಿತರಾದ ಹರೀಶ್, ಗೋಪಿ, ಸಮಾಜದ ಮುಖಂಡ ರಾದ ಎಸ್. ನಾರಾಯಣ್ ಹಾಗೂ ಎನ್.ಎಸ್. ಪ್ರತಾಪ್, ಎಸ್.ಎಸ್.ಸೋಮಪ್ರಭ, ಪದ್ಮಪ್ರಭ, ಶ್ರೀವತ್ಸ, ಮದನ್, ಸುಕೃತ್ ಭಾರದ್ವಾಜ್ ಇನ್ನಿತರರಿದ್ದರು.

ಎಸ್.ಸಿದ್ದಯ್ಯ ನಿಧನ



ನಂಜನಗೂಡು, ಏ.10– ನಗರದ ಹೌಸಿಂಗ್ ಬೋರ್ಡ್ ಕಾಲೋನಿ ನಿವಾಸಿ ಎಸ್.ಸಿದ್ದಯ್ಯ(82) ಭಾನುವಾರ ನಿಧನರಾದರು.

ಸಮಾಜ ಕಲ್ಯಾಣ ಇಲಾಖೆ ನಿವೃತ್ತ ನೌಕರರಾಗಿದ್ದ ಎಸ್.ಸಿದ್ದಯ್ಯ, ಪತ್ನಿ ಹಾಗೂ 'ಮೈಸೂರು ಮಿತ್ರ' ನಂಜನಗೂಡು ಪ್ರತಿನಿಧಿ ಎಸ್.ಸುದರ್ಶನ್ ಹಾಗೂ ವಕೀಲ ಮಹೇಶ್ ಸೇರಿದಂತೆ ಇಬ್ಬರು ಪುತ್ರರು, ಮೂವರು ಪುತ್ರಿಯರು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು.

ಚಲುವಚಾರ್



ಬೆಟ್ಟದಪುರ, ಏ.10– ಬೆಟ್ಟದಪುರ ಗ್ರಾಮದ ನಾಟಕದ ಮಾಸ್ಟರ್ ಚಲುವಚಾರ್(90) ಶನಿವಾರ ರಾತ್ರಿ ನಿಧನರಾದರು. ಮೃತರು 150ಕ್ಕೂ ಹೆಚ್ಚು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಮೃತರು ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 12 ಗಂಟೆಗೆ ಗೊರಹಳ್ಳಿ ಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಅಂಬೇಡ್ಕರ್, ಬಾಬೂಜಿ ಆದರ್ಶಗಳನ್ನು ಮೈಗೂಡಿಸಿಕೊಳ್ಳಿ

ಯುವ ಪೀಳಿಗೆಗೆ ಶಾಸಕ ಹೆಚ್.ಪಿ.ಮಂಜುನಾಥ್ ಕರೆ



ಹುಣಸೂರು, ಏ.10(ಕೆಕೆ)– ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಂ ದಲಿತರ 2 ಕಣ್ಣುಗಳಿದ್ದಂತೆ. ಅವರ ತತ್ವಾದರ್ಶಗಳನ್ನು ಇಂದಿನ ಯುವ ಪೀಳಿಗೆ ಮೈಗೂಡಿಸಿಕೊಳ್ಳಬೇಕು ಎಂದು ಶಾಸಕ ಹೆಚ್.ಪಿ.ಮಂಜುನಾಥ್ ತಿಳಿಸಿದರು.

ನಗರದ ಬಿ.ಆರ್.ಅಂಬೇಡ್ಕರ್ ಭವನದಲ್ಲಿ ತಾಲೂಕು ಆಡಳಿತ ಆಯೋಜಿಸಿರುವ ಡಾ.ಬಿ.ಆರ್.ಅಂಬೇಡ್ಕರ್ ಮತ್ತು ಬಾಬು ಜಗಜೀವನ್ ರಾಂ ಜಯಂತಿ ವಿಶೇಷ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ದಲಿತರು ಸೇರಿದಂತೆ ಇತರೆ ಹಿಂದುಳಿದ ವರ್ಗದವರು, ಎಲ್ಲಾ ಜಾತಿಯ ಬಡವರು ಭಾಗವಹಿಸಿ ಜನಪರ ಸೌಲಭ್ಯಗಳ ಮಾಹಿತಿ ಪಡೆಯಬೇಕು ಎಂದರು.

ಶಿಕ್ಷಕ, ಸಾಹಿತಿ ಮಾಧುಪ್ರಸಾದ್ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ದೇಶಕ್ಕೆ ಸಂವಿಧಾನ ರಚಿಸಿ ದಲಿತರು ಹಾಗೂ ಇತರೆ ಸಮುದಾಯಗಳಿಗೆ ಮೀಸಲಾತಿ ನೀಡಿದರೆ ಡಾ.ಬಾಬು ಜಗಜೀವನ್ ರಾಂ ರವರು ಸಂವಿಧಾನದ ಆಶಯಗಳನ್ನು ಜಾರಿಗೆ ತಂದು, ದೇಶದಲ್ಲಿ ಆಹಾರದ ಕೊರತೆ ಉಂಟಾದಾಗ ಹಸಿರು ಕ್ರಾಂತಿ ಮಾಡಿ ದೇಶಕ್ಕೆ ಆಹಾರದ ಕೊರತೆ ನೀಗಿಸುವಲ್ಲಿ ಶ್ರಮಿಸಿದರು ಎಂದರು.

ದಸಂಸ ಜಿಲ್ಲಾ ಸಂಚಾಲಕ ನಿಂಗರಾಜ್ ಮಲ್ಲಾಡಿ ಮಾತನಾಡಿದರು. ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಡಾ.ಅಶೋಕ್, ತಾಪಂ ಇಓ ಗಿರೀಶ್, ಸಮಾಜ ಕಲ್ಯಾಣಾಧಿಕಾರಿ ಮೋಹನ್ ಕುಮಾರ್, ಬಿಇಓ ನಾಗರಾಜು, ತಾಲೂಕು ಆರೋಗ್ಯಾಧಿಕಾರಿ ಡಾ.ಕೀರ್ತಿಕುಮಾರ್, ದಲಿತ ಮುಖಂಡರಾದ ಹರಿಹರ ಆನಂದಸ್ವಾಮಿ, ಬಸವಲಿಂಗಯ್ಯ, ಕೃಷ್ಣ, ಕಾಂಗ್ರೆಸ್ ಮುಖಂಡರಾದ ಟಿ.ವಿ.ನಾರಾಯಣ್, ಕೆಂಪೇಗೌಡ, ಬಸವರಾಜು, ನಗರಾಧ್ಯಕ್ಷ ರಮೇಶ್, ದೇವರಾಜು ಮತ್ತು ಪ್ರಗತಿಪರ ಚಿಂತಕ ನವೀನ್ ರೈ, ಗ್ರಾಪಂ ಅಧ್ಯಕ್ಷರು, ಸದಸ್ಯರು, ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಆರ್‌ಟಿಓ ಇಲಾಖೆ ಸಿಬ್ಬಂದಿ ಹಾಜರಿದ್ದರು.

ತಿ.ನರಸೀಪುರದಲ್ಲಿ ಬಂದೀಖಾನೆ ಇಲಾಖೆ ಜಾಗ ಪರಿಶೀಲನೆ



ತಿ.ನರಸೀಪುರ, ಏ.10(ಎಸ್‌ಕೆ)– ಪಟ್ಟಣದ ಕೃಷಿ ಉತ್ಪನ್ನ ಮಾರುಕಟ್ಟೆ ಎದುರಿನ ಕಬಿನಿ ಅತಿಥಿ ಗೃಹದ ಕಾಂಪೌಂಡ್‌ನಿಂದ ನ್ಯಾಯಾಲಯದ ಕಟ್ಟಡದ ಕಾಂಪೌಂಡ್ ವರೆಗಿನ 1.05 ಎಕರೆ ನಿವೇಶನ ಬಂದೀಖಾನೆ ಇಲಾಖೆಗೆ ಸೇರಿರುವ ಹಿನ್ನೆಲೆಯಲ್ಲಿ ಇಲಾಖಾ ಅಧಿಕಾರಿಗಳು ತಹಶೀಲ್ದಾರ್ ಗಿರಿಜಾ ಸಮ್ಮುಖದಲ್ಲಿ ಸ್ಥಳ ಪರಿಶೀಲನೆ ನಡೆಸಿದರು.

ಭೈರಾಪುರ ಸರ್ವೆ ನಂಬರ್ 92/1ಎ. 92/1ಬಿ ನಲ್ಲಿ 1ಎಕರೆ 05 ಗುಂಟೆ ಜಮೀನು ಉಪ ಜೈಲು ಉದ್ದೇಶಕ್ಕಾಗಿ 1981ರಲ್ಲಿ ಬಂದೀಖಾನೆ ಇಲಾಖೆ ತನ್ನ ಸ್ವಾದೀನಕ್ಕೆ ಪಡೆದುಕೊಂಡಿತ್ತು. ಜಮೀನು ಮಾಲೀಕರಾದ ಗೋದಾವರಿಯಮ್ಮ ಹಾಗೂ ಕೆ. ರಾಚಯ್ಯ ಸ್ವಾಧೀನಪಡಿಸಿಕೊಳ್ಳಲಾದ ಜಮೀನಿಗೆ ಪರಿಹಾರದ ಹಣವನ್ನು ಸರ್ಕಾರದಿಂದ ಪಡೆದುಕೊಂಡಿದ್ದಾರೆ. ಇಬ್ಬರೂ ಅವಾರ್ಡ್ ಪ್ರತಿಗೆ ಸಹಿ ಮಾಡಿದ್ದಾರೆ.

ಆ ನಂತರದಲ್ಲಿ ಬಂದೀಖಾನೆ ಇಲಾಖೆಯವರು ಸ್ವಾಧೀನ ಪಡಿಸಿಕೊಂಡ ಸ್ಥಳದಲ್ಲಿ ಯಾವುದೇ ಕಾಮಗಾರಿ ಆರಂಭಿಸದ ಹಿನ್ನೆಲೆಯಲ್ಲಿ, 1984–85ರಲ್ಲಿ ಗೋದಾವರಿಯಮ್ಮ ಹಾಗೂ ಕೆ.ರಾಚಯ್ಯ ಭೂ ಪರಿವರ್ತನೆ ಮಾಡಿಸಿಕೊಂಡು ನಿವೇಶನಗಳನ್ನಾಗಿ ಪರಿವರ್ತಿಸಿ ಮಾರಾಟ ಮಾಡಿದ್ದಾರೆ. ನಂತರದಲ್ಲಿ ಈ ಜಾಗ ಕೈಯಿಂದ ಕೈಗೆ ಬದಲಾವಣೆಯಾಗಿ ಅಲ್ಲಿ ವಾಣಿಜ್ಯ ಮಳಿಗೆಗಳು ತಲೆ ಎತ್ತಿ ನಿಂತಿವೆ. ಇತ್ತೀಚೆಗೆ ಬಂದೀಖಾನೆ ಇಲಾಖೆಯವರು ತಮಗೆ ಸೇರಿದ ನಿವೇಶನ ಗುರುತಿಸಿ ಸ್ಥಳ ಪರಿಶೀಲನೆ ನಡೆಸಿ, ಜಾಗ ತಮ್ಮದೇ ಎಂದು ಖಚಿತ ಪಡಿಸಿಕೊಂಡು ನ್ಯಾಯಾಲಯಕ್ಕೆ ವಿವರ ನೀಡಲು ಮುಂದಾಗಿದ್ದಾರೆ.

ಆದರೆ ಉದ್ದೇಶಿತ ಸ್ಥಳ ಬಂದೀಖಾನೆಗೆ ಸೇರಿದ್ದರೂ ಪುರಸಭೆ ಹಾಗೂ ಭೈರಾಪುರ ಪಂಚಾಯ್ತಿಯವರು ಕಟ್ಟಡ ನಿರ್ಮಿಸಲು ಲೈಸೆನ್ಸ್ ನೀಡಿದ್ದಾದರೂ ಹೇಗೆ ? ಎಂಬ ಪ್ರಶ್ನೆ ಎದುರಾಗಿದೆ. ಇತ್ತೀಚೆಗೆ ಆರಂಭಗೊಂಡಿರುವ ಮೊಸಾಯಿಕ್ ಅಂಗಡಿಗೂ ಪುರಸಭೆ ಪರವಾನಗಿ ನೀಡಿದೆ.ಪರಿಶೀಲನೆ ವೇಳೆ ಹಾಜರಿದ್ದ ಪುರಸಭಾ ಮುಖ್ಯಾಧಿಕಾರಿಯನ್ನು ಈ ಬಗ್ಗೆ ಪ್ರಶ್ನಿಸಿದರೆ ಲೈಸೆನ್ಸ್ ಬಗ್ಗೆ ನನಗೇನು ತಿಳಿದಿಲ್ಲ ಎಂಬ ಉತ್ತರ ನೀಡಿದ್ದಾರೆ.

ಈಗಾಗಲೇ ಬಂದೀಖಾನೆಗೆ ಸೇರಿದ ಜಾಗದಲ್ಲಿ ವಾಣಿಜ್ಯ ಮಳಿಗೆಗಳು ತಲೆ ಎತ್ತಿವೆ. ಸಾರ್ವಜನಿಕರ ಮನೆಗಳೂ ನಿರ್ಮಾಣಗೊಂಡಿವೆ.ಉದ್ದೇಶಿತ ಜಾಗ ತಮ್ಮದೆಂದು ಪರಿಶೀಲನೆ ವೇಳೆ ಖಾತರಿಪಡಿಸಿಕೊಂಡ ಬಂದೀಖಾನೆ ಇಲಾಖೆ ಅಧಿಕಾರಿಗಳು ನ್ಯಾಯಾಲಯದ ಮೊರೆ ಹೋಗಲು ನಿರ್ಧರಿಸಿದ್ದಾರೆ.

ತಹಸೀಲ್ದಾರ್ ಬಿ.ಗಿರಿಜಾ, ತಾಲೂಕು ಸರ್ವೆಯರ್ ವಿಜಯ್ ಕುಮಾರ್, ಶಿರಸ್ತೇದಾರ್ ಪ್ರಭುರಾಜ್, ಕಂದಾಯ ಅಧಿಕಾರಿ ನಿಂಗರಾಜು, ಪುರಸಭಾ ಮುಖ್ಯಾಧಿಕಾರಿ ಬಸವರಾಜು ಹಾಗೂ ಬಂದೀಖಾನೆ ಇಲಾಖೆ ಅಧಿಕಾರಿಗಳು ಹಾಜರಿದ್ದರು.

ರೋಪ್ ವೇ, ಮೆಟ್ಟಿಲುಗಳಿಗೆ ರೇಲಿಂಗ್ ಅನಾವಶ್ಯಕ

ಮೈಸೂರು, ಏ.9(ಜಿಎ)– ಚಾಮುಂಡಿ ಬೆಟ್ಟಕ್ಕೆ ಅವಶ್ಯಕತೆ ಇರುವುದನ್ನು ಮಾತ್ರ ಮಡಿ ಅನಾವಶ್ಯಕವಾಗಿರುವುದು ಬೇಡ ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಹೇಳಿದರು. ಚಾಮುಂಡಿ ಬೆಟ್ಟದ ವಿಚಾರವಾಗಿ ಮಾಧ್ಯಮಗಳೊಂ ದಿಗೆ ಮಾತನಾಡಿದ ಅವರು, ಚಾಮುಂಡಿ ಬೆಟ್ಟಕ್ಕೆ ರೇಲಿಂಗ್, ರೋಪ್‌ವೇ ಅನಾವಶ್ಯಕ ವಾದವು ಸಾವಿರ ಮೆಟ್ಟಿಲುಗಳು ಹತ್ತುವುದು ಹೆಚ್ಚಿನ ಮಾತಲ್ಲ. ಚಿಕ್ಕ ಮಕ್ಕಳೇ 20 ನಿಮಿಷಕ್ಕೆ ಹತ್ತುತ್ತಾರೆ. ಚಾಮುಂಡಿ ಬೆಟ್ಟ ಹೇಗಿದೆಯೋ ಹಾಗೇ ಬಿಡಬೇಕು ಎಂದರು.

ನಾನು ಅರಣ್ಯ ಸಚಿವನಾದ ಸಂದರ್ಭದಲ್ಲಿ 5 ಕೋಟಿ ತಂದು ಬೆಟ್ಟದ ಸುತ್ತಲು ಫೆನ್ಸಿಂಗ್ ಹಾಕಿಸಿ ಬಂದೊಬಸ್ತ್ ಮಾಡಿ ಯಾರು ಅತಿಕ್ರಮ ಪ್ರವೇಶ ಮಾಡದಂತೆ ವ್ಯವಸ್ಥೆ ಮಾಡಿಸಲಾಗಿತು. ಅಂತಹ ಕೆಲಸಗಳನ್ನು ಮಾಡಿ ಜೊತೆಗೆ ಪರಿಸರವನ್ನು ಉಳಿಸಿ ಸುತ್ತಮುತ್ತಲೂ ಇರುವ ಅತಿಕ್ರಮ ಪ್ರವೇಶ ಮಾಡುವವರನ್ನು ತಡೆಯಿರಿ. ಇಂತಹ ವಿಚಾರಗಳನ್ನು ಕೈಬಿಡಿ ಎಂದು ಹೇಳಿದರು.

ಈಗಾಗಲೇ ಮಣ್ಣು ಕುಸಿದಿದೆ ಅದಕ್ಕೆ ಅಗತ್ಯ ಕಾಮಗಾರಿ ನಡೆಸಬೇಕು. ಚಾಮುಂಡಿ ಬೆಟ್ಟದ ಮೂಲ ನಿವಾಸಿಗಳಿಗೆ ಮಾತ್ರ ಅವಕಾಶ ನೀಡಬೇಕು ಮೂಲ ನಿವಾಸಿಗಳನ್ನು ಹೊರತು ಪಡಿಸಿ ಇತರರನ್ನು ತೆರವುಗೊಳಿಸಿದರೆ ಉತ್ತಮ. ಚಾಮುಂಡಿಬೆಟ್ಟ ಧಾರ್ಮಿಕ ಕ್ಷೇತ್ರ ಜೊತೆಗೆ ಪ್ರವಾಸಿ ತಾಣವು ಹೌದು ಅದರೆ ಅಲಿ ಪೂಜೆಗೆ ಅವಶ್ಯಕತೆ ಇರುವುದನ್ನು ಮಾತ್ರ ಮರಾಟ ಮಾಡಬೇಕೇ ಹೊರತು ವಾಣಿಜ್ಯಕರಣ ಮಾಡಬಾರದು ಎಂದರು.

ಮುಂಬರುವ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿಸಿ

ಸ್ವತಂತ್ರವಾಗಿ ಸರ್ಕಾರ ರಚಿಸಲು ಅವಕಾಶ ಮಾಡಿಕೊಡಿ: ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಮನವಿ



ಬನ್ನೂರು, ಏ.10(ಪ್ರಭು)– ಮುಂಬರುವ 2023ರ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್‌ಗೆ ಹೆಚ್ಚಿನ ಬೆಂಬಲ ನೀಡಿ, ಸ್ವತಂತ್ರವಾಗಿ ಸರ್ಕಾರ ರಚಿಸಲು ಅವಕಾಶ ಮಾಡಿಕೊಡುವಂತೆ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮನವಿ ಮಾಡಿದರು.

ಪಟ್ಟಣ ಸಮೀಪದ ಯಾಚೇನಹಳ್ಳಿ ಗ್ರಾಮದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿ ಕುಟುಂಬದ ಓರ್ವ ಸದಸ್ಯನಿಗೆ ಸರ್ಕಾರಿ ಕೆಲಸ, ಸೂರಿಲ್ಲದವರಿಗೆ ಮನೆ, ವಯೋವೃದ್ಧರಿಗೆ ಮಾಸಿಕ ಪಿಂಚಣಿ ರೂಪದಲ್ಲಿ 5 ಸಾವಿರ ರೂ., ಮಹಿಳೆಯರು ಸ್ವಾತಂತ್ರವಾಗಿ ಜೀವನ ನಡೆಸಲು ಗೌರವಧನ ನೀಡುವ ಕಾರ್ಯಕ್ರಮ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಕಾರ್ಯ ರೂಪಕ್ಕೆ ತರಲು ಯೋಜನೆ ಸಿದ್ಧಪಡಿಸಲಾಗಿದೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ಜೆಡಿಎಸ್‌ಗೆ ಹೆಚ್ಚಿನ ಬೆಂಬಲ ನೀಡಿ, ಸ್ಪಷ್ಟ ಬಹುಮತದೊಂದಿಗೆ ನನಗೆ ಸ್ವತಂತ್ರವಾಗಿ ಸರ್ಕಾರ ರಚಿಸಲು ಅವಕಾಶ ಕಲ್ಪಿಸಬೇಕು ಎಂದು ಸಾರ್ವಜನಿಕರಲ್ಲಿ ಮನವಿ ಮಾಡಿದರು.

ರಾಜ್ಯದಲ್ಲಿ ಅಧಿಕಾರದಲ್ಲಿರುವ ಬಿಜೆಪಿ ಸರ್ಕಾರ ಜನರ ತೆರಿಗೆ ಹಣವನ್ನು ಲೂಟಿ ಮಾಡುತ್ತಿದೆ ಎಂದು ಆರೋಪಿಸಿದ ಅವರು, ಮೋದಿ ನೇತೃತ್ವದ ಕೇಂದ್ರ ಸರ್ಕಾರ ನೆರೆಯ ರಾಜ್ಯಗಳಾದ ತಮಿಳುನಾಡು, ಆಂಧ್ರ ಪ್ರದೇಶಕ್ಕೆ ನೀಡುವ ಪ್ರಾತಿನಿಧ್ಯವನ್ನು ರಾಜ್ಯಕ್ಕೆ ನೀಡದೇ ಮಲತಾಯಿ ಧೋರಣೆ ಅನುಸರಿಸುತ್ತಿದೆ. ಜೆಡಿಎಸ್ ಪಕ್ಷ ಇದನ್ನೇ ಸ್ವೀಕರಿಸಿ ಮುಂದಿನ ಚುನಾವಣೆಯಲ್ಲಿ ತಕ್ಕ ಉತ್ತರ ನೀಡುತ್ತೇನೆ ಎಂದರು.

ಹನುಮ ಜಯಂತಿಯಂದು ಸುಮಾರು 51 ಮುಖ್ಯ ನದಿಗಳು ಹಾಗೂ ಉಪ ನದಿಗಳಿಂದ ನೀರನ್ನು ತಂದು ರೈತರ ಜಮೀನಿಗೆ ಹಾಕಿ, ರಾಜ್ಯದ 365 ದಿನಗಳು ರೈತರಿಗೆ ನೀರು ದೊರೆಯುವಂತೆ ಮಾಡುವ ಯೋಜನೆ ಹಾಗೂ ಪ್ರತಿ ಮನೆಗೂ ಕುಡಿಯುವ ನೀರನ್ನು ಒದಗಿಸುವ ಯೋಜನೆ ರೂಪಿಸಿಕೊಂಡಿದ್ದು, ಇದನ್ನು ಜಾರಿ ಮಾಡಲು ತಮಗೆ ಅವಕಾಶ ನೀಡುವಂತೆ ಕೋರಿದರು.

ಕಳೆದ ಬಾರಿ ತಾವು ಮುಖ್ಯಮಂತ್ರಿಯಾಗಿದ್ದ ವೇಳೆ ಜನತೆಯ ಎಲ್ಲಾ ಆಕಾಂಕ್ಷೆಗಳನ್ನು ಈಡೇರಿಸಲು ಸಾಧ್ಯವಾಗಿಲ್ಲ. ರಾಜ್ಯದ ಜನರ ಹಿತ ದೃಷ್ಟಿಯಿಂದ ಗ್ರಾಮ ವ್ಯಾಪ್ತಿಯಲ್ಲಿ ಉತ್ತಮ ಗುಣಮಟ್ಟದ ಶಿಕ್ಷಣ ನೀಡುವ, ಗ್ರಾಮದಲ್ಲಿಯೇ ಉತ್ತಮ ಆಸ್ಪತ್ರೆ ತೆರೆದು ನುರಿತ ವೈದ್ಯರನ್ನು ನೇಮಿಸುವ ಹಲವಾರು ಯೋಜನೆ ಹೊಂದಿದ್ದು, ಬಡವರಿಗೆ, ವೃದ್ಧರಿಗೆ, ಅಂಗವಿಕಲರಿಗೆ ಮಾಸಾಶನ ಮನೆ ಬಾಗಿಲಿಗೆ ದೊರೆಯುವಂತೆ ಮಾಡುವುದಾಗಿ ತಿಳಿಸಿದರು.

ತಾವು ಮತ ಹಾಕಿದ ಮತದಾರರಿಗೆ ದ್ರೋಹ ಮಾಡುವುದಿಲ್ಲ. 2023ರ ಚುನಾವಣೆಯಲ್ಲಿ ಜೆಡಿಎಸ್ ಪಕ್ಷವನ್ನು ಸ್ವತಂತ್ರವಾಗಿ ಆಡಳಿತ ನಡೆಸಲು ಅವಕಾಶ ಮಾಡಿಕೊಡುವಂತೆ ಮನವಿ ಮಾಡಿದರು. ಬಡ ವರ್ಗದ ಪರ ತಾವು ಕಾರ್ಯ ನಿರ್ವಹಿಸುವುದಾಗಿ ತಿಳಿಸಿದರಲ್ಲದೇ ತಾವು ಹಮ್ಮಿಕೊಂಡಿರುವ ಕಾರ್ಯವನ್ನು ಜಾರಿ ಮಾಡದೇ ಹೋದಲ್ಲಿ ಜೆಡಿಎಸ್ ಪಕ್ಷವನ್ನೇ ವಿಸರ್ಜಿಸುವುದಾಗಿ ಘೋಷಣೆ ಮಾಡಿದರು. ತಮಗೆ ಗ್ರಾಮದ ಜನರು ತೋರಿದ ಪ್ರೀತಿ ವಿಶ್ವಾಸವನ್ನು ತಾವೆಂದು ಮರೆಯುವುದಿಲ್ಲ ಎಂದರು.

ಇದೇ ವೇಳೆ ಮುಂದಿನ ಚುನಾವಣೆಯಲ್ಲಿ ನರಸೀಪುರ ಕ್ಷೇತ್ರಕ್ಕೆ ಶಾಸಕ ಎಂ.ಅಶ್ವಿನ್ ಕುಮಾರ್ ಅವರೇ ಅಭ್ಯರ್ಥಿ ಆಗಿರುತ್ತಾರೆ ಎಂದು ಘೋಷಿಸಿ ಕೆಲ ಊಹಾಪೋಹಗಳಿಗೆ ತೆರೆ ಎಳೆದರು. ರಾಜ್ಯ ರಾಮ ರಾಜ್ಯವಾಗಬೇಕಾದರೆ ರಾಜ್ಯದ ಎಲ್ಲ ಭಾಗಗಳಲ್ಲಿಯೂ ಜೆಡಿಎಸ್ ಪಕ್ಷದ ಅಭ್ಯರ್ಥಿಗಳನ್ನೇ ಬೆಂಬಲಿಸುವಂತೆ ಮನವಿ ಮಾಡಿದರು.

ಇದೇ ಸಂದರ್ಭ ಯಾಚೇನಹಳ್ಳಿ ವೈ.ಎಸ್. ರಾಮಸ್ವಾಮಿ ಮತ್ತು ಬಳಗದವರು ಬೃಹತ್ ಹಾರ ಹಾಕಿ ಕುಮಾರಸ್ವಾಮಿ ಅವರನ್ನು ಸನ್ಮಾನಿಸಿದರು. ಕಾರ್ಯಕ್ರಮದಲ್ಲಿ ಶಾಸಕ ಎಂ.ಅಶ್ವಿನ್ ಕುಮಾರ್, ವಿಧಾನಪರಿಷತ್ ಸದಸ್ಯ ಮಂಜೇಗೌಡ, ಜಿಲ್ಲಾಧ್ಯಕ್ಷ ನರಸಿಂಹ, ಜೆಡಿಎಸ್ ಕಾರ್ಯಾಧ್ಯಕ್ಷ ಬಿ.ಆರ್.ಮಂಜುನಾಥ್, ವೈ.ಎಸ್.ರಾಮಸ್ವಾಮಿ ಸೇರಿದಂತೆ ಇತರರಿದ್ದರು.

ಆದಿ ಕರ್ನಾಟಕ ಸಮಾಜಕ್ಕೆ ಸರ್ಕಾರದ ಸೌಲಭ್ಯ ಕಲ್ಪಿಸಿ

ಪುರಸಭಾ ಅಧ್ಯಕ್ಷೆ ಶಿವಮ್ಮ ಚಾಕಳ್ಳಿಕೃಷ್ಣ ಸಲಹೆ



ಹೆಚ್.ಡಿ.ಕೋಟೆ, ಏ.10(ಮಂಜು)– ಆದಿ ಕರ್ನಾಟಕ ಸಮಾಜದಲ್ಲಿ ಬಹುತೇಕರು ಬಡತನ ರೇಖೆಗಿಂತ ಕೆಳಗಿದ್ದು ಅವರಿಗೆ ಮೀಸಲಾತಿ ಲೆಕ್ಕಾಚಾರದಲ್ಲಿ ಸರ್ಕಾರದಿಂದ ದೊರೆಯುವ ಸೌಲಭ್ಯ ದೊರಕಿಸುವಲ್ಲಿ ನೀವು ಪ್ರಮುಖ ಪಾತ್ರ ವಹಿಸಬೇಕು ಎಂದು ಪುರಸಭಾ ಅಧ್ಯಕ್ಷೆ ಶಿವಮ್ಮ ಚಾಕಳ್ಳಿಕೃಷ್ಣ ಸಲಹೆ ನೀಡಿದರು.

ಇತ್ತೀಚೆಗೆ ಆದಿ ಕರ್ನಾಟಕ ಮಹಾಸಭಾ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ ಅವರನ್ನು ಪಟ್ಟಣದ ಪುರಸಭಾ ಕಚೇರಿಯಲ್ಲಿ ಸನ್ಮಾನಿಸಿ ಮಾತನಾಡಿದ ಅವರು, ಮೀಸಲಾತಿ ಸದ್ಬಳಕೆ ಬಗ್ಗೆ ಸಮಾಜದವರಿಗೆ ಅರಿವು ಮೂಡಿಸಬೇಕು. ಜೊತೆಗೆ ಅರ್ಹರಿಗೆ ಮೀಸಲಾತಿ ಪ್ರಯೋಜನೆ ಪಡೆಯುವಂತೆ ಉತ್ತೇಜಿಸಬೇಕು ಎಂದರು. ಪುರಸಭಾ ಸದಸ್ಯ ಹೆಚ್.ಸಿ.ನರಸಿಂಹಮೂರ್ತಿ ಸನ್ಮಾನ ಸ್ವೀಕರಿಸಿ ಮಾತನಾಡಿ, ತಾಲೂಕಿನಲ್ಲಿ ಆದಿ ಕರ್ನಾಟಕ ಸಮಾಜದವರೇ ಹೆಚ್ಚಿನ ಪ್ರಮಾಣದಲ್ಲಿದ್ದಾರೆ. ಅವರ ಅಭಿವೃದ್ಧಿಗೆ ನಾನು ಹಗಲಿರುಳು ಶ್ರಮಿಸುತ್ತೇನೆ. ಯಾರೇ ಬಂದರೂ ಸಹ ಅವರಿಗೆ ಉತ್ತಮ ಮಾರ್ಗದರ್ಶನ ನೀಡುವ ಜೊತೆಗೆ ಸಮಾಜವನ್ನು ಮೇಲೆತ್ತುವ ಕಾರ್ಯ ಮಾಡುತ್ತೇನೆ. ಈ ಕಾರ್ಯಕ್ಕೆ ತಮ್ಮ ಆಡಳಿತದ ಪದಾಧಿಕಾರಿಗಳ ಸಹಕಾರವೂ ಮುಖ್ಯ ಎಂದರು. ಈ ವೇಳೆ ಮುಖ್ಯಾಧಿಕಾರಿ ಸಾಗರ್, ಚಾಕಳ್ಳಿ ಕೃಷ್ಣ, ಪುರಸಭಾ ಸದಸ್ಯರಾದ ವೆಂಕಟೇಶ್, ಮಿಲ್ ನಾಗರಾಜು, ಸೋಮಶೇಖರ್, ಸಿದ್ದರಾಜು, ಕಂದಾಯ ನಿರೀಕ್ಷಕ ಸುರೇಶ್ ಇತರರಿದ್ದರು.

ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ವಿನಯ್ ಗೆಲ್ಲಿಸಿ

ನಟ ನೆನಪಿರಲಿ ಪ್ರೇಮ್ ಮನವಿ



ಪಿರಿಯಾಪಟ್ಟಣ, ಏ.10(ವೀರೇಶ್)– ದಕ್ಷಿಣ ಪದವೀಧರ ಕ್ಷೇತ್ರದ ಚುನಾವಣೆಯಲ್ಲಿ ಸ್ಪರ್ಧಿಸಿರುವ ಎನ್.ಎಸ್.ವಿನಯ್ ಅವರನ್ನು ಪದವೀಧರ ಮತದಾರರು ಬೆಂಬಲಿಸಿ ಗೆಲ್ಲಿಸುವಂತೆ ನಟ ನೆನಪಿರಲಿ ಪ್ರೇಮ್ ಮನವಿ ಮಾಡಿದರು.

ಪಟ್ಟಣದ ತಾಲೂಕು ಪತ್ರಕರ್ತರ ಸಂಘದಲ್ಲಿ ದಕ್ಷಿಣ ಪದವೀಧರ ವೇದಿಕೆಯಿಂದ ಎನ್.ಎಸ್.ವಿನಯ್ ಅವರು ನೋಂದಣಿ ಮಾಡಿಸಿರುವ ಪದವೀಧರ ಮತದಾರರಿಗೆ 1 ಲಕ್ಷ ರೂ.ಗಳ ಇನ್ಸೂರೆನ್ಸ್ ಬಾಂಡ್ ವಿತರಿಸಿ ಅವರು ಮಾತನಾಡಿದರು.

ವಿನಯ್ ಅವರು ಸಮಾಜಸೇವೆ ಉದ್ದೇಶದಿಂದ ರಾಜಕೀಯಕ್ಕೆ ಬಂದಿದ್ದಾರೆ. ಅವರ ಪ್ರಾಮಾಣಿಕ ಉದ್ದೇಶವನ್ನು ನೋಡಿ ಅವರನ್ನು ನಾನು ಬೆಂಬಲಿಸುತ್ತಿದ್ದೇನೆಯೇ ಹೊರತು ಇದರಲ್ಲಿ ಯಾವುದೇ ದುರುದ್ದೇಶ ಇಲ್ಲ. ರಾಜಕಾರಣಿಗಳನ್ನು ನೋಡಿ ನಾವು ಬೇಸರಪಟ್ಟುಕೊಳ್ಳುವ ಬದಲು ಯುವಕರು ತಮಗಿಷ್ಟ ಬಂದ ಕ್ಷೇತ್ರದಲ್ಲಿ ಮುಂದುವರೆದು ಸಾಧನೆ ಮಾಡಬೇಕು. ಆಗ ಮಾತ್ರ ಸಮಾಜಕ್ಕೆ ಏನಾದರೂ ಕೊಡುಗೆ ಕೊಡಲು ಸಾಧ್ಯ ಎಂದರು.

ದಕ್ಷಿಣ ಪದವೀಧರ ಕ್ಷೇತ್ರದ ಅಭ್ಯರ್ಥಿ ಎನ್.ಎಸ್ ವಿನಯ್ ಮಾತನಾಡಿ, ನಾನು ಕಳೆದ ಒಂದು ವರ್ಷದಿಂದ ದಕ್ಷಿಣ ಪದವೀಧರ ಕ್ಷೇತ್ರದಲ್ಲಿ 48,884 ಪದವೀಧರರನ್ನು ಮತದಾರರ ಪಟ್ಟಿಗೆ ನೋಂದಣಿ ಮಾಡಿಸಿದ್ದೇನೆ. ಅವರಲ್ಲಿ 39 ಸಾವಿರ ಮತದಾರರಿಗೆ ಉಚಿತ ಅಪಘಾತ ವಿಮಾ ಪಾಲಿಸಿ ಮಾಡಿಸಿ ಬಾಂಡ್ ಕೊಡಲಾಗುತ್ತಿದ್ದು, ಮೊದಲ ಹಂತದಲ್ಲಿ ಪಿರಿಯಾಪಟ್ಟಣದಲ್ಲಿ 1,700 ಮಂದಿಗೆ ಬಾಂಡ್ ವಿತರಿಸಲಾಗುತ್ತಿದೆ. ಈ ದಿನ ಸಾಂಕೇತಿಕವಾಗಿ ಕೆಲವರಿಗೆ ಬಾಂಡ್ ನೀಡುತ್ತಿದ್ದು, ಇದರಲ್ಲಿ ಯಾವುದೇ ಆಮಿಷ ಒಡ್ಡುವ ಪ್ರಶ್ನೆ ಉದ್ಭವಿಸಲ್ಲ. ನಾನು ಬದುಕಿರುವವರೆಗೂ ಈ ಕ್ಷೇತ್ರದ ಮತದಾರರಿಗೆ ವಿತರಿಸಿರುವ ಬಾಂಡುಗಳನ್ನು ರಿನಿವಲ್ ಮಾಡಿಸಿಕೊಡುವ ಕೆಲಸ ಮಾಡುತ್ತೇನೆ. ಸರ್ಕಾರದಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವಂತೆ ಒತ್ತಾಯಿಸುವುದು. ಸರ್ಕಾರಿ ಉದ್ಯೋಗ ಕೊಡಲು ಸಾಧ್ಯವಾಗದಿದ್ದರೂ, ನಿರುದ್ಯೋಗಿ ಪದವೀಧ ರರಿಗೆ ನಿರುದ್ಯೋಗಿ ಭತ್ಯೆ ಕೊಡಿಸುವುದು. ಸರ್ಕಾರಿ ನೌಕರರ ಪಿಂಚಣಿ ಸಮಸ್ಯೆ ಬಗೆಹರಿಸುವುದು ಸೇರಿದಂತೆ ಪ್ರಮುಖ ಸಮಸ್ಯೆಗಳ ಬಗ್ಗೆ ದನಿ ಎತ್ತಲಾಗುವುದು ಎಂದರು. ಈ ವೇಳೆ ವೇದಿಕೆಯ ಕೆ.ಪಿ.ಪವನ್ ಕುಮಾರ್, ಮಂಜುನಾಥ್ ಹಾಜರಿದ್ದರು.

ನಾಲೆಗೆ ಕಾಲುಜಾರಿ ಬಿದ್ದು ಯುವಕ ಸಾವು




ಸರಗೂರು, ಏ.10(ನಾಗೇಶ್)– ಹಸುವಿಗೆ ನೀರು ಕುಡಿಸಲು ಹೋದ ಯುವಕನೋರ್ವ ಕಾಲು ಜಾರಿ ನಾಲೆಗೆ ಬಿದ್ದು ಸಾವನ್ನಪ್ಪಿರುವ ಘಟನೆ ಭಾನುವಾರ ತಾಲೂಕಿನ ಹಾಲುಗಡ ಸಮೀಪದ ಕಪಿಲಾ ಬಲದಂಡೆ ನಾಲೆಯಲ್ಲಿ ನಡೆದಿದೆ.

ತಾಲೂಕಿನ ಲಂಕೆ ಗ್ರಾಮದ ಮನು(20) ಸಾವನ್ನಪ್ಪಿದ ಯುವಕ. ಈತ ತನ್ನ ತಂದೆ ಮಹದೇವ ಎಂಬುವರೊಂದಿಗೆ ಜಮೀನಿಗೆ ಕೂಲಿ ಕೆಲಸಕ್ಕೆ ಬಂದಿದ್ದರು. ಈ ವೇಳೆ ಅಲ್ಲೇ ಮೇಯಿಸಲು ಕರೆದೊಯ್ದಿದ್ದ ರಾಸುಗಳಿಗೆ ಸಂಜೆ ನೀರು ಕುಡಿಸಲು ಕಾಲುವೆ ಬಳಿ ಹೋದ ವೇಳೆ ಕಾಲು ಜಾರಿ ಬಿದ್ದು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾನೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸರಗೂರು ಪೊಲೀಸರು, ಅಗ್ನಿಶಾಮಕ ದಳದ ಸಿಬ್ಬಂದಿ ಸೇರಿದಂತೆ ಸ್ಥಳೀಯರು ಶವವನ್ನು ನಾಲೆಯಿಂದ ಹೊರತೆಗೆದು ಹೆಚ್.ಡಿ.ಕೋಟೆ ಸಾರ್ವಜನಿಕ ಆಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿ, ಪರೀಕ್ಷೆ ಬಳಿಕ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಈ ಸಂಬಂಧ ಸರಗೂರು ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಗಾವಡಗೆರೆಯಲ್ಲಿ ಕಾಂಕ್ರಿಟ್ ರಸ್ತೆ ಕಾಮಗಾರಿಗೆ ಚಾಲನೆ



ಹುಣಸೂರು, ಏ.10(ಕೆಕೆ)– ತಾಲೂಕಿನ ಬಹುತೇಕ ಗ್ರಾಮೀಣ ರಸ್ತೆಗಳು ಅಭಿವೃದ್ಧಿಗೊಂಡಿದ್ದು, ಉಳಿದ ರಸ್ತೆಗಳ ಅಭಿವೃದ್ಧಿಗೆ ಸದ್ಯದಲ್ಲೇ ಚಾಲನೆ ನೀಡಲಾಗುವುದು ಎಂದು ಶಾಸಕ ಹೆಚ್.ಪಿ. ಮಂಜುನಾಥ್ ತಿಳಿಸಿದರು.

ತಾಲೂಕಿನ ಗಾವಡಗೆರೆ ಗ್ರಾಮದ ಪ.ಜಾತಿ ಕಾಲೋನಿಯಲ್ಲಿ ಕಾಂಕ್ರಿಟ್ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ತಾಲೂಕಿನ 3 ಡಿವಿಜನ್‌ಗಳಿಗೆ 9 ಕೋಟಿ ರೂ. ವೆಚ್ಚದ ಕಾಮಗಾರಿಗಳು ಮಂಜೂರಾಗಿದ್ದು, ಈ ಪೈಕಿ ಇಂದು 3.35 ಕೋಟಿ ರೂ.ಗಳ ಕಾಮಗಾರಿಗೆ ಚಾಲನೆ ನೀಡಲಾಗಿದೆ. ಗ್ರಾಮಗಳಲ್ಲಿ ಗುತ್ತಿಗೆದಾರರು ಕೆಲಸ ಮಾಡುವಾಗ ರಸ್ತೆ ಅಕ್ಕಪಕ್ಕ ತೆರವು ಮಾಡಿಕೊಟ್ಟು ನೀವುಗಳೇ ಮುಂದೆ ನಿಂತು ಗುಣಮಟ್ಟದ ಕೆಲಸ ಮಾಡಿಸಿಕೊಳ್ಳಿ ಎಂದರು.

ತಾಲೂಕಿನ ಹರವೆ ಗ್ರಾಮದಿಂದ ಹರವೆ ದೊಡ್ಡಕೆರೆವರೆಗೆ ಡಾಂಬರ್ ರಸ್ತೆಗೆ 35 ಲಕ್ಷ ರೂ., ಹರವೆ ಗ್ರಾಮದಿಂದ ಕಿತ್ತೂರು ರಾಣಿ ಚನ್ನಮ್ಮ ವಸತಿ ಶಾಲೆ ಡಾಂಬರ್ ರಸ್ತೆಗೆ 20 ಲಕ್ಷ ರೂ., ಹರವೆ ಪ.ಜಾ.ಕಾಲೋನಿಗೆ 9 ಲಕ್ಷ ರೂ., ಗಾವಡಗೆರೆ ಪ.ಜಾ.ಕಾಲೋನಿಗೆ 18 ಲಕ್ಷ ರೂ., ಗಾವಡಗೆರೆ ಪ.ಪಂ.ಕಾಲೋನಿಗೆ 18 ಲಕ್ಷ ರೂ., ಜಾಬಗೆರೆ ಪ.ಪಂ ಕಾಲೋನಿಗೆ 18 ಲಕ್ಷ ರೂ., ಹರವೆಯಿಂದ ಐಚನಹಳ್ಳಿ ರಸ್ತೆಗೆ 35 ಲಕ್ಷ ರೂ., ಹರವೆ ಕಲ್ಲಹಳ್ಳಿಯಿಂದ ಹೊಸಕೋಟೆ ರಸ್ತೆಗೆ 20 ಲಕ್ಷ ರೂ., ಮರೂರು ರಸ್ತೆಯಿಂದ ಕಟ್ಟೆಮಳಲವಾಡಿ ಮಕೋಡು ರಸ್ತೆಗೆ 20 ಲಕ್ಷ ರೂ., ಹಿರಿಕ್ಯಾತನಹಳ್ಳಿಯಿಂದ ನಂಜಪುರ ರಸ್ತೆಗೆ 20 ಲಕ್ಷ ರೂ., ಹಿರಿಕ್ಯಾತನ ಹಳ್ಳಿಯಿಂದ ಉರುಕುಪ್ಪೆ ರಸ್ತೆಗೆ 10 ಲಕ್ಷ ರೂ. ಹಾಗೂ ಜಾಬಗೆರೆಯಿಂದ ಚಿಕ್ಕಾಡಿಗನಹಳ್ಳಿ ರಸ್ತೆಗೆ 10 ಲಕ್ಷ ರೂ ವೆಚ್ಚದ ಕಾಮಗಾರಿಗೆ ಚಾಲನೆ ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಅಧ್ಯಕ್ಷರಾದ ದೇವರಾಜು, ಟಿ.ವಿ.ನಾರಾಯಣ್, ಗ್ರಾಪಂ ಅಧ್ಯಕ್ಷೆ ಮಧುಮತಿ, ಮಾಜಿ ಅಧ್ಯಕ್ಷೆ ಶೀಲಾವತಿ ಉಪಾಧ್ಯಕ್ಷ ಕೃಷ್ಣಯ್ಯ, ಸದಸ್ಯರಾದ ಶ್ರೀನಿವಾಸ್, ಶ್ರೀನಾಥ್, ಪಿಡಿಓ ಲೋಕೇಶ್, ಕಾರ್ಯದರ್ಶಿ ರಮೇಶ್, ಎಸ್‌ಡಿಎಂಸಿ ಅಧ್ಯಕ್ಷ ಜಗದೀಶ್, ವಿಎಸ್‌ಎಸ್‌ಎನ್ ನಿರ್ದೇಶಕ ಶ್ರೀಕಂಠು, ಲೋಕೇಶ್ ಇನ್ನಿತರರಿದ್ದರು.



ತಿ.ನರಸೀಪುರ ತಾಲೂಕಿನ ಬಿಲಿಗೆರೆಹುಂಡಿಯಲ್ಲಿ ಶ್ರೀರಾಮನವಮಿ ಅಂಗವಾಗಿ ಪಾನಕ, ಮಜ್ಜಿಗೆ, ಕೋಸಂಬರಿ ಹಂಚಲಾಯಿತು. ಈ ವೇಳೆ ಅರ್ಚಕ ಮಹದೇವಸ್ವಾಮಿ, ಹಾಲು ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷರೂ ಆದ ಗುತ್ತಿಗೆದಾರ ಬಿ.ಮಂಟೇಲಿಂಗಪ್ಪ, ಡಿ.ನಾಗರಾಜು, ಮಂಜು ಏಳುಮಲೆ, ಗಿರಿಪಾಪ ನಾಯಕರು, ನಾಗೇಶ, ಮಾದಯ್ಯ ಹಾಗೂ ಗ್ರಾಮಸ್ಥರು ಹಾಜರಿದ್ದರು.

ಕೋಲ್ಕತ್ತಾ ಮೇಲೆ ಡೆಲ್ಲಿ ಕ್ಯಾಪಿಟಲ್ಸ್ ರೈಡ್

ಪೃಥ್ವಿ, ವಾರ್ನರ್, ಅಬ್ಬರ, ಕುಲದೀಪ್ ಯಾದವ್ ಪಂದ್ಯಶ್ರೇಷ್ಠ



ಮುಂಬೈ, ಏ.10– ತಂಡದ ಆಲ್‌ರೌಂಡ್ ಆಟದ ನೆರವಿನಿಂದ ಡೆಲ್ಲಿ ಕ್ಯಾಪಿಟಲ್ಸ್ ಕೋಲ್ಕತ್ತಾ ನೈಟ್ ರೈಡರ್ಸ್ ವಿರುದ್ಧ 44 ರನ್‌ಗಳ ಭರ್ಜರಿ ಜಯ ಸಾಧಿಸಿದೆ.

ಇಲ್ಲಿನ ಬ್ರಬೋರ್ನ್ ಮೈದಾನದಲ್ಲಿ ಭಾನುವಾರ ಮಧ್ಯಾಹ್ನ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್‌ಗೆ ಪೃಥ್ವಿ ಷಾ ಹಾಗೂ ಡೇವಿಡ್ ವಾರ್ನರ್ ಮೊದಲ ವಿಕೆಟ್‌ಗೆ 91 ರನ್‌ಗಳ ಜೊತೆಯಾಟವಾಡುವ ಮೂಲಕ ಉತ್ತಮ ಆರಂಭ ಒದಗಿಸಿದರು. ಆದರೆ ಕೇವಲ 29 ಎಸೆತಗಳಲ್ಲಿ 2 ಸಿಕ್ಸರ್, 7 ಬೌಂಡರಿ ಒಳಗೊಂಡ ಬಿರುಸಿನ 51 ರನ್ ಗಳಿಸಿದ ಪೃಥ್ವಿ ಷಾ ವಿಕೆಟ್ ಒಪ್ಪಿಸಿ ಹೊರ ನಡೆದರು. ಬಳಿಕ ವಾರ್ನರ್ ಜೊತೆಗೂಡಿದ ನಾಯಕ ರಿಷಬ್ ಪಂತ್ 2ನೇ ವಿಕೆಟ್‌ಗೆ 55 ರನ್ ಕಾಣಿಕೆ ನೀಡಿದರು. ಆದರೆ ತಲಾ 2 ಸಿಕ್ಸರ್, ಬೌಂಡರಿ ಒಳಗೊಂಡ 27ರನ್ ಗಳಿಸಿದ್ದ ಪಂತ್ ರಸೆಲ್ ಬೌಲಿಂಗ್‌ನಲ್ಲಿ ನಿರ್ಗಮಿಸಿದರು. ನಂತರ ಬಂದ ಲಲಿತ್ ಯಾದವ್, ರೋವ್ಮನ್ ಪೊವೆಲ್ 8 ರನ್‌ಗಳಿಸಿ ಬಹುಬೇಗ ನಿರ್ಗಮಿಸಿದರು. ಇವರ ಹಿಂದೆಯೇ 2 ಸಿಕ್ಸರ್, 6 ಬೌಂಡರಿ ಒಳಗೊಂಡ 61ರನ್ ಗಳಿಸಿದ್ದ ಡೇವಿಡ್ ವಾರ್ನರ್ ಕೂಡ ಔಟಾದರು. ಈ ವೇಳೆ ಜೊತೆಯಾದ ಅಕ್ಷರ್ ಪಟೇಲ್ 22 ರನ್, ಶಾರ್ದೂಲ್ ಠಾಕೂರ್ 29 ರನ್ ಗಳಿಸುವ ಮೂಲಕ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಅಂತಿಮವಾಗಿ ಡೆಲ್ಲಿ ಕ್ಯಾಪಿಟಲ್ಸ್ 5 ವಿಕೆಟ್ ನಷ್ಟಕ್ಕೆ 215 ರನ್ ಗಳಿಸಿದರು. ಕೆಕೆಆರ್ ಪರ ಸುನೀಲ್ ನರೇನ್ 2, ಉಮೇಶ್ ಯಾದವ್, ವರುಣ್ ಚಕ್ರವರ್ತಿ ಹಾಗೂ ರಸೆಲ್ ತಲಾ ಒಂದೊಂದು ವಿಕೆಟ್ ಕಬಳಿಸಿದರು.

216 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಕೆಕೆಆರ್ 19.4 ಓವರ್‌ಗಳಲ್ಲಿ 171 ರನ್‌ಗಳಿಗೆ ಆಲೌಟಾಯಿತು. ತಂಡದ ಪರ ನಾಯಕ ಶ್ರೇಯಸ್ ಅಯ್ಯರ್ 54, ನಿತೀಶ್ ರಾಣಾ 30, ಆಂಡ್ರೆ ರಸೆಲ್ 24, ವೆಂಕಟೇಶ್ ಅಯ್ಯರ್ 18, ಸ್ಯಾಮ್ ಬಿಲ್ಲಿಂಗ್ಸ್ 15 ರನ್ ಗಳಿಸಿದ್ದು ಬಿಟ್ಟರೆ ಉಳಿದವರಿಂದ ಬೃಹತ್ ಮೊತ್ತ ದಾಖಲಾಗಲಿಲ್ಲ. ಡೆಲ್ಲಿ ಪರ ಕುಲದೀಪ್ ಯಾದವ್ 4, ಖಲೀಲ್ ಅಹಮದ್ 3, ಶಾರ್ದೂಲಾ ಠಾಕೂರ್ 2, ಲಲಿತ್ ಯಾದವ್ 1 ವಿಕೆಟ್ ಕಬಳಿಸಿದರು. ಕುಮದೀಪ್ ಯಾದವ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಲಖನೌ ವಿರುದ್ಧ ರಾಜಸ್ಥಾನ್‌ಗೆ ರೋಚಕ ಜಯ



ಮುಂಬೈ, ಏ.10– ಶಿಮ್ರಾನ್ ಹೆಟ್ಮೆಯರ್ ಅವರ ಭರ್ಜರಿ ಅರ್ಧಶತಕ ಹಾಗೂ ಯಜುವೇಂದ್ರ ಚಹಲ್ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ರಾಜಸ್ಥಾನ್ ರಾಯಲ್ಸ್ ಲಖನೌ ಸೂಪರ್ ಜೈಂಟ್ಸ್ ವಿರುದ್ಧ 3 ರನ್‌ಗಳ ರೋಚಕ ಜಯ ಸಾಧಿಸಿದೆ.

ಇಲ್ಲಿನ ವಾಂಖೇಡೆ ಮೈದಾನದಲ್ಲಿ ಭಾನುವಾರ ರಾತ್ರಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಗುಜರಾತ್ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 165 ರನ್‌ಗಳ ಸ್ಪರ್ಧಾತ್ಮಕ ಮೊತ್ತ ಪೇರಿಸಿತು. ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಜೋಸ್ ಬಟ್ಲರ್ ಹಾಗೂ ಕನ್ನಡಿಗ ದೇವದತ್ ಪಡಿಕ್ಕಲ್ ಮೊದಲ ವಿಕೆಟ್‌ಗೆ 42 ರನ್ ಜೊತೆಯಾಟವಾಡಿ ಉತ್ತಮ ಆರಂಭ ಒದಗಿಸಿದರು. ಈ ವೇಳೆ 13 ರನ್ ಗಳಿಸಿದ್ದ ಬಟ್ಲರ್ ವಿಕೆಟ್ ಒಪ್ಪಿಸಿದರು. ಇವರ ಹಿಂದೆಯೇ ದೇವದತ್ ಪಡಿಕ್ಕಲ್ 29, ನಾಯಕ ಸಂಜು ಸ್ಯಾಮ್ಸನ್ 13, ವಾಂಡರ್ ಡುಸನ್ 4 ರನ್ ಗಳಿಸಿ ಔಟಾಗುವ ಮೂಲಕ ಪೆವಿಲಿಯನ್ ಪರೇಡ್ ನಡೆಸಿದರು. ಈ ವೇಳೆ ಒಂದಾದ ಶಿಮ್ರಾನ್ ಹೆಟ್ಮೆಯರ್ ಹಾಗೂ ರವಿಚಂದ್ರನ್ ಅಶ್ವಿನ್ 68 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡದ ಸ್ಪರ್ಧಾತ್ಮಕ ಮೊತ್ತಕ್ಕೆ ಕಾರಣರಾದರು. ರಾಜಸ್ಥಾನ್ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಹೆಟ್ಮೆಯರ್ 6 ಸಿಕ್ಸರ್, 1 ಬೌಂಡರಿ ಒಳಗೊಂಡ 59 ರನ್ ಗಳಿಸಿ ಅಜೇಯರಾಗಿ ಉಳಿದರು. ಉಳಿದಂತೆ ಅಶ್ವಿನ್ 29, ರಿಯಾನ್ ಪರಾಗ್ 2 ರನ್ ಗಳಿಸಿದರು. ಲಖನೌ ಪರ ಜೇಸನ್ ಹೋಲ್ಡರ್, ಕೆ.ಗೌತಮ್ ತಲಾ 2, ಆವೇಶ್ ಖಾನ್ 1 ವಿಕೆಟ್ ಪಡೆದರು.

166 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಲಖನೌ ತಂಡದ ಮೊತ್ತ 14 ರನ್ ಆಗುವಷ್ಟರಲ್ಲಿ ಪ್ರಮುಖ 3 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಈ ವೇಳೆ ಒಂದಾದ ಕ್ವಿಂಟನ್ ಡಿಕಾಕ್ ಹಾಗೂ ದೀಪಕ್ ಹೂಡಾ 38 ರನ್ ಕಾಣಿಕೆ ನೀಡಿದರಾದರೂ 25ರನ್ ಗಳಿಸಿದ್ದ ಹೂಡಾ ವಿಕೆಟ್ ಒಪ್ಪಿಸಿದರು. ನಂತರ ಬಂದ ಆಯುಷ್ ಬದೋನಿ 5 ರನ್ ಗಳಿಸಿ ನಿರ್ಗಮಿಸಿದರು. ಮತ್ತೊಂದೆಡೆ ತಾಳ್ಮೆಯ ಬ್ಯಾಟಿಂಗ್ ಮಾಡಿದ ಡಿಕಾಕ್ ಕೂಡ 39 ರನ್ ಗಳಿಸಿದರು. ಅಂತಿಮ ಓವರ್‌ಗಳಲ್ಲಿ ಮಾರ್ಕಸ್ ಸ್ಟೋಯಿನಿಸ್ ಬಿರುಸಿನ 38 ರನ್ ಗಳಿಸಿದರಾದರೂ ತಂಡವನ್ನು ಗೆಲುವಿನ ದಡ ಮುಟ್ಟಿಸಲು ಸಾಧ್ಯವಾಗಲಿಲ್ಲ. ಉಳಿದಂತೆ ಕ್ರುನಾಲ್ ಪಾಂಡ್ಯ 22, ಚಮೀರಾ 13 ರನ್ ಗಳಿಸಿದರು. ಅಂತಿಮ ವಾಗಿ ಲಖನೌ ಸೂಪರ್ ಜೈಂಟ್ಸ್ ನಿಗದಿತ 20 ಓವರ್ ಗಳಲ್ಲಿ 8 ವಿಕೆಟ್ ನಷ್ಟಕ್ಕೆ 162 ರನ್ ಗಳಿಸಲಷ್ಟೇ ಶಕ್ತವಾಗಿ 3 ರನ್‌ನಿಂದ ಸೋಲು ಅನುಭವಿಸಿತು. ರಾಜಸ್ಥಾನ್ ಪರ ಯಜುವೇಂದ್ರ ಚಹಲ್ 4, ಟ್ರೆಂಟ್ ಬೌಲ್ಟ್ 2, ಪ್ರಸಿದ್ಧ ಕೃಷ್ಣ, ಕುಲದೀಪ್ ಸೇನ್ ತಲಾ ಒಂದೊಂದು ವಿಕೆಟ್ ಪಡೆದರು. ಯಜುವೇಂದ್ರ ಚಹಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಅನುಶ್ರೀ ಕುಟುಂಬಕ್ಕೆ ಪರಿಹಾರ ಧನ ವಿತರಣೆ



ತಿ.ನರಸೀಪುರ, ಏ.10(ಎಸ್‌ಕೆ)– ಸರ್ಕಾರದ ಬೇಜವಾಬ್ದಾರಿ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯದಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ವೇಳೆ ಪರೀಕ್ಷಾ ಕೇಂದ್ರ ಅದಲು ಬದಲಾಗಿದ್ದರಿಂದ ವಿಚಲಿತಳಾಗಿ ಹೃದಯಾಘಾತದಿಂದ ಮೃತಪಟ್ಟ ವಿದ್ಯಾರ್ಥಿನಿ ಅನುಶ್ರೀ ಕುಟುಂಬಕ್ಕೆ ಸರ್ಕಾರ ಹೆಚ್ಚಿನ ಪರಿಹಾರ ನೀಡುತ್ತದೆ ಎಂಬ ನಿರೀಕ್ಷೆ ಕೊನೆಗೂ ಸುಳ್ಳಾಗಿದೆ. ಪ್ರಕರಣವನ್ನು ವಿಶೇಷವಾಗಿ ಪರಿಗಣಿಸದ ರಾಜ್ಯ ಸರ್ಕಾರದ ವಿರುದ್ಧ ದಲಿತ ಸಂಘರ್ಷ ಸಮಿತಿ ಹೋರಾಟ ಅನಿವಾರ್ಯ ಎಂದು ಜಿಲ್ಲಾ ಸಂಚಾಲಕ ಆಲಗೂಡು ಶಿವಕುಮಾರ್ ಹೇಳಿದರು. ತಾಲೂಕಿನ ಅಕ್ಕೂರು ಗ್ರಾಮದಲ್ಲಿ ಪರೀಕ್ಷೆ ವೇಳೆ ಮೃತಪಟ್ಟ ಮಾದಾಪುರ ಪ್ರೌಢಶಾಲೆ ವಿದ್ಯಾರ್ಥಿನಿ ಅನುಶ್ರೀ ಕುಟುಂಬಕ್ಕೆ ಶಿಕ್ಷಕರು ವೈಯಕ್ತಿಕವಾಗಿ 50,000 ರೂ. ನೆರವಿನ ಹಣ ವಿತರಿಸಿದ ಬಳಿಕ ಮಾತನಾಡಿದ ಅವರು, ಕೋಮು ಸಂಘರ್ಷದ ಬೀದಿ ಕಾಳಗದಲ್ಲಿ ಮೃತಪಟ್ಟ ಪುಡಿ ರೌಡಿಗಳಿಗೆ 25 ಲಕ್ಷ ರೂ. ಪರಿಹಾರ ನೀಡುವ ಸರ್ಕಾರ ಬಡವರ ಮನೆ ಹೆಣ್ಣು ಮಗಳು ಸರ್ಕಾರದ ಬೇಜವಾಬ್ದಾರಿಯಿಂದ ಮೃತಪಟ್ಟರೂ ಕನಿಷ್ಠ ಪರಿಹಾರ ನೀಡದೆ ತಾತ್ಸಾರ ಧೋರಣೆ ಅನುಸರಿಸಿದೆ ಎಂದರು.

ಹಿರಿಯ ಮಗಳನ್ನು ಕಳೆದುಕೊಂಡು ದುಃಖದಲ್ಲಿರುವ ಕುಟುಂಬಕ್ಕೆ ಧೈರ್ಯ ತುಂಬಲು ಸರ್ಕಾರಿ ನೌಕರರಾಗಿರುವ ಶಿಕ್ಷಕರ ಹಾಗೂ ಸಾಮಾಜಿಕ ಕಳಕಳಿಯುಳ್ಳ ಸಂಘಟನೆಗಳ ಮುಖಂಡರು ವೈಯಕ್ತಿಕವಾಗಿ ಹಾಗೂ ದಾನಿಗಳ ನೆರವನ್ನು ನೀಡಿ ಮಾನವೀಯತೆ ಮೆರೆದಿದ್ದಾರೆ. ದಸಂಸ ಸಂಘಟನೆಯೂ ಕೂಡ ಕುಟುಂಬದ ಪರ ನಿರಂತರವಾಗಿ ಧ್ವನಿ ಎತ್ತುತ್ತಿದೆ. ಸರ್ಕಾರ ಇನ್ನಾದರೂ ವಿದ್ಯಾರ್ಥಿನಿ ಕುಟುಂಬಕ್ಕೆ ನೆರವು ನೀಡಲು ಮುಂದಾಗಬೇಕು. ತಪ್ಪಿದ್ದಲ್ಲಿ ಶಿಕ್ಷಣ ಇಲಾಖೆ ಉನ್ನತ ಮಟ್ಟದ ಕಚೇರಿಗಳ ಮುಂಭಾಗ ಧರಣಿ ಕೂರಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ದಸಂಸ ಸಂಘಟನಾ ಸಂಚಾಲಕ ಹಿರಿಯೂರು ಸೋಮಣ್ಣ, ಕಿರಗಸೂರು ರಜನಿ, ಮುಖಂಡ ಆಲಗೂಡು ನಾಗರಾಜಮೂರ್ತಿ ಸೇರಿದಂತೆ ನೆರವು ನೀಡಿದ ಶಿಕ್ಷಕರು ಹಾಗೂ ಮೃತಳ ಕುಟುಂಬದ ಸದಸ್ಯರು ಹಾಜರಿದ್ದರು.

6 ಮಂದಿ ಜೂಜುಕೋರರ ಬಂಧನ

ಮಲ್ಕುಂಡಿ, ಏ.10(ಚನ್ನಪ್ಪ)– ಜೂಜಾಡುತ್ತಿದ್ದ 6 ಮಂದಿ ಜೂಜುಕೋರರನ್ನು ಹುಲ್ಲಹಳ್ಳಿ ಠಾಣಾ ಪೊಲೀಸರು ಬಂಧಿಸಿದ್ದಾರೆ. ದುಗ್ಗಹಳ್ಳಿ ಗ್ರಾಮದ ನಿವಾಸಿಗಳಾದ ನಿಂಗರಾಜಪ್ಪ, ಚಿನ್ನಸ್ವಾಮಿ, ಮಹದೇವಸ್ವಾಮಿ, ಗುರುಸಿದ್ದೇಗೌಡ, ಪುಟ್ಟರಾಜು, ರಾಜಶೇಖರ್ ಬಂಧಿತ ಆರೋಪಿಗಳು. ಬಂಧಿತರಿಂದ 15,500 ರೂ. ಹಾಗೂ 8 ಬೈಕ್ ವಶಪಡಿಸಿಕೊಂಡಿದ್ದಾರೆ. ಇವರೆಲ್ಲಾ ಗ್ರಾಮದ ಶಿವನಾಗಪ್ಪ ಎಂಬುವರ ಜಮೀನಿನ ಬಳಿ ಅಂದರ್ ಬಾಹರ್ ಆಡುತ್ತಿದ್ದರು. ಈ ಬಗ್ಗೆ ಬಂದ ಖಚಿತ ಮಾಹಿತಿ ಮೇರೆಗೆ ಡಿವೈಎಸ್ಪಿ ಗೋವಿಂದರಾಜು, ಹುಲ್ಲಹಳ್ಳಿ ಠಾಣೆ ಎಸ್‌ಐ ಬಿ.ಕೆ.ಮಹೇಶ್ ಕುಮಾರ್ ನೇತೃತ್ವದಲ್ಲಿ ದಾಳಿ ನಡೆಸಿದ ಪೊಲೀಸರು ಜೂಜಾಡುತ್ತಿದ್ದ 6 ಮಂದಿ ಆರೋಪಿಗಳನ್ನು ಬಂಧಿಸಿ ಪಣಕ್ಕಿಟ್ಟಿದ್ದ 15,500 ರೂ. ಹಾಗೂ 8 ಬೈಕ್ ವಶಪಡಿಸಿಕೊಂಡು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ದೊಡ್ಡಯ್ಯ, ರಾಜೇಶ್, ನವೀನ, ಶಿವಕುಮಾರ್, ಮಹೇಂದ್ರ ಭಾಗವಹಿಸಿದ್ದರು.

ರಾಜ್ಯಮಟ್ಟದ ರಾಜೀವ್ ಗಾಂಧಿ ಕಪ್ ಫುಟ್‌ಬಾಲ್ ಪಂದ್ಯಾವಳಿ

ಮಹಿಳಾ ವಿಭಾಗದಲ್ಲಿ ತಮಿಳುನಾಡು ಪೊಲೀಸ್ ತಂಡ, ಪುರುಷರ ವಿಭಾಗದಲ್ಲಿ ಬೆಂಗಳೂರು ಆಸ್ಟಿನ್ ಟೌನ್ ತಂಡ ಚಾಂಪಿಯನ್



ರಾಜ್ಯಮಟ್ಟದ ರಾಜೀವ್ ಗಾಂಧಿ ಕಪ್ ಫುಟ್‌ಬಾಲ್ ಪಂದ್ಯಾವಳಿಯ ಮಹಿಳಾ ವಿಭಾಗದಲ್ಲಿ ವಿಜೇತರಾದ ತಮಿಳುನಾಡು ಪೊಲೀಸ್ ತಂಡಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಬಹುಮಾನ ವಿತರಣೆ ಮಾಡಿದರು.



ಪುರುಷರ ವಿಭಾಗದಲ್ಲಿ ವಿಜೇತರಾದ ಬೆಂಗಳೂರಿನ 'ಆಸ್ಟಿನ್ ಟೌನ್' ತಂಡಕ್ಕೆ ಯೂತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡೊನಾಲ್ಡ್ ಎಫ್.ನಿರ್ಮಾಣಿಕ್, ಬಹುಮಾನ ವಿತರಣೆ ಮಾಡಿದರು.

ಮೈಸೂರು. ಏ.10(ಎಂಕೆ)– ನಗರದ ಮಾನಂದವಾಡಿ ರಸ್ತೆಯಲ್ಲಿರುವ ರೈಲ್ವೆ ಮೈದಾನದಲ್ಲಿ ಮೈಸೂರು ಜಿಲ್ಲಾ ಗ್ರಾಮಾಂತರ ಯುವ ಕಾಂಗ್ರೆಸ್ ಸಮಿತಿ ವತಿಯಿಂದ ಆಯೋಜಿಸಿರುವ ರಾಜ್ಯ ಮಟ್ಟದ 'ರಾಜೀವ್ ಗಾಂಧಿ ಕಪ್' ಫುಟ್ ಬಾಲ್ ಪಂದ್ಯಾವಳಿಯಲ್ಲಿ ಮಹಿಳೆಯರ ವಿಭಾಗದಲ್ಲಿ 'ತಮಿಳುನಾಡು ಪೊಲೀಸ್' ತಂಡ ಹಾಗೂ ಪುರುಷರ ವಿಭಾಗದಲ್ಲಿ ಬೆಂಗಳೂರಿನ 'ಆಸ್ಟಿನ್ ಟೌನ್' ತಂಡ ಚಾಂಪಿಯನ್ ಆಗಿ ಹೊರಹೊಮ್ಮಿದವು.

ಮೂರು ದಿನಗಳ ಪಂದ್ಯಾವಳಿಯ ಫೈನಲ್ ಹಣಾಹಣೆಯ ಮಹಿಳೆಯರ ವಿಭಾಗದಲ್ಲಿ ಬೆಂಗಳೂರಿನ ಮಾರ್ಡನ್ ಗರ್ಲ್ಸ್ ತಂಡದ ವಿರುದ್ಧ ತಮಿಳುನಾಡು ಪೊಲೀಸ್ ತಂಡ 7–10 ಪಾಯಿಂಟ್ ಆಧಾರದ ಮೇಲೆ ಜಯಗಳಿಸಿತು. ಮಾರ್ಡನ್ ಗರ್ಲ್ಸ್ ತಂಡ ಮೈತ್ರಿ ಹಾಗೂ ತಮಿಳುನಾಡಿನ ಪೊಲೀಸ್ ತಂಡದ ಗೋಲ್ ಕೀಪರ್ ಶ್ರಾಣ್ಯ ಅವರಿಗೆ ಅತ್ಯುತ್ತಮ ಪ್ರದರ್ಶನ ಬಹುಮಾನ ನೀಡಲಾಯಿತು. ಅಲ್ಲದೆ ರಾಷ್ಟ್ರೀಯ ಯುವತಿಯರ ಫುಟ್ ಬಾಲ್ ತಂಡದಲ್ಲಿ ಆಡುತ್ತಿರುವ ಫುಟ್‌ಬಾಲ್ ಪಟುಗಳಾದ ಸಿವಮ್ರನ್ ಭಾರ್ಗವ್, ತ್ರೀಯಾ ಮೆನನ್ ಹಾಗೂ ಇಂದೂಮತಿ ಅವರನ್ನು ಅಭಿನಂದಿಸಲಾಯಿತು.

ಪುರುಷರ ವಿಭಾಗ: ಬೆಂಗಳೂರು ರೈಲ್ವೇಸ್ ತಂಡ ವಿರುದ್ಧ ನಡೆದ ಫೈನಲ್ ಪಂದ್ಯದಲ್ಲಿ ಬೆಂಗಳೂರಿನ 'ಆಸ್ಟಿನ್ ಟೌನ್' ತಂಡ ವಿಜಯ ಸಾಧಿಸಿತು. ಬಾರೀ ಕುತೂಹಲ ಮೂಡಿಸಿದ್ದ ಫೈನಲ್‌ನಲ್ಲಿ 2–4 ಗೋಲುಗಳ ಅಂತರದಲ್ಲಿ ಬೆಂಗಳೂರು 'ಆಸ್ಟಿನ್ ಟೌನ್' ತಂಡ ಚಾಂಪಿಯನ್ ಆಯಿತು.

ಇದಕ್ಕೂ ಮುನ್ನ ಸೆಮಿಫೈನಲ್ ತಂಡಕ್ಕೆ ಚಾಲನೆ ನೀಡಿ, ವಿಜೇತ ಮಹಿಳಾ ತಂಡಕ್ಕೆ ಬಹುಮಾನ ವಿತರಣೆ ಮಾಡಿದ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ ಮಾತನಾಡಿ, ಮೊದಲ ಬಾರಿಗೆ ಮೈಸೂರಿನಲ್ಲಿ ಮೈಸೂರು ಜಿಲ್ಲಾ ಯೂತ್ ಕಾಂಗ್ರೆಸ್ ವತಿಯಿಂದ ರಾಜ್ಯಮಟ್ಟದ ಫುಟ್‌ಬಾಲ್ ಪಂದ್ಯಾವಳಿಯನ್ನು ಆಯೋಜಿಸಲಾಗಿದೆ. ಫುಟ್‌ಬಾಲ್ ಪ್ರಪಂಚದಲ್ಲಿಯೇ ಅತ್ಯಂತ ಜನಪ್ರಿಯ ಕ್ರೀಡೆಯಾಗಿದೆ. ದೇಶದ ಹಲವು ರಾಜ್ಯಗಳಿಂದ ಆಗಮಿಸಿ ಭಾಗವಹಿಸಿರುವುದು ಪ್ರಶಂಸನೀಯ. ಅದರಲ್ಲೂ ಹೆಣ್ಣು ಮಕ್ಕಳು ಭಾಗವಹಿಸಿರುವ ವಿಶೇಷವಾಗಿದೆ. ಯೂತ್ ಕಾಂಗ್ರೆಸ್ ಸಂಘಟನೆಯ ಪ್ರತೀಕವಾಗಿದ್ದು, ಕಲೆ, ಸಾಂಸ್ಕೃತಿ ಹಾಗೂ ಕ್ರೀಡೆಗೆ ಹೆಚ್ಚಿನ ಆದ್ಯತೆ ನೀಡಲಿದೆ. ಪಂದ್ಯಾವಳಿಯಲ್ಲಿ ಭಾಗವಹಿಸಿ ವಿಜೇತರಾದ ತಂಡಗಳಿಗೆ ಶುಭ ಕೋರಿದರು. ಕಾಂಗ್ರೆಸ್ ಜಿಲ್ಲಾಧ್ಯಕ್ಷ ಬಿ.ಜೆ.ವಿಜಯ್‌ಕುಮಾರ್, ಮುಖಂಡ ಪ್ರದೀಪ್, ಯೂತ್ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡೊನಾಲ್ಡ್ ಎಫ್.ನಿರ್ಮಾಣಿಕ್, ಯುವ ಕಾಂಗ್ರೆಸ್ ಮುಖಂಡರಾದ ದೀಪಕ್ ಶಿವಣ್ಣ, ಅಮ್ಜದ್ ಖಾನ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ತಾಲೂಕು ಭೂ ನ್ಯಾಯ ಮಂಡಳಿಗೆ ನಾಮನಿರ್ದೇಶಿತ ಸದಸ್ಯರಾಗಿ ನೇಮಕವಾದ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಪದಾಧಿಕಾರಿಗಳಾದ ಗೋಪಾಲ್ ಗೌಡ, ಈರಪ್ಪ ಹಾಗೂ ಶ್ರೀಕಂಠ ಅವರನ್ನು ಬಿಜೆಪಿ ಚಾಮುಂಡೇಶ್ವರಿ ಕ್ಷೇತ್ರದ ನಿಕಟಪೂರ್ವ ಅಧ್ಯಕ್ಷ ಎನ್.ಅರುಣ್ ಕುಮಾರ್ ಗೌಡ, ಕ್ಷೇತ್ರದ ಅಧ್ಯಕ್ಷ ಗೆಜ್ಜಗಳ್ಳಿ ಮಹೇಶ್, ಮುಖಂಡರಾದ ಪೈಲ್ವಾನ್ ರವಿ, ಸೋಮಶೇಖರ್, ವಿಜಯ್ ಗೌಡ, ಕಿಟ್ಟಿ ಮತ್ತಿತರರು ಅಭಿನಂದಿಸಿದರು.



ಡಾ.ಬಿ.ಆರ್.ಅಂಬೇಡ್ಕರ್ ಅವರ ಜನ್ಮದಿನ(ಏ.14)ದ ಪ್ರಯುಕ್ತ ಬಿಜೆಪಿ ನರಸಿಂಹರಾಜ ಕ್ಷೇತ್ರ ಓಬಿಸಿ ಮೋರ್ಚಾ ವತಿಯಿಂದ ಶನಿವಾರ ಸಿದ್ಧಪ್ಪಾಜಿ ಹಾಗೂ ಸುಬ್ರಹ್ಮಣ್ಯೇಶ್ವರ ದೇವಸ್ಥಾನ ಆವರಣ ಹಾಗೂ ಉದ್ಯಾನದಲ್ಲಿ ಸ್ವಚ್ಛತಾ ಕಾರ್ಯ ಕೈಗೊಳ್ಳಲಾಗಿತ್ತು. ಮಾಜಿ ಮೇಯರ್ ಸಂದೇಶ ಸ್ವಾಮಿ, ಬಿಜೆಪಿ ನಗರ ಪ್ರಧಾನ ಕಾರ್ಯದರ್ಶಿ ಗಿರಿಧರ್, ಓಬಿಸಿ ಘಟಕದ ಅಧ್ಯಕ್ಷ ಜೋಗಿ ಮಂಜು, ಮುಖಂಡರಾದ ಸು. ಮುರುಳಿ, ಲೋಲಪ್ಪ, ಮಣಿರತ್ನಂ, ಕ್ಷೇತ್ರ ಪ್ರಧಾನ ಕಾರ್ಯದರ್ಶಿ ಸ್ವಾಮಿ, ನಾಗೇಶ್, ಬಿ.ವಿಜಯ್, ಕೃಷ್ಣಮೂರ್ತಿ ರಾವತ್, ಸೂರಜ್, ಅಚ್ಚಯ್ಯ, ಸತೀಶ್, ಭರಣಿ, ಭವಾನಿ, ನಾಗೇಂದ್ರ, ವಿನಯ್, ಮಹಾದೇವ, ಮಹಾಲಕ್ಷ್ಮಿ, ಗಿರೀಶ್, ಗಣೇಶ್, ಮಂಜು ಮತ್ತಿತರರು ಭಾಗವಹಿಸಿದ್ದರು.

ಸಿನಿಮಾ ಟಿಕೆಟ್ ದರ ನಿಯಂತ್ರಣ ಅತ್ಯಗತ್ಯ



ಮೈಸೂರು, ಏ.10– ಸಿನಿಮಾ ವೀಕ್ಷಣೆ ದುಬಾರಿಯಾಗಿದ್ದು, ಟಿಕೆಟ್ ದರದಲ್ಲಿ ನಿಯಂತ್ರಣ ಅಗತ್ಯವಾಗಿದೆ ಎಂದು ನಿರ್ಮಾಪಕರೂ ಆದ ಮಾಜಿ ಮೇಯರ್ ಸಂದೇಶ್ ಸ್ವಾಮಿ ಅಭಿಪ್ರಾಯಿಸಿದ್ದಾರೆ.

ರಾಕಿಂಗ್ ಸ್ಟಾರ್ ಅಭಿನಯದ ಬಹುನಿರೀಕ್ಷಿತ ಚಿತ್ರ 'ಕೆಜಿಎಫ್–2' ಏ.14ರಂದು ರಾಜ್ಯದಲ್ಲಿ ಬಿಡುಗಡೆಯಾಗುತ್ತಿದ್ದು, ಈಗಾಗಲೇ ಮುಂಗಡ ಟಿಕೆಟ್ ಕಾಯ್ದಿರಿಸಲಾಗಿದೆ. ಮೈಸೂರಿನ ಮಲ್ಟಿಪ್ಲೆಕ್ಸ್‌ವೊಂದರಲ್ಲಿ 680 ರೂ. ಹಾಗೂ 350 ರೂ. ಟಿಕೆಟ್ ದರ ನಿಗದಿಪಡಿಸಿರುವುದು ಗಮನಕ್ಕೆ ಬಂದಿದೆ. ಟಿಕೆಟ್ ದರ ಹೀಗೆ ಭಾರೀ ಪ್ರಮಾಣದಲ್ಲಿ ಏರಿಕೆಯಾಗಿರುವುದು ಆತಂಕಕಾರಿ ಬೆಳವಣಿಗೆ. ಕೋವಿಡ್ ಪರಿಣಾಮ ಬಹುತೇಕ ಸಿಂಗಲ್ ಸ್ಕ್ರೀನ್ ಚಿತ್ರಮಂದಿರಗಳಿಗೆ ಬೀಗ ಬಿದ್ದಿದೆ. ಅನಿವಾರ್ಯವಾಗಿ ಮಲ್ಟಿಪ್ಲೆಕ್ಸ್‌ಗಳಲ್ಲಿ ಸಿನಿಮಾ ನೋಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಿರುವಾಗ ಟಿಕೆಟ್ ದರ ಹೆಚ್ಚಳ ಸರಿಯಲ್ಲ ಎಂದು ತಿಳಿಸಿದ್ದಾರೆ.

ಚಿತ್ರ ನಿರ್ಮಾಣ ಹಾಗೂ ಬಿಡುಗಡೆ ಪ್ರಕ್ರಿಯೆಯಲ್ಲಿನ ವೆಚ್ಚ ಹೆಚ್ಚಾಗಿರುವುದು ನಿಜ. ಆದರೆ ಏಕಾಏಕಿ ಟಿಕೆಟ್ ದರವನ್ನು ಈ ಪ್ರಮಾಣದಲ್ಲಿ ಏರಿಕೆ ಮಾಡುವುದು ಸರಿಯಲ್ಲ. ಚಿತ್ರಮಂದಿರಕ್ಕೆ ಬರುವವರ ಸಂಖ್ಯೆ ಕಡಿಮೆಯಾಗುತ್ತದೆ. ತಮ್ಮ ನೆಚ್ಚಿನ ನಾಯಕನ ಚಿತ್ರಕ್ಕಾಗಿ ಕಾಯುವಂತಹ ಅಭಿಮಾನಿಗಳಿಗೂ ನಿರಾಸೆಯಾಗುತ್ತದೆ. ಇಷ್ಟೊಂದು ಹಣ ನೀಡಿ ಸಿನಿಮಾ ನೋಡಲಾಗದೆ ಆ ಬಗ್ಗೆ ಆಸಕ್ತಿಯನ್ನೇ ಕಳೆದುಕೊಳ್ಳಬಹುದು. ಸಿನಿಮಾ ಬಜೆಟ್ ಆಧಾರದಲ್ಲಿ ಟಿಕೆಟ್ ನಿಗದಿ ಮಾಡಿದರೆ ಅದರಿಂದ ಜನರಿಗೆ ಬರೆ ಬೀಳುತ್ತದೆ. ಅಂತಿಮವಾಗಿ ಚಿತ್ರೋದ್ಯಮಕ್ಕೆ ಭಾರೀ ಪೆಟ್ಟು ಬೀಳುತ್ತದೆ ಎಂದು ಹೇಳಿದ್ದಾರೆ. ಸಿನಿಮಾ ಮನೋರಂಜನೆ ಜೊತೆಗೆ ಸಾಮಾಜಿಕ ಜಾಗೃತಿ ಮೂಡಿಸುವ ಒಂದು ಪ್ರಬಲ ಮಾಧ್ಯಮ. ಆದರೆ ಇಂದಿನ ಪರಿಸ್ಥಿತಿಯಲ್ಲಿ ಉದ್ಯಮ ಉಳಿಸಿಕೊಳ್ಳುವುದು ದೊಡ್ಡ ಸವಾಲಾಗಿದೆ. ಪ್ರೇಕ್ಷಕರಲ್ಲಿ ಸಿನಿಮಾ ನೋಡುವ ಆಸಕ್ತಿ ಉಳಿಸುವ ನಿಟ್ಟಿನಲ್ಲೂ ಚಿಂತನೆ ನಡೆಯಬೇಕು. ಪೈರಸಿ ಭೂತದ ನಡುವೆ ಪ್ರೇಕ್ಷಕರನ್ನು ಚಿತ್ರಮಂದಿರಗಳಿಗೆ ಕರೆತರುವ ಪ್ರಯತ್ನ ನಡೆಯಬೇಕಿದೆ. ಈ ನಿಟ್ಟಿನಲ್ಲಿ ಸಂಬಂಧಪಟ್ಟವರು ಸಿನಿಮಾ ಟಿಕೆಟ್ ದರ ನಿಯಂತ್ರಣದ ಜೊತೆಗೆ ಸರ್ಕಾರದ ನೆರವು ಪಡೆದುಕೊಳ್ಳುವ ಮಾರ್ಗದಲ್ಲೂ ಪ್ರಯತ್ನ ನಡೆಸಬೇಕೆಂದು ಆಗ್ರಹಿಸಿದ್ದಾರೆ.

'ಜಿನಭಜನಾ ಸೀಸನ್–5' ಸ್ಪರ್ಧೆಗೆ ತೆರೆ

300ಕ್ಕೂ ಹೆಚ್ಚು ಭಜನಾ ತಂಡಗಳು ಭಾಗಿ



ಮೈಸೂರು. ಏ.10(ಎಂಕೆ)– ನಗರದ ಕಲಾಮಂದಿರದಲ್ಲಿ ಭಾರತೀಯ ಜೈನ್ ಮಿಲನ್, ವಲಯ–8ರ ವತಿಯಿಂದ ಆಯೋಜಿಸಿದ್ದ ಎರಡು ದಿನಗಳ 'ಜಿನಭಜನಾ ಸೀಸನ್–5' ಸ್ಪರ್ಧಾ ಕಾರ್ಯಕ್ರಮ ಭಕ್ತಿ–ಭಾವದೊಂದಿಗೆ ಸಂಪನ್ನಗೊಂಡಿತು.

> ಮೈಸೂರಿನಲ್ಲಿ ಜೈನ್ ಸಮುದಾಯದ ಬಹಳ ದೊಡ್ಡ ವರ್ಗವಿದೆ. ರಾಷ್ಟ್ರೀಯತೆ ವಿಚಾರ ಬಂದಾಗ ಮೊದಲು ಬೆಂಬಲ ನೀಡುವ ಪ್ರಜ್ಞಾವಂತರ ಸಮಾಜ ಇದಾಗಿದೆ. ಧರ್ಮಸ್ಥಳದಲ್ಲಿ ದೊಡ್ಡ ಪ್ರಮಾಣದಲ್ಲಿ ಬೆಳೆದಿರುವ ಶಿಕ್ಷಣ ಸಂಸ್ಥೆಗಳು ಜೈನ್ ಸಮುದಾಯದ ಕಳಶ ಪ್ರಾಯದಂತಿವೆ.
> – ಪ್ರತಾಪ್ ಸಿಂಹ, ಸಂಸದ

ಉಲ್ಲಾಸ, ಉತ್ಸಾಹ ಹಾಗೂ ಉತ್ಸವ ಶೀರ್ಷಿಕೆಯೊಂದಿಗೆ ನಡೆದ 'ಜಿನಭಜನಾ' ಸ್ಪರ್ಧೆಯಲ್ಲಿ ರಾಜ್ಯ ವಿವಿಧೆಡೆಯಿಂದ 300ಕ್ಕೂ ಹೆಚ್ಚು ಭಜನಾ ತಂಡಗಳು ಭಾಗವಹಿಸಿದ್ದವು. ಅಂತಿಮ ಸುತ್ತಿನಲ್ಲಿದ್ದ 13 ತಂಡಗಳ ಪೈಕಿ ಬೆಳಗಾವಿಯ 'ಧಾರಣಿ' ತಂಡ ಪ್ರಥಮ(35 ಸಾವಿರ), ಹುಬ್ಬಳ್ಳಿಯ 'ದಿವ್ಯಧ್ವನಿ' ತಂಡ ದ್ವಿತೀಯ(25 ಸಾವಿರ) ಹಾಗೂ ಬೆಂಗಳೂರಿನ 'ಸ್ವಾಭಿಷೇಕ' ತಂಡ ತೃತೀಯ(15 ಸಾವಿರ) ಬಹುಮಾನ ಪಡೆದುಕೊಂಡವು. ಜಿನಾನುಗ್ರಹ ಬಹುಮಾನಕ್ಕೆ ಆಯ್ಕೆಯಾದ 17 ತಂಡಗಳಿಗೆ ತಲಾ ತಂಡಕ್ಕೆ 5 ಸಾವಿರ ರೂ. ಹಾಗೂ ಭಾಗವಹಿಸಿದ ಉಳಿದ ತಂಡಗಳಿಗೆ 3 ಸಾವಿರ ರೂ. ನಗದು ಬಹುಮಾನ ನೀಡಲಾಯಿತು.

ಇದಕ್ಕೂ ಮುನ್ನ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದ ಕನ್ನಡ ಚಲನಚಿತ್ರ ನಟ ಶ್ರೀಮುರಳಿ ಮಾತನಾಡಿ, ನಮ್ಮಲ್ಲಿರುವ ಪ್ರತಿಭೆಯನ್ನು ವ್ಯಕ್ತಪಡಿಸಲು ವೇದಿಕೆಗಳು ಸಿಗುವುದೇ ಬಹಳ ಅಪರೂಪ. ಅದರಲ್ಲಿ ಇಂತಹ ದೊಡ್ಡ ವೇದಿಕೆಯನ್ನು ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರಲ್ಲದೆ, 'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಹಾಡನ್ನು ಹಾಡಿ ನೆರೆದಿದ್ದವರನ್ನು ರಂಜಿಸಿದರು.

ನಟಿ ಪ್ರೇಮಾ ಮಾತನಾಡಿ, ಭಜನಾ ಕಾರ್ಯಕ್ರಮದಲ್ಲಿ 300ಕ್ಕೂ ಹೆಚ್ಚು ತಂಡಗಳು ಭಾಗವಹಿಸುವುದೇ ವಿಶೇಷವಾಗಿದ್ದು, ರಾಜ್ಯ, ರಾಷ್ಟ್ರಮಟ್ಟದಲ್ಲಿ ಹೆಸರು ಮಾಡುವಂತಾಗಲಿ ಎಂದು ಶುಭ ಕೋರಿದರು. ಬಳಿಕ ಬಂಗಾರದ ಮನುಷ್ಯ ಚಿತ್ರದ 'ಬಾಳ ಬಂಗಾರ ನೀನು, ಹಣೆಯಾ ಸಿಂಗಾರ ನೀನು' ಹಾಡನ್ನು ಹಾಡಿ ಚಪ್ಪಾಳೆ ಗಿಟ್ಟಿಸಿದರು.

ನಂತರ 'ಜಿನಭಜನಾ ಸೀಸನ್–5' ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು. ಭಾರತೀಯ ಜೈನ್ ಮಿಲನ್ ಕಾರ್ಯಾಧ್ಯಕ್ಷ ಧರ್ಮಸ್ಥಳ ಸುರೇಂದ್ರ ಕುಮಾರ್, ಅನಿತಾ ಸುರೇಂದ್ರ ಕುಮಾರ್, ಭಾರತೀಯ ಜೈನ್ ಮಿಲನ್, ವಲಯ–8ರ ಅಧ್ಯಕ್ಷ ಪುಷ್ಪರಾಜ್ ಜೈನ್, ಕಾರ್ಯದರ್ಶಿ ಎಂ.ರಾಜೇಶ್, ಸುಪ್ರಿಯಾ ಹರ್ಷೇಂದ್ರ ಕುಮಾರ್, ಶ್ರದ್ಧಾ, ಆನಂದ್ ಪಂಡಿತ್ ಮತ್ತಿತರರು ಉಪಸ್ಥಿತರಿದ್ದರು.

ಕೆಎಂಎಫ್‌ಗೆ ಮತ್ತೊಂದು ರಾಷ್ಟ್ರೀಯ ಪ್ರಶಸ್ತಿ: ಅಮಿತ್ ಶಾರಿಂದ ಪ್ರದಾನ



ಬೆಂಗಳೂರು, ಏ. 10– ದೇಶದ ಪ್ರತಿಷ್ಠಿತ ಸಹಕಾರಿ ಸಂಸ್ಥೆಯಾಗಿರುವ ರಾಷ್ಟ್ರೀಯ ಸಹಕಾರಿ ಹೈನುಗಾರಿಕೆ ಮಹಾಮಂಡಲ (ಎನ್‌ಸಿಡಿಎಫ್‌ಐ)ವು ಸುವರ್ಣ ಮಹೋತ್ಸವ ಆಚರಿಸಿಕೊಳ್ಳುತ್ತಿರುವ ಸು–ಸಂದರ್ಭದಲ್ಲಿ ಹಾಲು ಮತ್ತು ಹಾಲಿನ ಉತ್ಪಾದನೆ ಕ್ಷೇತ್ರದಲ್ಲಿ ಸಲ್ಲಿಸಿದ ಗಣನೀಯ ಸೇವೆಯನ್ನು ಗುರುತಿಸಿ 'ಕೆಎಂಎಫ್'ಗೆ ಪ್ರಶಸ್ತಿಯ ಭಾಗ್ಯ ಒಲಿದು ಬಂದಿದೆ.

ಇಂದು ಗುಜರಾತ್‌ನ ಗಾಂಧಿನಗರದಲ್ಲಿ ಎನ್‌ಸಿಡಿಎಫ್‌ಐ ಸುವರ್ಣ ಮಹೋತ್ಸವ ಸಮಾರಂಭದಲ್ಲಿ ಕೇಂದ್ರ ಗೃಹ ಹಾಗೂ ಸಹಕಾರ ಸಚಿವ ಅಮಿತ್ ಷಾ ಅವರು ಕೆಎಂಎಫ್ ಅಧ್ಯಕ್ಷ ಹಾಗೂ ಅರಭಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಕೇಂದ್ರ ಸಚಿವ ಅಮಿತ್ ಶಾ, ದೇಶದಲ್ಲೀಗ ಅಮೂಲ್ ಸಂಸ್ಥೆ ಮೊದಲ ಸ್ಥಾನದಲ್ಲಿದೆ. ನಂತರದಲ್ಲಿ ಕರ್ನಾಟಕದ ಕೆಎಂಎಫ್ ಎರಡನೇ ಸ್ಥಾನವನ್ನು ಅಲಂಕರಿಸಿದೆ. ಕರ್ನಾಟಕವಲ್ಲದೇ ನೆರೆಯ ಬಹುತೇಕ ರಾಜ್ಯಗಳಲ್ಲಿಯೂ 'ನಂದಿನಿ' ಬ್ರಾಂಡ್ ಹೆಸರಿನಲ್ಲಿ ಹಾಲು ಮತ್ತು ಹಾಲಿನ ಉತ್ಪಾದನೆಗಳನ್ನು ರೈತ ಸಮುದಾಯಕ್ಕೆ ನೀಡುತ್ತಿದೆ ಎಂದರು.

ಈ ಮೂಲಕ ಹೈನು ಉದ್ಯಮ ಬೆಳೆಯಲು ಈ ಸಂಸ್ಥೆಯು ಹೆಚ್ಚು ಸಹಕಾರಿಯಾಗಿದೆ. ತಮಿಳುನಾಡಿನಲ್ಲಿ ಸಹ ಸಹಕಾರಿ ಸಂಘಗಳು ಬೆಳೆಯಬೇಕಾಗಿದೆ ದೇಶದಾದ್ಯಂತ ಹೈನುಗಾರಿಕೆಗೆ ಹೆಚ್ಚಿನ ಒತ್ತು ನೀಡಬೇಕಾಗಿದೆ. ಮಹಿಳೆಯರು ಸಹ ಈ ನಿಟ್ಟಿನಲ್ಲಿ ಮುಂದೆ ಬಂದು ಹೈನುಗಾರಿಕೆಗೆ ಪ್ರೋತ್ಸಾಹಿಸುವ ಕೆಲಸ ನಡೆಯಬೇಕಿದೆ. ಇದರಿಂದ ಹೈನುಗಾರಿಕೆ ಬೆಳೆಯಲು ಸಾಧ್ಯವಾಗುತ್ತದೆ. ಜತೆಗೆ ಆರ್ಥಿಕವಾಗಿ ಸಬಲರಾಗಲು ಅನುಕೂಲವಾಗುತ್ತದೆ ಎಂದರು.